ಸಂಪುಟ: 13 Volume | ಸಂಚಿಕೆ: 330 Issue | ಪುಟಗಳು 08 Pages | ಶುಕ್ರವಾರ 20 ಫೆಬ್ರವರಿ 2026 | ₹6 | PRGINO.120927 (RNINO: KARKAN/2011/48371) | BDR/054/2026-2027 | www.mallammanudi.in | mallammanudi@gmail.com | 9448604450

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ

ಸಂಪಾದಕರು: ರಮೇಶ ರೆಡ್ಡಿ

Mallammanudi Regional News Paper

ಪ್ರಾದೇಶಿಕ ಕನ್ನಡ ದೈನಿಕ

**ಬೆಳಗು**

ಅನುಭವವೊಂದು ಅಮೂಲ್ಯ ಅಪೂರ್ವ ವಜ್ರ. ಅದಕ್ಕಾಗಿ ಎಷ್ಟೋ ಜನರು ಬೆವರು, ರಕ್ತ ಸುರಿಸಿದ್ದಾರೆ.

–ಶೇಕ್ಸ್ ಪಿಯರ್

ಹೊಸ ಸದಸ್ಯತ್ವ ನೀಡಲು ಹೋರಾಟ ಸಮಿತಿ ಆಗ್ರಹ 6

ಶಬ್ಧ ಮಾಲಿನ್ಯ ನಿಯಂತ್ರಣಕ್ಕೆ ಆಗ್ರಹಿಸಿ ಪ್ರತಿಭಟನೆ 7

ಮಠದಿಂದ ನಾಡಿನಲ್ಲೆಡೆ ಬಸವತತ್ವದ ಅರಿವು 8



ವಿಜಯಪುರ ಪೋಲಿಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ ಅವರಿಗೆ ಮಲ್ಲಮ್ಮನುಡಿ ದಿನಪತ್ರಿಕೆ ವಿತರಿಸಲಾಯಿತು.

## ಪ್ರಸನ್ನಾನಂದ ಪುರಿ ಶ್ರೀಗೆ ಲಘು ಹೃದಯಾಘಾತ

• ಮಲ್ಲಮ್ಮ ನುಡಿ ವಾರ್ತೆ ರಾಯಚೂರು

ರಾಜನಹಳ್ಳಿ ಮಹರ್ಷಿ ವಾಲ್ಮೀಕಿ ಗುರುಪೀಠದ ಪೀಠಾಧ್ಯಕ್ಷ ಪ್ರಸನ್ನಾನಂದ ಪುರಿ ಸ್ವಾಮೀಜಿ ಅವರಿಗೆ ಲಘು ಹೃದಯಾಘಾತ ಆಗಿದೆ. ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಹೈದರಾಬಾದ್ನ ಖಾಸಗಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ವಾಲ್ಮೀಕಿ ಸಮುದಾಯದ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ರಾಯಚೂರು ಜಿಲ್ಲೆಗೆ ಆಗಮಿಸಿದ್ದ ಶ್ರೀಗಳು, ಕಳೆದ ರಾತ್ರಿ ಲಿಂಗಸುಗೂರು ತಾಲೂಕಿನ ಹಟ್ಟಿ ಪಟ್ಟಣದಲ್ಲಿ ವಾಸ್ತವ್ಯ ಹೂಡಿದ್ದರು. ಈ ವೇಳೆ ಅವರಿಗೆ ಏಕಾಏಕಿ ಎದೆನೋವು ಕಾಣಿಸಿಕೊಂಡು ತೀವ್ರ ಅಸ್ವಸ್ಥತೆ ಉಂಟಾಯಿತು. ಕೂಡಲೇ ರಾಯಚೂರು ನಗರದ ಖಾಸಗಿ ಆಸ್ಪತ್ರೆಗೆ ದಾಖಲಿಸಿ ಪ್ರಾಥಮಿಕ ಚಿಕಿತ್ಸೆ ನೀಡಲಾಗಿದೆ.



## ಕಾಪಿ ಪೇಸ್ಟ್ ಕೇಂದ್ರ ಸರ್ಕಾರ: ಸಿಎಂ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಗಲ್ಗೋಟಿಯಾಸ್ ವಿಶ್ವವಿದ್ಯಾಲಯದ ರೋಬೋಡಾಗ್ ವಿವಾದದ ನಡುವೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೇಂದ್ರ ಸರ್ಕಾರದ ವಿರುದ್ಧ ತೀವ್ರ ಟೀಕೆ ನಡೆಸಿ, ಎನ್ ಡಿಎಯದ್ದು ಕೇವಲ 'ಕಾಪಿ–ಪೇಸ್ಟ್' ರಾಜಕಾರಣ ಎಂದು ಟೀಕಿಸಿದರು.

ಎಕ್ಸ್ ಪೋಸ್ಟ್ನಲ್ಲಿ ಅವರು, "ಮೊದಲು ಬಿಜೆಪಿಯವರು ಯುಪಿಎ ಯೋಜನೆಗಳು ಮತ್ತು ಕಾಂಗ್ರೆಸ್ ಗ್ಯಾರಂಟಿಗಳನ್ನು ನಕಲಿಸಿ, ಅವನ್ನು ತಮ್ಮದೇ ಮಹಾ ದೃಷ್ಟಿಕೋನವೆಂದು ಮರುಬ್ರ್ಯಾಂಡ್ ಮಾಡಿದರು.



ಈಗ ತಂತ್ರಜ್ಞಾನವನ್ನು ಕೂಡ ಕಾಪಿ–ಪೇಸ್ಟ್ ಮಾಡುತ್ತಿದ್ದಾರೆ" ಎಂದು ಹೇಳಿದರು.

ಕೇಂದ್ರ ಸರ್ಕಾರವನ್ನು ಟೀಕಿಸಿದ ಅವರು, ಮೋದಿ ಸರ್ಕಾರವು 'ಮೇಕ್ ಇನ್ ಇಂಡಿಯಾ' ಮೇಲೆ ನಂಬಿಕೆ ಇಡುವುದಿಲ್ಲ; ಬದಲಾಗಿ, "ಅವರು 'ಫೇಕ್ ಇನ್ ಇಂಡಿಯಾ'ಯನ್ನು ನಂಬುತ್ತಾರೆ" ಎಂದು ಬರೆದಿದ್ದಾರೆ. ನಾಯಕ ಹೇಗಿರುತ್ತಾರೆಯೇ ಹಾಗೆಯೇ ಅನುಯಾಯಿ ಎಂದು ಪರೋಕ್ಷವಾಗಿ ಪ್ರಧಾನಿ ಮೋದಿಯನ್ನು ಟೀಕಿಸಿದ್ದಾರೆ.

ಈ ಘಟನೆಯಿಂದ ಭಾರತದ ಪ್ರತಿಷ್ಠೆಗೆ ಧಕ್ಕೆಯಾಗಿದೆ "ಇದೇ ನಿಜಕ್ಕೂ ನಾಚಿಕೆಗೇಡು" ಎಂದರು.

## ರಂಜಾನ್: ಆಹಾರ ಮೇಳ ಬೇಡ

**ಬೆಂಗಳೂರು:** ಫ್ರೇಸರ್ ಟೌನ್ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿನ ಎಂಎಂ ರಸ್ತೆಯಲ್ಲಿ ರಂಜಾನ್ ಆಹಾರ ಮೇಳ ನಡೆಸದಂತೆ ಹೋಟೆಲ್ ಮಾಲೀಕರಿಗೆ ಸ್ಥಳೀಯ ನಿವಾಸಿಗಳು ಎಚ್ಚರಿಕೆ ನೀಡಿದಾರೆ. ರಂಜಾನ್ ಆಹಾರ ಮೇಳದಿಂದ ಸಂಚಾರ ದಟ್ಟಣೆ. ಅವ್ಯವಸ್ಥೆಯ ಜೊತೆಗೆ ಕಾನೂನು ಮತ್ತು ಸುವ್ಯವಸ್ಥೆಯ ಸಮಸ್ಯೆ ಉಂಟಾಗುತ್ತಿದೆ. ಹೀಗಾಗಿ ಈ ರಂಜಾನ್ ಆಹಾರ ಮೇಳವನ್ನು ನಿಲ್ಲಿಸಬೇಕೆಂದು ಸ್ಥಳೀಯ ನಿವಾಸಿಗಳು, ಪುಲಕೇಶಿನಗರ ಶಾಸಕ ಎಸಿ ಶ್ರೀನಿವಾಸ್, ಪಾಲಿಕೆಯ ಅಧಿಕಾರಿಗಳನ್ನು ಭೇಟಿ ಮಾಡಿ ಮನವಿ ಮಾಡಿದ್ದಾರೆ.



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಪುತ್ರಿಯ ನಿಶ್ಚಿತಾರ್ಥ ಸಮಾರಂಭದಲ್ಲಿ ಭಾಗವಹಿಸಿ, ವಧು ವರರನ್ನು ಆಶೀರ್ವದಿಸಿದರು.

## ನಾಲ್ಕು ಗೋಡೆ ನಡುವೆ ಮೈತ್ರಿ

**ಬೆಂಗಳೂರು:** ಬಿಜೆಪಿ–ಜೆಡಿಎಸ್ ಮೈತ್ರಿ ವಿಚಾರ ಚರ್ಚೆ ನಾಲ್ಕು ಗೋಡೆಗಳ ನಡುವೆ ಇರಬೇಕೇ ಹೊರತು ಹಾದಿ–ಬೀದಿಯಲ್ಲಿ ಚರ್ಚೆ ಆಗಬಾರದು ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮೈತ್ರಿ ವಿಚಾರಗಳು ನಾಲ್ಕು ಗೋಡೆಗಳ ಒಳಗೆ ಚರ್ಚೆಯಾಗಬೇಕು. ಹಾದಿ ಬೀದಿಯಲ್ಲಿ ಚರ್ಚಿಸಿ ಇತ್ಯರ್ಥವಾಗಬಾರದು. ಲೋಕಸಭಾ ಚುನಾವಣೆಯಿಂದಲೂ ಎರಡೂ ಪಕ್ಷಗಳ ಮೈತ್ರಿ ಇದೆ. ಅಂದಿನಿಂದಲೂ ನಮ್ಮನ್ನು ಗೌರವದಿಂದ ನೋಡಿಕೊಂಡಿದ್ದಾರೆ ಎಂದಿದ್ದಾರೆ.



# ಕೃತಕ ಬುದ್ಧಿಯ ಕ್ರಾಂತಿ

### ಇಂಡಿಯಾ ಎಐ ಇಂಪ್ಯಾಕ್ಟ್ ಸಮಿಟ್ 2026 ಮೇಳಕ್ಕೆ ಚಾಲನೆ | ಎಐ ತಂತ್ರಜ್ಞಾನದ ಬಗ್ಗೆ ಪ್ರಧಾನಿ ಶ್ಲಾಘನೆ

• ಮಲ್ಲಮ್ಮ ನುಡಿ ವಾರ್ತೆ ದೆಹಲಿ

ಇಲ್ಲಿ ನಡೆದ ಇಂಡಿಯಾ ಎಐ ಇಂಪ್ಯಾಕ್ಟ್ ಸಮಿಟ್ 2026 ಮೇಳಕ್ಕೆ ಇಂದು ಚಾಲನೆ ನೀಡಲಾಗಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಗೂಗಲ್ ಸಿಇಒ ಸುಂದರ್ ಪಿಚೈ, ಓಪನ್ಎಐ ಸಿಇಒ ಸ್ಯಾಮ್ ಆಲ್ಟ್ಮನ್ ಸೇರಿದಂತೆ ಇತರ ತಂತ್ರಜ್ಞಾನ ನಾಯಕರು ಮೇಳಕ್ಕೆ ಕೈಜೋಡಿಸಿದ್ದಾರೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಈ ಬಗ್ಗೆ ಮಾತನಾಡಿ, ಕೃತಕ ಬುದ್ಧಿಮತ್ತೆ (ಎಐ) ಎಲ್ಲರಿಗೂ ಲಭ್ಯವಾಗುವಂತಿರಬೇಕು ಎಂದು ಜನತಂತ್ರೀಕರಣಕ್ಕೆ ಕರೆ ನೀಡಿದ್ದಾರೆ. ಇದೇ ವೇಳೆ ಅವರು ಭಾರತದ ಎಐಗಾಗಿ 'ಮಾನವ್ (ಒಂಓಂಗಿ) ವಿಷನ್' ಅನಾವರಣಗೊಳಿಸಿದ್ದಾರೆ.

**ಎಐ ಕ್ರಾಂತಿಯ ಭಾಗ:** ದೆಹಲಿಯಲ್ಲಿ ನಡೆದ ಇಂಡಿಯಾ ಎಐ ಇಂಪ್ಯಾಕ್ಟ್ ಸಮಿಟ್ನಲ್ಲಿ ಮಾತನಾಡಿದ ಮೋದಿ, ಭಾರತ ಎಐ ಕ್ರಾಂತಿಯ ಭಾಗ ಮಾತ್ರವಲ, ಅದನ್ನು ಮುನ್ನಡೆಸಿ ರೂಪಿಸುತ್ತಿದೆ ಎಂದು ಹೇಳಿದ್ದಾರೆ. ಕೃತಕ ಬುದ್ಧಿಮತ್ತೆ ಮಾನವ ಇತಿಹಾಸದಲ್ಲಿ ಮಹತ್ವದ ಪರಿವರ್ತನೆಯ ಅಧ್ಯಾಯವಾಗಿದೆ ಎಂದಿದ್ದಾರೆ.

**ವಿಶ್ವನಾಯಕರ ಸಮ್ಮುಖ:** ಮಾನವರು ಕೇವಲ ಡೇಟಾ ಪಾಯಿಂಟ್ ಅಥವಾ ಕಚ್ಚಾ ವಸ್ತುವಾಗಬಾರದು. ಅದಕ್ಕಾಗಿ ಎಐಯನ್ನು ಜನತಂತ್ರೀಕರಿಸಬೇಕು. ಭಾರತ ಎಐ ಕ್ರಾಂತಿಯ ಭಾಗ ಮಾತ್ರವಲ್ಲ, ಅದನ್ನು ಮುನ್ನಡೆಸುತ್ತಿದೆ ಮತ್ತು ದಿಕ್ಕು ತೋರಿಸುತ್ತಿದೆ ಎಂದು ವಿಶ್ವ ನಾಯಕರು ಮತ್ತು ಪ್ರಮುಖ ಕಂಪನಿಗಳ ಸಿಇಒಗಳ ಸಮ್ಮುಖದಲ್ಲಿ ತಿಳಿಸಿದ್ದಾರೆ.




### MANAVನ ಪ್ರಮುಖ ಉದ್ದೇಶಗಳೇನು?

- ಕೃತಕ ಬುದ್ಧಿಮತ್ತೆಯ ಅಭಿವೃದ್ಧಿ ನಡೆಯುವಂತೆ ಖಚಿತಪಡಿಸುವುದು.
- ಪಾರದರ್ಶಕ ನಿಯಮಗಳು, ಬಲವಾದ ಮೇಲ್ವಿಚಾರಣೆ ಇರಬೇಕು.
- ರಾಷ್ಟ್ರೀಯ ಸ್ವಾಯತ್ತತೆ: ಡೇಟಾ ಹಕ್ಕು.
- ಸುಲಭ ಲಭ್ಯ, ಸಮಾವೇಶಾತ್ಮಕ ಎಐ ಎಲ್ಲರಿಗೂ ಲಭ್ಯವಾಗುವಂತಿರಬೇಕು.
- ಎಐ ಕಾನೂನುಬದ್ಧವಾಗಿದ್ದು, ಪರಿಶೀಲಿಸಬಹುದಾದಂತಿರಬೇಕು.

### ಸಮಸ್ಯೆಗಳಿಗೆ ಪರಿಹಾರ

ಅದನ್ನು ಜವಾಬ್ದಾರಿಯುತವಾಗಿ ಬಳಸಿದರೆ ಸಂಕೀರ್ಣ ಸಮಸ್ಯೆಗಳಿಗೆ ಪರಿಹಾರ ನೀಡಬಹುದು; ಆದರೆ ಮಾನವಕೇಂದ್ರಿತ ಗುರಿಗಳಿಂದ ದೂರವಾದರೆ ಹಾನಿಕಾರಕವಾಗಬಹುದು. ಕೃತಕ ವಿಷಯಗಳು ಮುಕ್ತ ಸಮಾಜಗಳಲ್ಲಿ ಅಸ್ಥಿರತೆ ಉಂಟುಮಾಡಬಹುದು ಎಂದು ಹೇಳಿ, ನವೀನತೆ ಜೊತೆಗೆ ಸುರಕ್ಷತಾ ಕ್ರಮಗಳ ಅಗತ್ಯವಿದೆ ಎಂದು ಪ್ರಧಾನಿ ಮೋದಿ ಒತ್ತಿಹೇಳಿದ್ದಾರೆ.

### ಯುವ ಜನತೆಗೆ ಎಐ ಇಷ್ಟ

ಈ ಮಾನವ್ ವಿಷನ್ 21ನೇ ಶತಮಾನದ ಎಐ ಆಧಾರಿತ ವಿಶ್ವದಲ್ಲಿ ಮಾನವ ಕಲ್ಯಾಣಕ್ಕೆ ಮಹತ್ವದ ಕೊಂಡಿಯಾಗುತ್ತದೆ. ಎಐಯನ್ನು ಜಾಗತಿಕ ಸಾಮೂಹಿಕ ಸಂಪತ್ತಾಗಿ ಅಭಿವೃದ್ಧಿಪಡಿಸಬೇಕು. ಎಐಗೆ ಮುಕ್ತವಾದ ಅವಕಾಶ ನೀಡಬೇಕು, ಆದರೆ ನಿಯಂತ್ರಣ ಮಾನವರ ಕೈಯಲ್ಲಿರಬೇಕು. ಹೊಸ ತಂತ್ರಜ್ಞಾನಗಳ ಬಗ್ಗೆ ಕೆಲವರಿಗೆ ಆತಂಕವಿದ್ದರೂ, ಯುವಜನತೆ ಎಐಯನ್ನು ಉತ್ಸಾಹದಿಂದ ಸ್ವೀಕರಿಸಿದೆ ಎಂದಿದ್ದಾರೆ ಮೋದಿ.

### ಫ್ರಾನ್ಸ್ ಅಧ್ಯಕ್ಷರಿಂದ ಬಣ್ಣನೆ

ಫ್ರಾನ್ಸ್ ಅಧ್ಯಕ್ಷ ಎಮ್ಮಾನುಯೆಲ್ ಮ್ಯಾಕ್ರೋನ್ ಅವರು ಎಕ್ಸ್ ಖಾತೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ಎಐ ಮೂಲಕ ಸೃಷ್ಟಿಸಲಾದ ಚಿತ್ರವನ್ನು ಹಂಚಿಕೊಂಡಿದ್ದು, ಭಾರತ–ಫ್ರಾನ್ಸ್ ನಡುವಿನ ತಂತ್ರಜ್ಞಾನ ಸಹಕಾರದ ಬಲವಾದ ಸಂಬಂಧವನ್ನು ಅದರಲ್ಲಿ ಉಲ್ಲೇಖಿಸಿದ್ದಾರೆ. ಮ್ಯಾಕ್ರೋನ್ ಅವರು ಇಂಡಿಯಾ ಎಐ ಇಂಪ್ಯಾಕ್ಟ್ ಸಮಿಟ್ 2026ನಲ್ಲಿ ಭಾಗವಹಿಸಲು ಭಾರತಕ್ಕೆ ಆಗಮಿಸಿದ್ದಾರೆ.

## ವಾಹನಕ್ಕೆ ಬೆಂಕಿ: ತಪ್ಪಿದ ಭಾರೀ ದುರಂತ

• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ

ಕೊಪ್ಪಳ ನಗರದ ಹೊಸಪೇಟೆ ರಸ್ತೆಯಲ್ಲಿರುವ ಜಿಯೊ ಪೆಟ್ರೋಲ್ ಬಂಕ್ ಹತ್ತಿರ ಚಲಿಸುತ್ತಿದ್ದ ಒಮಿನಿ ವ್ಯಾನಿನಲ್ಲಿ ಬೆಂಕಿ ಕಾಣಿಸಿಕೊಂಡಿದೆ. ಚಲಿಸುತ್ತಿದ್ದ ವ್ಯಾನಿನಲ್ಲಿ ಬೆಂಕಿ ಕಾಣಿಸಿಕೊಂಡಿದ್ದು, ವಾಹನಕ್ಕೆ ತಗಲಿದ್ದ ಬೆಂಕಿಯನ್ನು ನಂದಿಸಲು ಸಾರ್ವಜನಿಕರು ಪ್ರಯತ್ನ ಪಡುತ್ತಿದ್ದ ವೇಳೆಗೆ ಸರಿಯಾದ ಸಮಯಕ್ಕೆ ಅಗ್ನಿಶಾಮಕದಳದ ವಾಹನ ಆಗಮಿಸಿ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡು ಬೆಂಕಿಯನ್ನು ನಂದಿಸಿದ್ದಾರೆ. ವ್ಯಾನಿನಲ್ಲಿ




ಪ್ರಯಾಣಿಸುತ್ತಿದ್ದ ಮಾಲೀಕರ ಸಮಯ ಪ್ರಜ್ಞೆಯಿಂದ ಭಾರಿ ಅನಾಹುತ ಒಂದು ತಪ್ಪಿದಂತಾಗಿದೆ.

## ಸರಕಾರದಿಂದ ದಲಿತರಿಗೆ ಅನ್ಯಾಯ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ರಾಜ್ಯದ ಕಾಂಗ್ರೆಸ್ ಸರಕಾರವು ದಲಿತರಿಗೆ ಅನ್ಯಾಯ ಮಾಡುತ್ತಿದೆ ಎಂದು ಮಾಜಿ ಉಪಮುಖ್ಯಮಂತ್ರಿ ಗೋವಿಂದ ಕಾರಜೋಳ ಆಕ್ಷೇಪಿಸಿದ್ದಾರೆ.



ರಾಜ್ಯ ಬಿಜೆಪಿ ಕಾರ್ಯಕಾರಿಣಿಯಲ್ಲಿ ಅಂಗೀಕರಿಸಿದ ಖಂಡನಾ ನಿರ್ಣಯ ಕುರಿತು ಅವರು ಮಾಹಿತಿ ನೀಡಿ, ಬಹಳ ಪ್ರಮುಖವಾಗಿ ಅವರು ದಲಿತರಿಗೆ ಮೀಸಲಿಟ್ಟ 39,500 ಕೋಟಿ ರೂಪಾಯಿಯನ್ನು ಗ್ಯಾರಂಟಿ ಮತ್ತು ಅನ್ಯ ಉದ್ದೇಶಕ್ಕೆ ಬಳಸಿಕೊಂಡಿದ್ದಾರೆ. ಇದನ್ನು ಕೂಡಲೇ ಎಸ್ಸಿ, ಎಸ್ಟಿ ಸಮುದಾಯದ ಕಲ್ಯಾಣಕ್ಕೆ ಬಳಸಬೇಕು ಎಂದು ಆಗ್ರಹಿಸಿದ್ದಾರೆ.

ಅಲೆಮಾರಿ ಅಭಿವೃದ್ಧಿ ನಿಗಮಕ್ಕೆ ಅನುದಾನ ಕೊಟ್ಟಿಲ್ಲ. ಸಿದ್ದರಾಮಯ್ಯನವರ ಸರಕಾರದ ವಿರುದ್ಧ ಅವರ ಶಾಸಕರೇ ಬಂಡೇಳುವ ಸ್ಥಿತಿ ನಿರ್ಮಾಣವಾಗಿದೆ ಎಂದು ವಿವರಿಸಿದ್ದಾರೆ.

## ದೇವರಹಿಪ್ಪರಗಿಯಲ್ಲಿ ಬರ್ಬರ ಹತ್ಯೆ

• ಮಲ್ಲಮ್ಮ ನುಡಿ ವಾರ್ತೆ ವಿಜಯಪುರ

ಜಿಲ್ಲೆಯ ದೇವರಹಿಪ್ಪರಗಿ ಪಟ್ಟಣದಲ್ಲಿ ಪತಿ ತನ್ನ ಪತ್ನಿಯನ್ನು ಕೊಲೆ ಮಾಡಿ ಮನೆಯ ಅಂಗಳದಲ್ಲೇ ಹೂತುಹಾಕಿದ್ದ ಘಟನೆ 24 ದಿನಗಳ ಬಳಿಕ ಬೆಳಕಿಗೆ ಬಂದಿದೆ.


ಸರೋಜಿನಿ ರತ್ನಾಕರ (45) ಹತ್ಯೆಯಾದವರು. ಆರೋಪಿ ಪತಿ ಪ್ರಭು ರತ್ನಾಕರ (46) ಬಂಧನಕ್ಕೊಳಗಾಗಿದ್ದಾನೆ.

**ಪೊಲೀಸರ ಮಾಹಿತಿ ಪ್ರಕಾರ:** ಪ್ರಭು ರತ್ನಾಕರ ತನ್ನ ಪತ್ನಿ ಸರೋಜಿನಿ ಹೆಸರಿನಲ್ಲಿ ಹೆಚ್ಚಿನ ಸಾಲ ಮಾಡಿದ್ದ. ಸಾಲದ ವಿಚಾರವಾಗಿ ದಂಪತಿಗಳ ನಡುವೆ ಆಗಾಗ ಜಗಳ ನಡೆಯುತ್ತಿತ್ತು. ಜ.23ರ ರಾತ್ರಿ ನಡೆದ ಜಗಳ ತಾರಕಕ್ಕೇರಿದ್ದು, ಜ.24ರಂದು ಪ್ರಭು ರತ್ನಾಕರ ಪತ್ನಿಯ ತಲೆಗೆ ಹಾರಿಯಿಂದ ಹೊಡೆದು ಹತ್ಯೆ ಮಾಡಿದ್ದ. ಬಳಿಕ ಶವವನ್ನು ಮನೆಯ ಅಂಗಳದಲ್ಲೇ ಹೂತುಹಾಕಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.









**24 ದಿನಗಳ ಬಳಿಕ ಪ್ರಕರಣ ಬಯಲು, ಶವವನ್ನು ಮನೆಯ ಅಂಗಳದಲ್ಲೇ ಹೂತಿದ್ದ ಪತಿ**

ಫೆ. 2ರಂದು ದೇವರಹಿಪ್ಪರಗಿ ಪೊಲೀಸ್ ಠಾಣೆಯಲ್ಲಿ ಪತ್ನಿ ಕಾಣೆಯಾಗಿದ್ದಾಳೆ ಎಂದು ರತ್ನಾಕರನೇ ದೂರು ದಾಖಲಿಸಿದ್ದ. ತನಿಖೆ ಕೈಗೊಂಡ ಪೊಲೀಸರು, ಗಂಡನ ನಡೆ–ನುಡಿಗಳ ಮೇಲೆ ಅನುಮಾನ ವ್ಯಕ್ತಪಡಿಸಿ ವಿಚಾರಣೆ ನಡೆಸಿದಾಗ, ಆತನೇ ಕೊಲೆ ಮಾಡಿರುವುದಾಗಿ ಒಪ್ಪಿಕೊಂಡಿರುವುದು ಬಯಲಾಗಿದೆ. ದೇವರಹಿಪ್ಪರಗಿ ಪೊಲೀಸರು ಶವವನ್ನು ಹೊರತೆಗೆದು ಪರಿಶೀಲನೆ ನಡೆಸುತ್ತಿದ್ದಾರೆ. ಮುಂದಿನ ತನಿಖೆ ಮುಂದುವರಿದಿದೆ.

ಪತ್ರಿಕಾಗೋಷ್ಠಿಯಲ್ಲಿ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ ಪ್ರಕರಣದ ವಿವರಗಳನ್ನು ನೀಡಿದ್ದು, ಪ್ರಭು ತನ್ನ ಸಾಲ ತೀರಿಸಲು ಪತ್ನಿಯ ಚೆಕ್ ನೀಡಿದ್ದ. ಆ ಚೆಕ್ ಬೌನ್ಸ್ ಆಗಿ ಅದರ ಸಂಬಂಧವೂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಸಾಲದ ಒತ್ತಡ ಮತ್ತು ದಾಂಪತ್ಯ ಕಲಹವೇ ಕೊಲೆಗೆ ಕಾರಣವಾಗಿದೆ ಎಂದು ತನಿಖೆಯಲ್ಲಿ ತಿಳಿದುಬಂದಿದೆ ಎಂದು ವಿವರಿಸಿದ್ದಾರೆ.




**ಸಾರಿಗೆ ಮುಷ್ಕರ ಸುಖಾಂತ್ಯವಾಗಿದೆ. ಅವರ ಎಲ್ಲಾ ಬೇಡಿಕೆ ಸರ್ಕಾರ ಈಡೇರಿಸಿದೆ: ಸಚಿವ ರಾಮಲಿಂಗರೆಡ್ಡಿ**

# ಸಂಗೋಳಗಿ: ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ಆಚರಣೆ



• ಮಲ್ಲಮ್ಮ ನುಡಿ ವಾರ್ತೆ ಬೀದರ

ತಾಲ್ಲೂಕಿನ ಸಂಗೋಳಗಿ ಗ್ರಾಮ ಪಂಚಾಯತನಲ್ಲಿ ಇಂದು ಸರಳ ಹಾಗೂ ಅರ್ಥಪೂರ್ಣವಾಗಿ ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ಆಚರಣೆ ಮಾಡಲಾಯಿತು.ಸಂಗೋಳಗಿ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಪೂಜಾಶ್ರೀ ಬಿರಾದಾರ, ಕಾರ್ಯದರ್ಶಿ ಕವಿತಾ,ಚಂದ್ರಶೇಖರ್ ಚನ್ನಶೆಟ್ಟಿ ಸೇರಿ ಛತ್ರಪತಿ ಶಿವಾಜಿ ಮಹಾರಾಜರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಪುಷ್ಪಾರ್ಚನೆ ಮಾಡಿ ನಮನ ಸಲ್ಲಿಸಿದರು.

ನಂತರ ಗ್ರಾಮದ ಹಿರಿಯರು ಹಾಗೂ ಮರಾಠ ಸಮುದಾಯದ ಮುಖಂಡರು ಸೇರಿ ಛತ್ರಪತಿ ಶಿವಾಜಿ ಮಹಾರಾಜರ ವೃತ್ತಕ್ಕೆ ಪೂಜೆ ಸಲ್ಲಿಸಿ ಮಾಲಾರ್ಪಣೆ ಮಾಡುವ ಮೂಲಕ ಜಯಂತಿಯನ್ನು ಆಚರಿಸಿದರು,

ಇದಕ್ಕೆ ಗ್ರಾಮದ ಪ್ರಮುಖರಾದ ಬಾಬುರಾವ್ ಮಳೆಗಾರ, ಭೀಮಣ್ಣ ಗುತ್ತಿ, ಅಶೋಕ್ ಪಾಟೀಲ್, ಪಿಕೆಪಿಎಸ್ ಅಧ್ಯಕ್ಷರಾದ ಶಿವಕುಮಾರ ಹಿಂದಾ,ಉಪಾಧ್ಯಕ್ಷರಾದ ವಿಶ್ವನಾಥ ಮಸ್ತರಿ, ಕನ್ನಡ ಸೇನೆ ಕರ್ನಾಟಕ ಗ್ರಾಮ ಘಟಕದ ಅಧ್ಯಕ್ಷರಾಗಿ ಲಕ್ಷ್ಮಣ ಅಲ್ಲೂರೆ, ನಾಗಶೆಟ್ಟಿ ಸಜ್ಜನಶೆಟ್ಟಿ , ಮಲ್ಲಿಕಾರ್ಜುನ ಹೂಗಾರ,

ಗಣಪತಿ ಜಗದಾಳೆ.ಆನಂದ ಹುಲಾಜಿ, ವೈಜಿನಾಥ ಭೈರಿ, ಸಂತೋಷ್ ಭೋಸೆ,ಬಾಬುರಾವ್ ಮಾಲಿಪಾಟೀಲ್, ಶಂಕರರಾವ್ ಭೈರಿ, ಮಂಗಲಾ ಕೆರೋಬಾ, ಶ್ರೀನಿವಾಸ ಸೋನಿ, ಅಶೋಕ್ ಹೆಗಡೆ ,ಸೇರಿದಂತೆ ಅನೇಕ ಮರಾಠ ಸಮುದಾಯದ ಮುಖಂಡರು ಕೈಜೋಡಿಸಿದರು. ಜಯಂತಿಯಲ್ಲಿ ಗ್ರಾಮದ ಜನರು ಭಾಗವಹಿಸಿದರು

# ಶಿವಾಜಿ ಮಹಾರಾಜರು ಶೌರ್ಯದ ಪ್ರತೀಕರು: ವಡ್ಡನಕೇರೆ

• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

ಛತ್ರಪತಿ ಶಿವಾಜಿ ಮಾಹಾರಾಜರು ಶೌರ್ಯದ ಪ್ರತೀಕರಾಗಿದ್ದರು ಎಂದು ತಹಸೀಲ್ದಾರ ಮಲ್ಲಿಕಾರ್ಜುನ ವಡ್ಡನಕೇರೆ ಪ್ರತಿಪಾದಿಸಿದರು.

ಪಟ್ಟಣದ ಶಿವಾಜಿ ವೃತ್ತದಲ್ಲಿರುವ ಶಿವಾಜಿ ಜಯಂತಿಯಂದು ಛತ್ರಪತಿ ಶಿವಾಜಿ ಮಾಹಾರಾಜರ ಪ್ರತಿಮೆಗೆ ಪೂಜೆ ಸಲ್ಲಿಸಿ ಅವರು ಮಾತನಾಡಿದರು.

ಶಿವಾಜಿ ಮಹಾರಾಜರು ಯಾವುದೇ ಒಂದು ಸಮುದಾಯಕ್ಕೆ ಸಮೀತರಲ್ಲ.ಅವರು ಸರ್ವ ಸಮುದಾಯದ ಸುಧಾರಕರಾಗಿದ್ದರು. ತಾಯಿ ಜೀಜಾಬಾಯಿಯವರ ಕೃಪಾಶೀರ್ವಾದದಿಂದ ಬಾಲ್ಯದಿಂದಲೇ ದಾಸ್ಯಮನೋಬಾವಕ್ಕೆ ಸವಾಲು ಹಾಕಿ ಸ್ವತಂತ್ರ ಜೀವನಕ್ಕೆ ನಾಂದಿ ಹಾಡಿದರು.ಅವರ ಆಡಳಿತ ಕೌಶಲ್ಯ ಇಂದಿಗೂ ಜೀವಂತವಿದ್ದು,ಎಲ್ಲರಿಗೂ ಮಾದರಿಯಾಗಿದೆ.ಅವರತತ್ವಾದರ್ಶಗಳು ನೈಜ ಜೀವನದಲ್ಲಿ ಪ್ರತಿಯೊಬ್ಬರೂ ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಉಪತಹಸೀಲ್ದಾರ ಪಲ್ಲವಿ ಬೆಳಕೆರಿ,ಟಿಪಿಎಸ್ ಇಒ ಸೂರ್ಯಕಾಂತಬಿರಾದಾರ,ಹಿಂ.ಕಲ್ಯಾಣ ಅಧಿಕಾರಿ ವಿಜಯಮಾಲಾ,ಮತ್ತು ಪ್ರಮುಖರಾದ ಕಿಶನರಾವ ಪಾಟೀಲ ಇಂಚೂರಕರ್,ದಯಾನಂದ ಸೂರ್ಯವಂಶಿ,ಬಸವರಾಜ ವಂಕೆ,ಚನ್ನಬಸವಣ್ಣ ಬಳತೆ, ಡಾ.ಗುಂಡೇರಾವಶೆಡೋಳೆ,ದತ್ತುಕುಮಾರ ಮೆಹಕ್ರೆ,ಡಾ.ಉದ್ಧವ ಕನಸೆ,ಪ್ರತಾಪ ಪಾಟೀಲ್,ಕೃಷ್ಣಾಪಾಟೀಲ್ ಸೇರಿದಂತೆ ಅನೇಕರಿದ್ದರು.



# ಛತ್ರಪತಿಯ ಧೈರ್ಯ, ದೇಶಪ್ರೇಮ ಭಾರತೀಯರಿಗೆ ಸ್ಫೂರ್ತಿ: ರಹೀಮ್ ಖಾನ್

• ಮಲ್ಲಮ್ಮ ನುಡಿ ವಾರ್ತೆ ಬೀದರ



ಛತ್ರಪತಿ ಶಿವಾಜಿ ಮಹಾರಾಜರ ಧೈರ್ಯ,ದೇಶಪ್ರೇಮ ಕೋಟ್ಯಾಂತರ ಭಾರತೀಯರಿಗೆ ಸ್ಫೂರ್ತಿಯಾಗಿದೆ ಎಂದು ಪೌರಾಡಳಿತ ಹಾಗೂ ಹಜ್ ಸಚಿವರಾದ ರಹೀಂ ಖಾನ್ ಹೇಳಿದರು.

ಅವರು ಗುರುವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೀದರ ಇವರ ಸಂಯುಕ್ತಾಶ್ರಯದಲ್ಲಿ ನಗರದ ಪೂಜ್ಯ.ಡಾ.ಚನ್ನಬಸವ ಪಟ್ಟದೇವರ ರಂಗಮಂದಿರದಲ್ಲಿ ಆಯೋಜಿಸಿದ ಶ್ರೀ ಛತ್ರಪತಿ ಶಿವಾಜಿ ಮಹಾರಾಜರ ಜಯಂತ್ಯೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಛತ್ರಪತಿ ಶಿವಾಜಿ ಮಹಾರಾಜರು ಭಾರತದ ಇತಿಹಾಸದಲ್ಲಿ ಅಪ್ರತಿಮ ವೀರ ಮತ್ತು ದಕ್ಷ ಆಡಳಿತಗಾರರಾಗಿ ಚಿರಸ್ಥಾಯಿಯಾಗಿದ್ದಾರೆ. ಅತ್ಯಂತ ಚಿಕ್ಕವಯಸ್ಸಿನಲ್ಲೇ ಸ್ವರಾಜ್ಯದ ಕನಸನ್ನು ಕಂಡು ಅದನ್ನು ನನಸು ಮಾಡಿದರು. ಶಿವಾಜಿ ಮಹಾರಾಜರು ಕೇವಲ ಯುದ್ಧವಲ್ಲದೆ, ಸ್ತ್ರೀಯರಿಗೆ ಗೌರವ ನೀಡುವುದು, ರೈತ ಹಿತರಕ್ಷಣೆ ಮತ್ತು ಸಮರ್ಥ ನೌಕಾಪಡೆಯನ್ನು ನಿರ್ಮಿಸುವ ಮೂಲಕ ಅವರು ಒಬ್ಬ ಜನಪರ ರಾಜನಾಗಿ ಗುರುತಿಸಿಕೊಂಡವರು. ಛತ್ರಪತಿ ಶಿವಾಜಿ ಕೇವಲ ಹಿಂದೂ ಧರ್ಮಕ್ಕೆ ಸೀಮಿತವಾಗಿರಲಿಲ್ಲ ಅವರ ಸೈನ್ಯದಲ್ಲಿ ಸಾಕಷ್ಟು ಮುಸ್ಲಿಂರಿದ್ದರು ಆದರೆ ಅವರ ಇತಿಹಾಸವನ್ನು ತಪ್ಪಾಗಿ ಹೇಳಲಾಗುತ್ತಿದೆ ಅದರ ಸತ್ಯಾಂಶವನ್ನು ಹೊರತರುವ ಜವಾಬ್ದಾರಿ ನಮ್ಮ-ನಿಮ್ಮೆಲ್ಲರ ಮೇಲಿದೆ. ಮರಾಠ ಸಮಾಜದ ಅಭಿವೃದ್ಧಿಗೆ ನಮ್ಮ ಸರ್ಕಾರ ಭದ್ಧವಾಗಿದೆ ಎಂದರು.

ಬೀದರ ಸಂಸದರಾದ ಸಾಗರ ಖಂಡ್ರೆ ಅವರು ಮಾತನಾಡಿ, ಛತ್ರಪತಿ ಶಿವಾಜಿ ಮಹಾರಾಜರು ಅನ್ಯಾಯ ಅತ್ಯಾಚಾರದ ವಿರುದ್ಧ ಕೆಚ್ಚೆದೆಯಿಂದ ಹೋರಾಟ ನಡೆಸುತ್ತಿದ್ದರು. ಅವರಂತೆ ತಾವೆಲ್ಲರೂ ಸಮಾಜದಲ್ಲಿ ನಡೆಯುವ ಅನ್ಯಾಯ ಅತ್ಯಾಚಾರದ ವಿರುದ್ಧ ಧ್ವನಿ ಎತ್ತಬೇಕು. ಮಹಪುರುಷರನ್ನು ಕೇವಲ ಜಯಂತಿ ಸೀಮಿತಗೊಳಿಸುವ ಕೆಲಸವಾಗುತ್ತಿದೆ, ಅವರ ತತ್ವಾದರ್ಶಗಳು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವ ಕೆಲಸವಾಗಬೇಕಿದೆ. ಮರಾಠ ಸಮುದಾಯ ಭವನ ನಿರ್ಮಾಣಕ್ಕಾಗಿ 50 ಲಕ್ಷ ರೂ. ಗಳನ್ನು ಮಿಸಲಿಡಲಾಗಿದೆ ಮುಂದೆಯು ಸಮಾಜದ ಪರವಾಗಿ ನಿಲ್ಲುವುದಾಗಿ ಸಂಸದರು ಭರವಸೆ ನೀಡಿದರು.

ಇತಿಹಾಸಕಾರರು ಹಾಗೂ ಮರಾಠ ಸೇವಾ ಸಂಘ ಪುಣೆ ಮಹಾರಾಷ್ಟದ ಪ್ರಮುಖರಾದ ಗಂಗಾಧರ್ ಬನಬಾರೆ ವಿಶೇಷ ಉಪನ್ಯಾಸ ನೀಡಿ ಮಾತನಾಡಿ, ಛತ್ರಪತಿ ಶಿವಾಜಿ ಮಹಾರಾಜರನ್ನು ಮರಾಠರಿಗೆ, ಹಿಂದೂ ಧರ್ಮಕ್ಕೆ ಸೀಮಿತಗೊಳಿಸಿ ಅನ್ಯಧರ್ಮದವರಿಗೆ ಮರಾಠಿಗರ ವಿರುದ್ಧ ಎತ್ತಿಕಟ್ಟುವ ಕೆಲಸ ಮಾಡಲಾಗುತ್ತಿದೆ. ಯಾವುದೇ ಮಹಾಪುರುಷರನ್ನು ಒಂದು ಜಾತಿ, ಧರ್ಮದ ಹಣೆಪಟ್ಟಿ ಕಟ್ಟಬೇಡಿ, ಮಹಾಪುರಷರು ಈ ಸಮಾಜದ ಆಸ್ತಿ. ಶಿವಾಜಿ ಬಗ್ಗೆ ಶತ್ರುಗಳು ಸಹ ಕೆಟ್ಟದಾಗಿ ಮಾತನಾಡುತ್ತಿರಲಿಲ್ಲ ಅಂತಹ ಮಹಾನ್ ವ್ಯಕ್ತಿ ಶಿವಾಜಿ ಮಹಾರಾಜರಾಗಿದ್ದರು. ಕನ್ನಡ ಹಾಗೂ ಮರಾಠಿ ಭಾಷೆಯ ನಡುವೆ ನಡೆಯುತ್ತಿರುವ ಹೋರಾಟ ವ್ಯರ್ಥವಾದದ್ದು. ಶಿವಾಜಿ ಮಹಾರಾಜರು ಕರ್ನಾಟಕದ ಬೆಂಗಳೂರಿನಲ್ಲಿಯೇ ಪೋಷಕರಿಂದ ಸ್ವರಾಜ್ಯದ ಶಿಕ್ಷಣ ಪಡೆದಿದ್ದರೂ. ಕನ್ನಡರ ಹಾಗೂ ಮರಾಠಿಗರ ಮಧ್ಯ ಅವಿನಾಭಾವ ಸಂಬಂಧವಿದೆ ಎಂದರು.

ಕಾರ್ಯಕ್ರಮಕ್ಕೂ ಮುಂಚಿತವಾಗಿ ಛತ್ರಪತಿ ಶಿವಾಜಿ ಭಾವಚಿತ್ರ ಮೆರವಣಿಗೆ ನಗರದ ಶಿವಾಜಿ ವೃತ್ತದಿಂದ ಚಾಲನೆಗೊಂಡು ಭಗತ್ ಸಿಂಗ್ ವೃತ್ತ, ಬಸವವೇಶ್ವರ ವೃತ್ತ, ಅಂಬೇಡ್ಕರ್ ವೃತ್ತ, ರೋಟರಿ ವೃತ್ತ ಮಾರ್ಗವಾಗಿ ಪೂಜ್ಯ.ಡಾ.ಚನ್ನಬಸವ ಪಟ್ಟದೇವರ ರಂಗಮಂದಿಕ್ಕೆ ತಲುಪಿತು.

ಈ ಸಂದರ್ಭದಲ್ಲಿ ಬೀದರ ನಗರ ಸಭೆ ಅಧ್ಯಕ್ಷ ಮೊಹ್ಮದ್ ಗೌಸ್, ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ಅಮೃತರಾವ್ ಚಿಮಕೋಡೆ, ಜಿಲ್ಲಾ ಪಂಚಾಯತ್ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ಡಾ. ಗಿರೀಶ್ ಬದೋಲೆ, ಅಪರ ಜಿಲ್ಲಾಧಿಕಾರಿ ಶಿವಾನಂದ ಕರಾಳೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಸಿದ್ರಾಮ್ ಸಿಂಧೆ, ಛತ್ರಪತಿ ಶಿವಾಜಿ ಜಯಂತಿ ಉತ್ಸವ ಸಮಿತಿಯ ಅಧ್ಯಕ್ಷ ರಘುನಾಥರಾವ್ ಜಾಧವ ಸೇರಿದಂತೆ ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು, ಸಾರ್ವಜನಿಕರು ಉಪಸ್ಥಿತರಿದ್ದರು.

# ಶಮಶಿರನಗರನಲ್ಲಿ ಎಸ್ ಡಿಎಂಸಿ ಅಧ್ಯಕ್ಷರು ಹಾಗೂ ಸದಸ್ಯರ ಆಯ್ಕೆ



• ಮಲ್ಲಮ್ಮ ನುಡಿ ವಾರ್ತೆ ಬೀದರ

ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ (ಎಸ್ ಡಿಎಂಸಿ) ಎಂಬುದು ಸರ್ಕಾರಿ ಶಾಲೆಗಳ ಸುಧಾರಣೆ, ಹಾಗೂ ಶಾಲೆಯ ಭೌತಿಕ ಮೂಲಸೌಕರ್ಯ, ಶೈಕ್ಷಣಿಕ ಗುಣಮಟ್ಟ, ಶಿಕ್ಷಕರ ಹಾಜರಾತಿ ಮತ್ತು ಬಜೆಟ್ ನಿರ್ವಹಣೆಯ ಜವಾಬ್ದಾರಿಯನ್ನು ಅದಕ್ಕೆ ಎಸ್ ಡಿಎಂಸಿ ಅಧ್ಯಕ್ಷರು ಹಾಗೂ ಸದಸ್ಯರು ಸೇರಿ 18 ಜನರ ಸಮಿತಿ ಹೊಂದಿರುತ್ತದೆ,

ನೂತನವಾಗಿ ಅಧ್ಯಕ್ಷರಾಗಿ ವಾಜಿದ ಖಾನ್ ತಂದೆ ಖಾಜಾಖಾನ, ಹಾಗೂ ಉಪಾಧ್ಯಕ್ಷರಾಗಿ ಲಕ್ಮಿ ಗಂಡ ರಾಜಕುಮಾರ ಅವರನ್ನು ಎಲ್ಲಾ18 ಸದಸ್ಯರ ಸಮಕ್ಷೇಮಸಂತೆ ಆಯ್ಕೆ ಮಾಡಲಾಗಿದೆ,ಸದಸ್ಯರಾದ

ರಾಜಕುಮಾರ ಬಾಬುರಾವ್ ದಲಿತ ಸೇನೆ ಜಿಲ್ಲಾ ಉಪಾಧ್ಯಕ್ಷರು,ಭೀಮಶೆಟ್ಟಿ ಶಾಮರಾವ್, ವಿಜಯಕುಮಾರ ನಾಗಪ್ಪಾ, ಭರತ್ ಮಾರುತಿ, ಶಿವಕುಮಾರ ಮನೋಹರ್, ಜಗದೇವಿ ದಿಲೀಪ್, ಸಂಗೀತಾ ಗಣಪತಿ,ಶೀಲಾ ಪ್ರಶಾಂತ,ಭೀಮಶೆಟ್ಟಿ ಲಕ್ಷ್ಮಣ, ಶರಣಮ್ಮಾ ಬಸವರಾಜ, ಜಯಶ್ರೀ ಜಗನ್ನಾಥ, ವಾಹೀದ್ ಖಾನ್,ತಾಜುದ್ದೀನ್ ,ಯಾಸ್ಮಿನ್ ಬೇಗಂ,ಶಬಾನಾ ಬೇಗಂ,ತಾಹೇರ ಬೇಗಂ ಅವರು ಆಯ್ಕೆಯಾಗಿದ್ದಾರೆ,

ಆಯ್ಕೆ ಪ್ರಕ್ರಿಯೆಯಲ್ಲಿ ನೋಡಲ ಅಧಿಕಾರಿಯಾಗಿ ಮಂದಕನಳ್ಳಿ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾದ ದೇವಪ್ಪಾ ಚಾಂಬಳ, ಮುಖ್ಯ ಗುರುಗಳು ,ಶಿಕ್ಷಕರು ಹಾಗೂ ಸಿಂಡಿಕೇಟ್ ಸದಸ್ಯರಾದ ನಾಗಭೂಷಣ್ ಕಮಠಾಣೆ,ಸಾಯಿನಾಥ್ ಪಾಟೀಲ್ ಸೇರಿದಂತೆ ಅನೇಕ ಪೋಷಕರು ಗ್ರಾಮಸ್ಥರು ಭಾಗವಹಿಸಿದರು,



ಸೈದಾಪುರ್: ಪಟ್ಟಣದ ರೈಲ್ವೆ ಸ್ಟೇಷನ್ ಹತ್ತಿರ ಶ್ರೀ ಶಿವಾಜಿ ಮಹಾರಾಜ್ ಜಯಂತಿ ಆಚರಣೆ ಮಾಡಲಾಯಿತು. ಈ ಸಂದರ್ಭದಲ್ಲಿ ನಿತಿನ್ ತೆವಾರಿ, ಪ್ರೇಮಾನಾಥ, ರಾಜೇಶ್ ದೇವರಕಟ್ಟೆ, ಗುರು, ಸಿದ್ದು ಕಂಬರ್, ಅವಿನಾಶ್, ಅರುಣ್, ರಾಜ್, ಪ್ರಶಾಂತ್, ನರಸಿಂಹ, ರಘು ನಾಟೇಕರ್, ರಮೇಶ್, ಅಶೋಕ್, ನಿಖಿಲ್, ಉದಯ್, ಬನ್ನು ಮುಂತಾದ ಯುವಕರು ಇದ್ದಾರು.

# ಪ್ರಿಯದರ್ಶಿನಿ ಪಿಯು ಕಾಲೇಜಿನಲ್ಲಿ ಬೀಳ್ಕೊಡುಗೆ ಸಮಾರಂಭ



• ಮಲ್ಲಮ್ಮ ನುಡಿ ವಾರ್ತೆ ಕಮಲನಗರ

ಜ್ಞಾನವು ಕೇವಲ ಉದ್ಯೋಗಕ್ಕಾಗಿ ಇರದೆ, ಉತ್ತಮ ಸಮಾಜ ನಿರ್ಮಾಣದ ಸಾಧನವಾಗಬೇಕು ಎಂದು ಶಾಂತಿವರ್ಧಕ ಪಿಯು ಕಾಲೇಜಿನ ಪ್ರಾಂಶುಪಾಲರಾದ ಶಿವಾಜಿ ಆರ್. ಹೆಚ್ ಹೇಳಿದರು.

ಪಟ್ಟಣದ ಪ್ರಿಯದರ್ಶಿನಿ ಪಿಯು ಕಾಲೇಜಿನಲ್ಲಿ ನಡೆದ ವಿದ್ಯಾರ್ಥಿಗಳ ಬಿಳ್ಕೊಡುಗೆ ಸಮಾರಂಭದಲ್ಲಿ ಮಾತನಾಡಿದ ಅವರು, ಸತತ ಪ್ರಯತ್ನವೇ ಯಶಸ್ಸಿನ ಗುಟ್ಟು ಎಂದು ಕಿವಿಮಾತು ಹೇಳಿದರು.

ಕಾರ್ಯಕ್ರಮದಲ್ಲಿ ಸಂಸ್ಥೆಯ ಅಧ್ಯಕ್ಷ ಪ್ರವೀಣ ಕದಂ, ಡಾ. ಪ್ರದೀಪ ಕದಂ,

ಮುಖ್ಯಶಿಕ್ಷಕ ನರಸಿಂಗ, ಡಾ. ಮಂಜುನಾಥ, ಪ್ರವೀಣ ಮಂಗಳೂರೆ,ನಾಗರಾಜ ಬಿರಾದಾರ, ಶಾಂತಕುಮಾರ ಮೇತ್ರೆ ಹಾಗೂ ಕಾಲೇಜಿನ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿ ಪಾಲ್ಗೊಂಡಿದ್ದರು.

## 35 ದಿನಗಳ ವಿವಿಧ ಕೌಶಲ್ಯಾಭಿವೃದ್ಧಿ ತರಬೇತಿ:

# ಹೆಸರು ನೋಂದಾಯಿಸಲು ಮನವಿ

• ಮಲ್ಲಮ್ಮ ನುಡಿ ವಾರ್ತೆ ಬೀದರ

ಸರ್ಕಾರಿ ಕೈಗಾರಿಕಾ ಕೈಗಾರಿಕಾ ತರಬೇತಿ ಸಂಸ್ಥೆ ಮತ್ತು ಸಂಸ್ಕೃತಿ ಕೌಶಲ್ಯಾಭಿವೃದ್ಧಿ ಕೇಂದ್ರ ಬೀದರ ಸಹಭಾಗಿತ್ವದಲ್ಲಿ 18 ರಿಂದ 25 ವರ್ಷ ವಯಸ್ಸಿನ ನಿರುದ್ಯೋಗಿ ಯುವಕ ಯುವತಿಯವರಿಗೆ ಬೇಸಿಕ ಕಂಪ್ಯೂಟರ್, ಇಂಗ್ಲೀಷ ಕಮ್ಯುನಿಕೇಶನ, ಟ್ಯಾಲಿ, ಜಿಎಸ್‌ಟಿ, ಎಐ ಟೂಲ್ಸ್ ಮತ್ತು ಜೀವನ ಕೌಶಲ್ಯಗಳ ಕೋರ್ಸ್‌ಗಳಿಗೆ 35 ದಿನಗಳ ಉಚಿತ ತರಬೇತಿ ನೀಡಲಾಗುತ್ತಿದೆ. ತರಬೇತಿ ಪೂರ್ಣಗೊಂಡ ನಂತರ ಭಾರತ ಸರ್ಕಾರದ ಪ್ರಮಾಣ ಪತ್ರ ನೀಡುವುದರ ಜೊತೆಗೆ ರೂ. 15000 ದಿಂದ 20000 ವರೆಗಿನ ವೇತನ ಕೊಡುವ ಕಂಪನಿ/ಕಛೇರಿಗಳಲ್ಲಿ 100% ಉದ್ಯೋಗವಕಾಶ ಕಲ್ಪಿಸಿಕೊಡಲಾಗುವುದು. ಹೊಸ ಬ್ಯಾಚ್ ಫೆಬ್ರವರಿ.24 ರಂದು ಪ್ರಾರಂಭವಾಗಲಿದೆ. ಪ್ರಯುಕ್ತ ಈ ಸದಾವಕಾಶವನ್ನು ಬಳಸಿಕೊಂಡು ಈ 35 ದಿನಗಳ ಉಚಿತ ತರಬೇತಿಗೆ ಹಾಜರಾಗಿ ಉದ್ಯೋಗ ಪಡೆದುಕೊಳ್ಳಬೇಕು.

# ಸಂಪಾದಕೀಯ

ಮಾಣಿಕರೆಡ್ಡಿ ಕೌಡಾಳೆ
ಪ್ರಧಾನ ಸಂಪಾದಕರು
ಮೋ: 9845028349



## ವಾಯು ಮಾಲಿನ್ಯ ಮಂಡಳಿಯ ಕಾರ್ಯ ಜನಪರವಾಗಿರಲಿ

ಇಂದಿನ ಆಧುನಿಕ ಯುಗದಲ್ಲಿ ಅಭಿವೃದ್ಧಿಯ ಹೆಸರಿನಲ್ಲಿ ಪರಿಸರದ ಮೇಲೆ ಹೆಚ್ಚುತ್ತಿರುವ ಒತ್ತಡವು ಮಾನವ ಜೀವನಕ್ಕೆ ಭಾರೀ ಸವಾಲಾಗಿ ಪರಿಣಮಿಸಿದೆ. ವಿಶೇಷವಾಗಿ ವಾಯು ಮಾಲಿನ್ಯವು ಜನರ ಆರೋಗ್ಯವನ್ನು ಹಾನಿಗೊಳಿಸುತ್ತಿರುವ ಗಂಭೀರ ಸಮಸ್ಯೆಯಾಗಿದೆ. ನಗರಗಳು, ಕೈಗಾರಿಕೆಗಳು, ವಾಹನಗಳ ಸಂಖ್ಯೆಯ ಹೆಚ್ಚಳದಿಂದ ವಾತಾವರಣದಲ್ಲಿ ಹಾನಿಕರ ಅನಿಲಗಳ ಪ್ರಮಾಣ ದಿನದಿಂದ ದಿನಕ್ಕೆ ಏರಿಕೆಯಾಗುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ವಾಯು ಮಾಲಿನ್ಯ ನಿಯಂತ್ರಣ ಮಂಡಳಿಯ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಆದ್ದ-ರಿಂದ ಮಂಡಳಿಯ ಕಾರ್ಯವು ಜನಪರವಾಗಿದ್ದು, ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳುವಂತಾಗಬೇಕು.

ವಾಯು ಮಾಲಿನ್ಯ ನಿಯಂತ್ರಣ ಮಂಡಳಿಯ ಪ್ರಮುಖ ಉದ್ದೇಶವು ವಾತಾವರಣವನ್ನು ಶುದ್ಧವಾಗಿಡುವುದು ಮತ್ತು ಸಾರ್ವಜನಿಕರ ಆರೋಗ್ಯವನ್ನು ರಕ್ಷಿಸುವುದಾಗಿದೆ. ಆದರೆ ಹಲವೆಡೆ ಮಂಡಳಿಯ ಕಾರ್ಯಪದ್ಧತಿ ಕೇವಲ ಕಾಗದದಲ್ಲೇ ಸೀಮಿತವಾಗಿರುವುದು ವಿಷಾದನೀಯ ಸಂಗತಿಯಾಗಿದೆ. ಕೈಗಾರಿಕೆಗಳಿಂದ ಹೊರಬರುವ ಹೊಗೆ, ನಿರ್ಮಾಣ ಕಾಮಗಾರಿಗಳ ಧೂಳು, ವಾಹನಗಳಿಂದ ಹೊರಬರುವ ವಿಷಕಾರಿ ಅನಿಲಗಳ ನಿಯಂತ್ರಣಕ್ಕೆ ಕಟ್ಟುನಿಟ್ಟಿನ ಕ್ರಮಗಳನ್ನು ಜಾರಿಗೊಳಿಸುವಲ್ಲಿ ಮಂಡಳಿ ಇನ್ನಷ್ಟು ಚುರುಕಾಗಬೇಕಿದೆ.

ಮಂಡಳಿಯು ನಿಯಮಿತವಾಗಿ ವಾಯು ಗುಣಮಟ್ಟವನ್ನು ಪರಿಶೀಲಿಸಿ, ಮಾಲಿನ್ಯ ಹೆಚ್ಚಿರುವ ಪ್ರದೇಶಗಳನ್ನು ಗುರುತಿಸಿ ತಕ್ಷಣ ಕ್ರಮ ಕೈಗೊಳ್ಳಬೇಕು. ಸಾರ್ವಜನಿಕರಿಗೆ ವಾಯು ಮಾಲಿನ್ಯದ ಬಗ್ಗೆ ಜಾಗೃತಿ ಮೂಡಿಸುವುದು ಕೂಡ ಮಂಡಳಿಯ ಪ್ರಮುಖ ಕರ್ತವ್ಯವಾಗಿದೆ. ಶಾಲೆಗಳು, ಕಾಲೇಜುಗಳು ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಜನರಲ್ಲಿ ಪರಿಸರದ ಬಗ್ಗೆ ಹೊಣೆಗಾರಿಕೆಯನ್ನು ಬೆಳೆಸಬೇಕು.

ಇದಲ್ಲದೆ, ಮಾಲಿನ್ಯ ಉಂಟುಮಾಡುವ ಕೈಗಾರಿಕೆಗಳ ಮೇಲೆ ಕಟ್ಟುನಿಟ್ಟಿನ ನಿಯಂತ್ರಣ ಹೇರಬೇಕು. ನಿಯಮಗಳನ್ನು ಉಲ್ಲಂಘಿಸುವವರ ವಿರುದ್ಧ ದಂಡಾತ್ಮಕ ಕ್ರಮ ಕೈಗೊಳ್ಳುವುದರಿಂದ ಮಾತ್ರ ಪರಿಸರ ಸಂರಕ್ಷಣೆ ಸಾಧ್ಯವಾಗುತ್ತದೆ. ಮಂಡಳಿಯು ಸಾರ್ವಜನಿಕರ ದೂರುಗಳಿಗೆ ತಕ್ಷಣ ಸ್ಪಂದಿಸಿ, ಸಮಸ್ಯೆಗಳನ್ನು ಪರಿಹರಿಸುವ ಮೂಲಕ ಜನರ ವಿಶ್ವಾಸವನ್ನು ಗಳಿಸಬೇಕು.

ಒಟ್ಟಾರೆ, ವಾಯು ಮಾಲಿನ್ಯ ನಿಯಂತ್ರಣ ಮಂಡಳಿಯ ಕಾರ್ಯವು ಜನಪರವಾಗಿದ್ದು, ಪಾರದರ್ಶಕ ಮತ್ತು ಪರಿಣಾಮಕಾರಿ ಆಗಬೇಕು. ಪರಿಸರ ಸಂರಕ್ಷಣೆ ಕೇವಲ ಸರ್ಕಾರದ ಜವಾಬ್ದಾರಿ ಮಾತ್ರವಲ್ಲ, ಪ್ರತಿಯೊಬ್ಬ ನಾಗರಿಕನ ಕರ್ತವ್ಯವೂ ಆಗಿದೆ. ಮಂಡಳಿಯು ಜನರ ಸಹಕಾರದೊಂದಿಗೆ ಕಾರ್ಯನಿರ್ವಹಿಸಿದರೆ ಮಾತ್ರ ಶುದ್ಧ ವಾತಾವರಣ ಮತ್ತು ಆರೋಗ್ಯಕರ ಸಮಾಜ ನಿರ್ಮಾಣ ಸಾಧ್ಯವಾಗುತ್ತದೆ.

# ಸಿಬಿ ಕಾಲೇಜಿನಲ್ಲಿ ಗೋಲ್ಡನ್ ಸ್ಕಾಲರ್ ಶಿಪ್ ಗಾಗಿ ಪರೀಕ್ಷೆ

• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

ನಗರದ ಕಲ್ಯಾಣ ಕರ್ನಾಟಕದಲ್ಲಿ ಶಿಕ್ಷಣಕ್ಕೆ ಹೆಸರುವಾಸಿಯಾದ ಶಾಂತಿವರ್ಧಕ ಶಿಕ್ಷಣ ಸಂಸ್ಥೆಯ ಅಡಿಯಲ್ಲಿ ನಡೆಯುತ್ತಿರುವ ಚನ್ನಬಸವೇಶ್ವರ ಪಿಯು ಕಾಲೇಜಿನಲ್ಲಿ ಭಾನುವಾರ 22ರಂದು ಬೆಳಿಗ್ಗೆ 12 ಗಂಟೆಗೆ 2026– 27 ನೇ ಸಾಲಿನ ಪ್ರಥಮ ವರ್ಷದ ವಿಜ್ಞಾನ ವಿಭಾಗದ ಪ್ರವೇಶಕ್ಕಾಗಿ ಸ್ಕಾಲರ್ ಶಿಪ್ ಪ್ರವೇಶ ಪರೀಕ್ಷೆ ಏರ್ಪಡಿಸಲಾಗಿದೆ ಎಂದು ಪ್ರಾಚಾರ್ಯರಾದ ಲಕ್ಷ್ಮಿಕಾಂತ ನಾಟೇಕರ್ ತಿಳಿಸಿದ್ದಾರೆ. ಪ್ರಸ್ತುತ ವರ್ಷ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಈ ಪರೀಕ್ಷೆಗೆ ಹಾಜರಾಗಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಪ್ರಾಚಾರ್ಯರ ದೂರವಾಣಿ ಸಂಖ್ಯೆ 8970220049, ಕೋ ಆರ್ಡಿನೇಟರ್ ಯಲ್ಲಾಲಿಂಗ ಮೇತ್ರೆ 9611903368 ಅವರನ್ನು ಸಂಪರ್ಕಿಸಲು ಕೋರಲಾಗಿದೆ.

# ಕಲ್ಯಾಣ ಕರ್ನಾಟಕದ ಎಸ್‌ಸಿ,ಎಸ್‌ಟಿ ಉದ್ಯಮಿಗಳ ಸಾಲ ಮನ್ನಾಕ್ಕೆ ಮನವಿ



• ಮಲ್ಲಮ್ಮ ನುಡಿ ವಾರ್ತೆ ಬೀದರ

ಕಲ್ಯಾಣ ಕರ್ನಾಟಕ ಭಾಗದ ಆರ್ಥಿಕ ಸಂಕಷ್ಟದಲ್ಲಿರುವ ಎಸ್‌ಸಿ/ಎಸ್‌ಟಿ ಕೈಗಾರಿಕಾ ಉದ್ಯಮಿಗಳ ಸಾಲ ಮನ್ನಾ ಮಾಡುವಂತೆ ಎಸ್‌ಸಿ/ಎಸ್‌ಟಿ ಉದ್ಯಮಿದಾರರ ಸಂಘದ ಪ್ರಧಾನ ಕಾರ್ಯದರ್ಶಿ ಪೃಥ್ವಿರಾಜ್ ಎಸ್ ಅವರು ರಾಜ್ಯ ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ಮನವಿ ಸಲ್ಲಿಸಿದ್ದಾರೆ.

ನಗರಕ್ಕೆ ಆಗಮಿಸಿದ್ದ ಕರ್ನಾಟಕ ರಾಜ್ಯ ವಾಯು ಮಾಲಿನ್ಯ ನಿಯಂತ್ರಣ ಮಂಡಳಿಯ ಅಧ್ಯಕ್ಷರಾದ ಪಿಎಂ ನರೇಂದ್ರಸ್ವಾಮಿ ಅವರ ಮೂಲಕ ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಯಿತು. ಮಾರ್ಚ್ 6ರಂದು ಮಂಡಿಸಲಿರುವ 2026–27 ಸಾಲಿನ ಆಯವ್ಯಯದಲ್ಲಿ ಕಲ್ಯಾಣ ಕರ್ನಾಟಕ ಭಾಗದ ಎಸ್‌ಸಿ/ಎಸ್‌ಟಿ ಉದ್ಯಮಿಗಳಿಗೆ ಉತ್ತೇಜನ ನೀಡುವ ವಿಶೇಷ ಯೋಜನೆಗಳನ್ನು ಜಾರಿಗೆ ತರಬೇಕೆಂದು ಮನವಿಯಲ್ಲಿ ಆಗ್ರಹಿಸಲಾಗಿದೆ.

ಕೇಂದ್ರ ಸರ್ಕಾರವು ಕಳೆದ ಹತ್ತು ವರ್ಷಗಳಲ್ಲಿ ದೊಡ್ಡ ಉದ್ಯಮಿಗಳ ಸುಮಾರು ರೂ.16 ಲಕ್ಷ ಕೋಟಿ ಸಾಲ ಮನ್ನಾ ಮಾಡಿರುವ ಹಿನ್ನೆಲೆಯಲ್ಲಿ, ಎಸ್‌ಸಿ/ಎಸ್‌ಟಿ ಉಪಯೋಜನೆ (ಎಸ್‌ಸಿಪಿ/ಟಿಎಸ್‌ಪಿ) ಅನುದಾನದ ಅಡಿಯಲ್ಲಿ ಸಣ್ಣ ಕೈಗಾರಿಕಾ ಉದ್ಯಮಿಗಳಿಗೂ ಸಾಲ ಮನ್ನಾ ಮಾಡಬೇಕು ಎಂದು ಮನವಿಯಲ್ಲಿ ಉಲ್ಲೇಖಿಸಲಾಗಿದೆ.

ಈ ಸಂದರ್ಭದಲ್ಲಿ ಮಾಜಿ ವಿಧಾನ ಪರಿಷತ್ ಸದಸ್ಯರಾದ ಅರವಿಂದಕುಮಾರ್ ಅರಳಿ ಸೇರಿದಂತೆ ಅನೇಕ ಉದ್ಯಮಿಗಳು ಉಪಸ್ಥಿತರಿದ್ದರು.

# ರಂಜಾನ್ ತಿಂಗಳ ಪ್ರಥಮ ರೋಜಾ




• ಮಲ್ಲಮ್ಮ ನುಡಿ ವಾರ್ತೆ ಮುದಗಲ್

ಪಟ್ಟಣದಲ್ಲಿ ಇಸ್ಲಾಂ ಧರ್ಮದ ಅತ್ಯಂತ ಪವಿತ್ರ ಮಾಸವಾದ ರಂಜಾನ್ ತಿಂಗಳ ಪ್ರಥಮ ರೋಜಾ ಮುಸ್ಲಿಂ ಬಾಂಧವರಿಂದ ಗುರುವಾರ ಪ್ರಾರಂಭಿಸಲಾಯಿತು.

ಮುಸ್ಲಿಂ ಬಾಂಧವರು ಪ್ರಥಮ ರೋಜವನ್ನು ಮುಗಿಸುವ ನಿಮಿತ್ಯ ಸಂಜೆಯಾಗುತ್ತಲೇ ಗುಂಪು ಗುಂಪಾಗಿ ಹಣ್ಣು ಹಂಪಲು ಹಾಗೂ ತಿನ್ನುವ ವಸ್ತುಗಳ ಖರೀದಿ ಬಲು ಜೋರಾಗಿತ್ತು. ಚಂದ್ರ ದರ್ಶನವಾದ ನಂತರ ಮುಸ್ಲಿಂ ಸಮುದಾಯದವರು ಭಕ್ತಿ ಭಾವದಿಂದ ಮಸೂದೆಯಲ್ಲಿ ಅಲ್ಲಾಹನ ಪಾರ್ಥನೆ ಮಾಡಿ ಮುಂಜಾವಿನ ಹೊತ್ತಿನಲ್ಲಿ ಕೈಗೊಂಡ ಉಪವಾಸ ವ್ರತ ಮುಗಿಸಲು ಸರ್ವರೊಂದಿಗೆ ಇಫ್ತಾರ್ ಮೂಲಕ ಉಪವಾಸ ವೃತ ಮುರಿದರು.

# ರಾಜಕಾಲುವೆ ಕಾಮಗಾರಿಯಲ್ಲಿ ವ್ಯಾಪಕ ಭ್ರಷ್ಟಾಚಾರ ಆರೋಪ; ದ.ಸಂ.ಸ. ಪ್ರತಿಭಟನೆಯ ಎಚ್ಚರಿಕೆ



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಯಾದಗಿರಿ ನಗರದ ಡಿ.ಟಿ.ಹೆಚ್. ಶಾಲೆಯ ಹಿಂಭಾಗದಿಂದ ಲುಂಬಿನಿ ಗಾರ್ಡನ್ ವರೆಗೆ ನಡೆಯುತ್ತಿರುವ ರಾಜಕಾಲುವೆ ನಿರ್ಮಾಣ ಕಾಮಗಾರಿಯು ಸಂಪೂರ್ಣ ಕಳಪೆಯಾಗಿದ್ದು, ಇದರಲ್ಲಿ ಅಧಿಕಾರಿಗಳು ಮತ್ತು ಗುತ್ತಿಗೆದಾರರು ಸೇರಿ ಹಣ ಲೂಟಿ ಮಾಡುತ್ತಿದ್ದಾರೆ ಎಂದು ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ (ಡಿಎಎಸ್) ಜಿಲ್ಲಾ ಘಟಕದ ವತಿಯಿಂದ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿ ಗಂಭೀರ ಆರೋಪ ಮಾಡಲಾಗಿದೆ. ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ (ಏಖಆಃ) 2024-25ನೇ ಸಾಲಿನ ಮ್ಯಾಕ್ರೋ ಅನುದಾನದಡಿ (ವರ್ಕ್ ಕೋಡ್: ವೈವಿಡಿ2413121192) ಸುಮಾರು 200 ಲಕ್ಷ ರೂ. ವೆಚ್ಚದಲ್ಲಿ ಅಂಬೇಡ್ಕರ್ ನಗರ ಹಾಗೂ ಲುಂಬಿನಿ ಗಾರ್ಡನ್ ಪಕ್ಕದಲ್ಲಿ ರಾಜಕಾಲುವೆ ಕಾಮಗಾರಿ ನಡೆಯುತ್ತಿದೆ. ಈ ಕಾಮಗಾರಿಯಲ್ಲಿ ಅಂದಾಜು ಪತ್ರಿಕೆಯ ನಿಯಮಗಳನ್ನು ಗಾಳಿಗೆ ತೂರಲಾಗಿದೆ ಎಂದು ಸಮಿತಿ ದೂರಿದೆ. ಕಾಮಗಾರಿಯಲ್ಲಿ ಕಬ್ಬಿಣದ ರಾಡ್‌ಗಳನ್ನು ಅತ್ಯಲ್ಪ ಪ್ರಮಾಣದಲ್ಲಿ ಬಳಸಲಾಗುತ್ತಿದ್ದು, ಗುಣಮಟ್ಟದ ಸಿಮೆಂಟ್ ಬಳಸುತ್ತಿಲ್ಲ ಮತ್ತು ಕ್ಯೂರಿಂಗ್ ಕೂಡ ಮಾಡುತ್ತಿಲ್ಲ.

ನಗರಸಭೆಯ ಎ.ಇ.ಇ ಮತ್ತು ಜೆ.ಇ ಅವರು ಡೆಕ್ಕನ್ ಇಂಜಿನಿಯರಿಂಗ್ ಸರ್ವಿಸಸ್ ಗುತ್ತಿಗೆದಾರರೊಂದಿಗೆ ಸೇರಿ ಹಣ ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಸ್ಥಳಕ್ಕೆ ಭೇಟಿ ನೀಡದೆಯೇ ಕಚೇರಿಯಲ್ಲಿ ಕುಳಿತು ವರದಿ ಸಿದ್ಧಪಡಿಸುತ್ತಿದ್ದಾರೆ ಎಂದು ಆರೋಪಿಸಲಾಗಿದೆ. ಕಾಮಗಾರಿಯಿಂದಾಗಿ ಕೋಟೆಗಾರವಾಡ ಶಾಲೆಯಿಂದ ಸೈದಾಪುರ ಹೋಟೆಲ್‌ಗೆ ಹೋಗುವ ರಸ್ತೆಯ ಮಧ್ಯದ ಪೂಲ್‌ಗಳು ಜಖಂಗೊಂಡಿವೆ. ದಲಿತರ ರುದ್ರಭೂಮಿಯ ಜಾಗವನ್ನು ಒತ್ತುವರಿ ಮಾಡಿಕೊಂಡು ಬೇಕಾಬಿಟ್ಟಿಯಾಗಿ ಕಾಮಗಾರಿ ನಡೆಸಲಾಗುತ್ತಿದೆ. ಅಲ್ಲದೆ, ಕಾಲುವೆ ನೀರು ಮುಂದೆ ಹೋಗದಂತೆ ತಡೆದಿರುವುದರಿಂದ ಸುತ್ತಮುತ್ತಲಿನ ಪ್ರದೇಶದಲ್ಲಿ ದುರ್ನಾತ ಹರಡಿ ಸಾರ್ವಜನಿಕರ

ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ. ದಲಿತರ ಓಣಿಯಲ್ಲಿ ನಡೆಯುವ ಕಾಮಗಾರಿಯನ್ನು ಅತ್ಯಂತ ಬೇಜವಾಬ್ದಾರಿಯಿಂದ ಮಾಡಲಾಗುತ್ತಿದೆ. ಈ ಕೂಡಲೇ ತನಿಖೆ ನಡೆಸಿ ಭ್ರಷ್ಟ ಅಧಿಕಾರಿಗಳನ್ನು ಅಮಾನತುಗೊಳಿಸಬೇಕು ಹಾಗೂ ಗುತ್ತಿಗೆದಾರರನ್ನು ಕಪ್ಪು ಪಟ್ಟಿಗೆ ಸೇರಿಸಬೇಕು.

ಅಲ್ಲಿಯವರೆಗೆ ಕಾಮಗಾರಿಯ ಹಣ ಪಾವತಿಯನ್ನು ತಡೆಹಿಡಿಯಬೇಕು ಎಂದು ಸಮಿತಿಯ ಜಿಲ್ಲಾ ಸಂಚಾಲಕರು ಹಾಗೂ ಪದಾಧಿಕಾರಿಗಳು ಒತ್ತಾಯಿಸಿದ್ದಾರೆ.

ಒಂದು ವಾರದೊಳಗೆ ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳದಿದ್ದಲ್ಲಿ ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಉಗ್ರ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಸಂಘಟನೆಯ ಮುಖಂಡರಾದ ಚಂದಪ್ಪ ಮುನಿಯಪ್ಪನೋರ ಎಚ್ಚರಿಸಿದ್ದಾರೆ.

# ಪರೀಕ್ಷೆ ಎಂದರೆ ಭಯ ಬೇಡ; ನಾಗೇಂದ್ರ ಪ್ರಸಾದ್ ಸಲಹೆ




• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಪರೀಕ್ಷೆಯಂದ್ರೇ ಭಯಬೇಡ, ಬೋರ್ಡ್ ಪರೀಕ್ಷೆ ಎಂದರೆ ಸ್ವಲ್ಪ ಭಯ ಇರೋದು ಸಹಜ. ಮಕ್ಕಳ ಮೇಲೆ ಒತ್ತಡ ಹಾಕಬೇಡಿ ಎಂದು ಪೋಷಕರಿಗೆ ಡಿಸಿ ನಾಗೇಂದ್ರಪ್ರಸಾದ್ ಅವರು ಮನವಿ ಮಾಡಿದ್ದಾರೆ.

ಅವರು ಇಂದು ಹೊಸ ಡಿಸಿ ಸಭಾಂಗಣದಲ್ಲಿ ಸುದ್ದಿಗೋಷ್ಠಿ ನಡೆಸಿ ಎಸ್ ಎಸ್ ಎಲ್ ಸಿ ಪರೀಕ್ಷೆಗಳನ್ನು ನಡೆಸಲು ಸಕಲ ಸಿದ್ದತೆ ಮಾಡಿಕೊಂಡಿದೆ ಎಂದು ಹೇಳಿದರು.

ಪರೀಕ್ಷೆ ಸುಧಾರಣೆ ವಿಚಾರದಲ್ಲಿ ಸಾಕಷ್ಟು ಕ್ರಮ ತೆಗೆದುಕೊಂಡಿದ್ದೇವೆ. ಮಕ್ಕಳಿಗೆ ಬರವಣಿಗೆ ಅಭ್ಯಾಸ ಮಾಡಿಸಿದ್ದೇವೆ. ಪ್ರಶ್ನೆ ಪತ್ರಿಕೆ ತೆಗೆದುಕೊಂಡು ಹೋಗುವ ವಾಹನಕ್ಕೆ ಜಿಪಿಎಸ್ ಅಳವಡಿಸಲಾಗ್ತಿದೆಂದರು.

ಜಿಪಂ ಸಿಇಓ ಮಾತನಾಡಿ ಪರೀಕ್ಷೆ ಕೇಂದ್ರದ ಔಟ್ ಸೈಡ್ ಮತ್ತು ಪ್ರಿನ್ಸಿಪಾಲ್ ಚೇಂಬರ್ ನಲ್ಲಿಯೂ ಸಿಸಿ ಕ್ಯಾಮರ ಅಳವಡಿಸಲಾಗ್ತಿದೆ. ಪ್ರಿಪ್ರರೇಟರಿ ಎಕ್ಸಾಂ ಕೂಡ ಕಟ್ಟುನಿಟ್ಟಾಗಿ ಮಾಡಿದ್ದೇವೆ ಇದರಲ್ಲಿ ಯೂ ಸಹ ವಿದ್ಯಾರ್ಥಿನಿಯರ ರಿಸಲ್ಟ್ ಹೆಚ್ಚಾಗಿದೆ ಅದ್ರೇ ವಿದ್ಯಾರ್ಥಿಗಳ ರಿಸಲ್ಟ್ ಕಡಿಮೆ ಬಂದಿರೋ ಹಿನ್ನೆಲೆಯಲ್ಲಿ ಅವರಿಗೆ ವಿಶೇಷ ತರಗತಿಯನ್ನು ತೆಗೆದುಕೊಳ್ಳಲಾಗ್ತಿದೆ. ಹಾಸ್ಟೆಲ್ ನಲ್ಲಿ ವಾರ್ಡನ್ ಗಳು ಕ್ಲಾಸ್ ತೆಗೆದುಕೊಳ್ಳುವ ರೀತಿಯಲ್ಲಿ ವ್ಯವಸ್ಥೆ ಮಾಡಲಾಗ್ತಿದೆ.. ಈ ವರ್ಷ ಫಲಿತಾಂಶ ಹೆಚ್ಚಾಗುವ ನಿರೀಕ್ಷೆಯಿದೆ.ಲ ಇದೆ ಎಂದು ಹೇಳಿದರು.

ಜಿಲ್ಲೆಯಲ್ಲಿ ಮಾರ್ಚ 18 ರಿಂದ ಆರಂಭಗೊಳ್ಳಲಿವೆ. ಇದಕ್ಕಾಗಿ ಜಿಲ್ಲೆಯಲ್ಲಿ 65 ಪರೀಕ್ಷಾ ಕೇಂದ್ರಗಳ ಸಿದ್ದತೆ ಮಾಡಿದೆ. 803 ಸಿಸಿ ಕೆಮೆರಾ ಅಳವಡಿಸಿದೆ. ಜಿಲ್ಲೆಯ 149 ಶಾಲೆಗಳ 23271 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ. ಪೂರ್ವ ಸಿದ್ದತಾ ಪರೀಕ್ಷೆಯಲ್ಲಿ ಶೇ 62 ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆಂದು ತಿಳಿಸಿದರು. ಎಡಿಸಿ ಮಹಮ್ಮದ್ ಝುಬೇರ್, ಎಸ್ಪಿ ಡಾ.ಸುಮನ್ ಪೆನ್ನೇಕರ್ ಉಪಸ್ಥಿತರಿದ್ದರು.



• ಮಲ್ಲಮ್ಮ ನುಡಿ ವಾರ್ತೆ ಕೊಟ್ಟೂರು ಪಟ್ಟಣದ ಮಾರ್ಕಂಡೇಶ್ವರ ಸ್ವಾಮಿಯ ಪ್ರತಿಷ್ಠಾನ ಶತಮಾನೋತ್ಸವ ಸಂಭ್ರಮಕ್ಕೆ ಶಿವಭಕ್ತ ಮಾರ್ಕಂಡೇಶ್ವರ ಸಮೂದಯ ಸಮಿತಿಯವರು ಆಯೋಜಿಸಿದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಮಾರ್ಕಂಡೇಶ್ವರ ಶತಮಾನೋತ್ಸವದಲ್ಲಿ ಹಂಸಪ್ರೀಯಾ ನೃತ್ಯ. ನಿಕೇತನ ತಂಡ ಭರತನಾಟ್ಯ ಗಮನ ಸೆಳೆಯಿತು. ಪಟ್ಟಣದ ಹಂಸಪ್ರೀಯಾ ನತ್ಯ ನಿಕೇತನ ಕಾಲ ಶಿಕ್ಷಣ ಟ್ರಸ್ಟ್ ತಂಡದ ವಿದ್ಯಾರ್ಥಿಗಳು ಸತತ ಎರಡು ಗಂಟೆಗಳ ಕಾಲ ಭರತನಾಟ್ಯ,ಜಾನಪದ ನಿತ್ಯ, ಕಂಸಾಳೆ ಇತರ.

# ಅಕ್ರಮ ಮಾದಕ ವಸ್ತು ಸಾಗಾಣೆ ಮೂರು ಲಕ್ಷ ಮೌಲ್ಯದ ವಸ್ತು ಜಪ್ತಿ, 5 ಬಂಧನ: ಪ್ರದೀಪ್ ಗುಂಟಿ

• ಮಲ್ಲಮ್ಮ ನುಡಿ ವಾರ್ತೆ ಬೀದರ



ಬೀದರ ತಾಲೂಕಿನ ಬೆನಕನಳ್ಳಿ-ಮರಖಲ್ ರಸ್ತೆಯಲ್ಲಿ ನಾಲ್ಕು ಮೋಟಾರ್ ಸೈಕಲ್‌ಗಳಲ್ಲಿ ಅಕ್ರಮವಾಗಿ ಸಾಗಾಟ ಮಾಡುತ್ತಿ 3 ಲಕ್ಷಕ್ಕೂ ಅಧಿಕ ಮೌಲ್ಯದ ಮಾದಕ ವಸ್ತುಗಳನ್ನು ಪೊಲೀಸರ ಜಪ್ತಿ ಮಾಡಿ, ಐದು ಜನ ಆರೋಪಿಯನ್ನು ಬಂಧಿಸಿದ್ದಾರೆ.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ್ ಗುಂಟಿ ಹಾಗೂ ಹೆಚ್ಚುವರಿ ಪೊಲೀಸ್ ಅಧೀಕ್ಷಕ ಚಂದ್ರಕಾಂತ ಪೂಜಾರಿ ಅವರ ಮಾರ್ಗದರ್ಶನದಲ್ಲಿ ಪೊಲೀಸ್ ಉಪಾಧೀಕ್ಷಕ ದೂದಪೀರ್ ಹುಸೇನ್ ಸಾಬ್ ಮುಲ್ಲಾ ಮತ್ತು ಸಿಪಿಐ ಜಿ.ಎಸ್.ಬಿರಾದರ್ ಅವರ ನೇತೃತ್ವದಲ್ಲಿ ಜನವಾಡಾ ಪೊಲೀಸ್ ಠಾಣೆ ಸಿಬ್ಬಂದಿ ಸೇರಿ ವಿಶೇಷ ತಂಡ ರಚಿಸಿ ಕಾರ್ಯಾಚರಣೆ ನಡೆಸಿದರು,

ಫೆ.16ರಂದು ಖಚಿತ ಮಾಹಿತಿಯನ್ನು ಆಧಾರದ ಮೇಲೆ ಸಂಜೆ, ಬೀದರ ತಾಲೂಕಿನ ಬೆನಕನಳ್ಳಿ-ಮರಖಲ್ ರಸ್ತೆಯಲ್ಲಿ ಆರೋಪಿತರು 5 ಮೋಟಾರ್ ಸೈಕಲ್‌ಗಳಲ್ಲಿ ಮಾದಕ ವಸ್ತುಗಳನ್ನು ಸಾಗಾಟ ಮಾಡುತ್ತಿದ್ದಾಗ ಜನವಾಡ ಠಾಣೆಯ ಪೊಲೀಸರು ಕಾರ್ಯಾಚರಣೆ ನಡೆಸಿದ್ದಾರೆ.

ಆರೋಪಿತರಿಂದ -90.11 ಸಾವಿರ ಮೌಲ್ಯದ 200 ವಿವಿಧ ಮಾದಕ ಸಿರಪ್ ಬಾಟಲಿ, ಗುಳಿಗೆಗಳು, -2.05 ಲಕ್ಷ ಮೌಲ್ಯದ ನಾಲ್ಕು ದ್ವಿಚಕ್ರ ವಾಹನ, ನಗದು 10,100 ಸೇರಿ ಒಟ್ಟು -3,05,216 ಮೌಲ್ಯದ ವಸ್ತುಗಳನ್ನು ಜಪ್ತಿ ಮಾಡಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ್ ಗುಂಟಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು, ಇನ್ನೊಂದು ಪ್ರಕರಣ ಹುಮನಾಬಾದ ಪೊಲೀಸ್ ಠಾಣೆಯಲ್ಲಿ ಬಿ ಎನ್ ಎಸ್ ಕಾಯ್ದೆ ಪ್ರಕರಣದಲ್ಲಿ ತೆಲಂಗಾಣ ರಾಜ್ಯದ ಸಂಗಾ-ರೆಡ್ಡಿ ದನಗಳ ಮಾರುಕಟ್ಟೆಯಲ್ಲಿ 21 ಎಮ್ಮೆಗಳನ್ನು ಖರೀದಿ ಮಾಡಿ ಕಲಬುರಗಿ ಕಡೆಗೆ ತೆಗೆದುಕೊಂಡು ಹೋಗುವಾಗ ಮಧ್ಯರಾತ್ರಿ 2 ಗಂಟೆ ಸುಮಾರಿಗೆ ಹುಮ್ನಾಬಾದ್ ಆರ್ ಟಿಓ ಚೆಕ್ ಪೋಸ್ಟ್ ಹತ್ತಿರ ಐಚ್ಚರ ವಾಹನ ತಡೆದು ಲಾರಿ ಚಾಲಕನಿಗೆ ಇದನ್ನು ಪೊಲೀಸರಿಗೆ ಹಿಡಿದು ಕೊಡುತ್ತೇವೆ ಅಂತ ಹೆದರಿಸಿ ಚಾಲಕನ ಜೊತೆಯಲ್ಲಿದ್ದ ಇಲಿಯಾಸ್ ಈತನ ಜೆಬಿನಿಂದ 3000 ನಗದು ಕಿತ್ತುಕೊಂಡಿರುತ್ತಾರೆ ಚಾಲಕ ನಿತಿನ್ ಈತನಿಗೆ ನಿಮ್ಮ ಮಾಲೀಕರಿಗೆ ಕರೆ ಮಾಡಿ 2 ಲಕ್ಷ ರೂಪಾಯಿಗಳು ಕಳಿಸುವಂತೆ ಹೇಳು, ಇಲ್ಲದಿದ್ದರೆ ನಿಮ್ಮನ್ನು ಕೊಲೆ ಮಾಡುತ್ತೇವೆ ಎಂದು ಮಾರಕಾಸ್ತ್ರಗಳು ಕುತ್ತಿಗೆ ಮೇಲೆ ಇಟ್ಟು ಹೆದರಿಸಿದರು, ಇಬ್ಬರನ್ನು ಒಂದು ಸ್ಕೂಟಿ ಮೋಟರ್ ಸೈಕಲ್ ಮೇಲೆ ಒತ್ತಾಯ ಪೂರ್ವಕವಾಗಿ ಕುಡಿಸುತ್ತಿರುವಾಗ ನಿತಿನ್ ತಪ್ಪಿಸಿಕೊಂಡು ಹುಮನಾಬಾದ ಪಟ್ಟಣದ ಕಡೆಗೆ ಬರುವಾಗ ರಾತ್ರಿ ಗಸ್ತಿನಲ್ಲಿದ್ದ ಪೊಲೀಸರಿಗೆ ಘಟನೆ ವಿಷಯವನ್ನು ತಿಳಿದಿರುತ್ತದೆ

ಮೂರು ಜನ ಆರೋಪಿತರ ವಶದಲ್ಲಿ ಕಾರದಪುಡಿ ಮೂರು ಮಾರಕಾಸ್ತ್ರಗಳು ಹಾಗೂ 2500 ರೂ, ಒಂದು ಸ್ಕೂಟಿ, ಐಚ್ಚರ ವಾಹನ ಹಾಗೂ ಎಮ್ಮೆಗಳು ಜಪ್ತಿ ಮಾಡಿ ಮೂವರು ಆರೋಪಿಯನ್ನು ಹುಮ್ನಾಬಾದ್ ಪೊಲೀಸರು ಬಂಧಿಸಿದ್ದಾರೆ,

ಇದೇ ಸಂದರ್ಭದಲ್ಲಿ ಹುಮನಾಬಾದ ಪೊಲೀಸ್ ಉಪಾಧೀಕ್ಷಕರಾದ ಮಡೋಳಪ್ಪಾ ಪಿ,ಎಸ್ ಬೀದರ್ ಪೊಲೀಸ್ ಉಪಾಧೀಕ್ಷಕರಾದ ದೂಧಪೀರ್ ಹುಸೇನ್ ಸಾಬ್ ಮುಲ್ಲಾ, ಸಿಪಿಐ ಜಿ ಎಸ್ ಬಿರಾದಾರ, ಪಿಎಬಾಸುಮಿಯಾ, ಅನೇಕ ಪೊಲೀಸ್ ಸಿಬ್ಬಂಧಿಗಳು ಉಪಸ್ಥಿತಿ ಇದ್ದರು,

# ಬಂಜಾರ್ ಸಮಾಜದ ಸೇವಾಲಾಲ್ ಮಾಲಾದಾರಿಗಳ ಮೇಲೆ ಕೇಸ್ ಕ್ಷಮೆ ಯಾಚಿಸಲು ಸುರೇಶ್ ಬಳೂಟಿಗಿ ಆಗ್ರಹ

• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ



ಛಾಯಾಗಡ್ ನಲ್ಲಿ ನಡೆದ ಸಂತ ಶ್ರೀ ಸೇವಾಲಾಲ್ ರ 287 ನೇ ಜಯಂತೋತ್ಸವದಲ್ಲಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭಾಗವಹಿಸಿ ಭಾಷಣ ಮಾಡುವ ಸಂದರ್ಭದಲ್ಲಿ ಬಂಜಾರ ಸಮಾಜದ ಹೋರಾಟದ ಬಗ್ಗೆ ಹಗುರುವಾಗಿ ಮಾತನಾಡಿದಕ್ಕೆ ಸೇವಾಲಾಲ ಮಾಲಾಧಾರಿಗಳು ಮತ್ತು ಯುವಕರು ಒಳ ಮೀಸಲಾತಿ ಜಾರಿಯಲ್ಲಿ ರಾಜಕೀಯ ತೀರ್ಮಾನ ಮಾಡಿ ನಮ್ಮ ಸಮಾಜಕ್ಕೆ ಅನ್ಯಾಯ ಮಾಡಿರುವುದನ್ನು ಖಂಡಿಸುತ್ತೇವೆ ಗೋ ಬ್ಯಾಕ್ ಎಂದು ಪ್ರತಿಭಟನೆ ಮಾಡಿದ್ದಕ್ಕೆ ಬಂಜಾರ ಮಾಲಾಧಾರಿಗಳು ಮತ್ತು ಯುವಕರ ಮೇಲೆ ಸರ್ಕಾರ ಕೇಸ್ ದಾಖಲಿಸಿರುವುದನ್ನು ಗೋರ ಸೇನಾ ರಾಜ್ಯ ಪ್ರಧಾನ ಕಾರ್ಯದರ್ಶಿ ಸುರೇಶ ಬಳೂಟಗಿ ಖಂಡಿಸಿದ್ದಾರೆ.

ಈ ಕುರಿತು ಗೋರ ಸೇನಾ ಮುಖಂಡರು ಪತ್ರಿಕಾ ಹೇಳಿಕೆ ನೀಡಿದ್ದು ಬಂಜಾರ ಸಮುದಾಯದ ಮಾಲಾದಾರಿಗಳು, ಯುವಕರು ಫೆ.14 ರಂದು ನಡೆದ ಸದ್ಗುರು ಶ್ರೀ ಸೇವಾಲಾಲ ಜಯಂತೋತ್ಸವದಲ್ಲಿ ಸರ್ಕಾರದ ಅವೈಜ್ಞಾನಿಕ ಒಳ ಮಿಸಲಾತಿ ಜಾರಿಯಲ್ಲಿ ಬಂಜಾರ ಸಮಾಜಕ್ಕೆ ಮಾಡಿರುವ ಅನ್ಯಾಯದ ವಿರುದ್ಧ ಕಪ್ಪುಪಟ್ಟಿ ಧರಿಸಿ ಪ್ರತಿಭಟನೆ ಮಾಡಿ ಗೊ-ಬ್ಯಾಕ್ ಎಂದು ಹಕ್ಕೋತ್ತಾಯ ಮಾಡಿದ್ದರು. ಇದಕ್ಕೆ ಕೆರಳಿದ ಡಿಕೆಶಿ ವೇದಿಕೆಯಲ್ಲೇ ನಿಂತು ನಿಮ್ಮ ಹೋರಾಟಕ್ಕೆ ನಾನು ಜಗ್ಗಲ್ಲ, ಬಗ್ಗಲ್ಲ ಎಂದು ಇಡೀ ಸಮಾಜಕ್ಕೆ ಸವಾಲು ಹಾಕಿ ಅವಮಾನಿಸಿದ್ದಾರೆ. ಇನ್ನು ಮುಂದುವರೆದು ಅವರ ಕೆಲವು ಹಿಂಬಾಲಕರ ಮಾತು ಕೇಳಿ ನಮ್ಮ ಸಮಾಜದ ಮಾಲಾಧಾರಿಗಳು, ಹೋರಾಟಗಾರರು ಮತ್ತು ಯುವಕರ ಮೇಲೆ ನ್ಯಾಮತಿ ಪೊಲೀಸ್ ಠಾಣೆಯಲ್ಲಿ ಎಫ್.ಐ.ಆರ್ ದಾಖಲಿಸಿರುವುದು ಅತ್ಯಂತ ಖಂಡನೀಯ ಮತ್ತು ನಮ್ಮ ಸಮಾಜದ ಹೋರಾಟವನ್ನು ಹತ್ತಿಕ್ಕುವ ಪ್ರಯತ್ನವಾಗಿದೆ.

ನಮ್ಮ ಸಮಾಜಕ್ಕೆ ಮೀಸಲಾತಿಯಲ್ಲಿ ಆಗಿರುವ ಅನ್ಯಾಯವನ್ನು ಮನಗಂಡು ಮತ್ತು ನಮ್ಮ ಸಮುದಾಯದವರ ಭಾವನೆಗೆ ಬೆಲೆ ನೀಡಿ ಈ ಕಾರ್ಯಕ್ರಮದಲ್ಲಿ ಮಾಜಿ ಸಚಿವರಾದ ಪಿ.ಟಿ ಪರಮೇಶ್ವರ ನಾಯ್ಕ, ಪ್ರಭು ಚವ್ಹಾಣ್, ಬಾಬುರಾವ್ ಚವ್ಹಾಣ್ ಸೇರಿದಂತೆ ಬಹುತೇಕ ಹಾಲಿ ಶಾಸಕರು, ಮಾಜಿ ಶಾಸಕರು, ಪ್ರಮುಖರು ಗೈರು ಹಾಜರಾಗಿದ್ದರು. ಈ ಕಾರ್ಯಕ್ರಮದಲ್ಲಿ ಸಮಾಜದ ಆಕ್ರೋಶ ಸ್ಫೋಟಗೊಳ್ಳಬಹುದು ಎಂಬುದು ರಾಜ್ಯ ಸರ್ಕಾರದ ಗೃಹ ಇಲಾಖೆ ಮತ್ತು ಗುಪ್ತಚರ ಇಲಾಖೆಗೂ ಮೊದಲೇ ತಿಳಿದಿರು ವುದರಿಂದ ಮುಖ್ಯಮಂತ್ರಿ ಸೇರಿದಂತೆ ಸರ್ಕಾರದ ಬಹುತೇಕ ಎಲ್ಲಾ ಸಚಿವರು ಗೈರು ಆಗಿದ್ದರು.

ಆದರೆ ಸ್ವತಃ ಡಿಕೆಶಿ ಹೇಳಿಕೆ ನೀಡಿರುವಂತೆ ಅವರೇ ಕಾರ್ಯಕ್ರಮಕ್ಕೆ ಉದ್ದೇಶಪೂರ್ವಕವಾಗಿ ಆಗಮಿಸಿ ನಮ್ಮ ಸಮಾಜವನ್ನು ಅವಮಾನಿಸಿದ್ದಾರೆ. ವೇದಿಕೆಯಲ್ಲಿ ನಮ್ಮ ಸಮಾಜಕ್ಕೆ ಆಗಿರುವ ನೋವನ್ನು ಆಲಿಸದೇ ಕನಿಷ್ಠ ಪಕ್ಷ ಮನವಿ, ಅಹವಾಲು ಹೇಳಿಕೊಳ್ಳಲು ಅವಕಾಶವನ್ನು ಕೂಡ ನೀಡದೇ ನಾವು ನಿಮಗೆ ಮೀಸಲಾತಿಯಲ್ಲಿ ನ್ಯಾಯ ಕೊಟ್ಟಿದ್ದೇವೆ, ಬಂಜಾರ ನಿಗಮ ಮಾಡಿದ್ದೇವೆ ಎಂದು ಸುಳ್ಳು ಹೇಳಿ ಸಮಾಜದ ದಿಕ್ಕು ತಪ್ಪಿಸುವ ಪ್ರಯತ್ನ ಮಾಡಿದ್ದಾರೆ. ಈಗ ನ್ಯಾಯಕ್ಕಾಗಿ ಪ್ರಶ್ನೆ ಮಾಡಿದವರ ಮೇಲೆಯೇ ಕೇಸ್ ದಾಖಲಿಸಿರುವುದು ನಮ್ಮ ಸಮಾಜಕ್ಕೆ ಮಾಡಿದ ಅನ್ಯಾಯವಾಗಿದೆ. ಈ ಕೂಡಲೇ ರಾಜ್ಯ ಸರ್ಕಾರ ನಮ್ಮ ಮಾಲಾಧಾರಿಗಳ ಮೇಲೆ ಹಾಕಿರುವ ಎಫ್.ಐ.ಆರ್. ರದ್ದುಪಡಿಸಬೇಕು ಮತ್ತು ನಮ್ಮ ಸಮಾಜದ ಕ್ಷಮೆ ಕೇಳಬೇಕು ಹಾಗೂ ನಮ್ಮ ಸಮಾಜಕ್ಕೆ ಒಳಮೀಸಲಾತಿಯಲ್ಲಿ ಆಗಿರುವ ಅನ್ಯಾಯವನ್ನು ಸರಿಪಡಿಸಬೇಕು ಇಲ್ಲದಿದ್ದರೆ ನಮ್ಮ ಸಮಾಜದ ಸಂಘಟನೆಗಳ ನೇತೃತ್ವದಲ್ಲಿ ರಾಜ್ಯಾದ್ಯಂತ ಉಗ್ರ ಹೋರಾಟ ಮಾಡುತ್ತೇವೆ ಎಂದು ಸರ್ಕಾರವನ್ನು ಎಚ್ಚರಿಸಿದ್ದಾರೆ. ಈ ಪತ್ರಿಕಾ ಹೇಳಿಕೆಯಲ್ಲಿ ಗೋರ ಸೇನಾ ಮುಖಂಡರಾದ ವಿಶ್ವನಾಥ ಬಳಿಗೇರಿ, ಯಮನೂರಪ್ಪ ಭಾನಾಪುರ, ಪ್ರಕಾಶ ಬಳಗೇರಿ, ಹನುಮಂತ ಚವ್ಹಾಣ, ರಾಘವೇಂದ್ರ ಬಳಿಗೇರಿ, ನಾಗರಾಜ ಭಾನಾಪುರ, ಮಹೇಶ ಕಾರಭಾರಿ, ಶಶಿಕುಮಾರ ಕಾರಭಾರಿ, ವಿಜಯ ಚವ್ಹಾಣ, ಇತರೆ ಮುಖಂಡರು ಪತ್ರಿಕಾ ಹೇಳಿಕೆ ನೀಡಿದರು.

# 323 ಅಂಗನವಾಡಿ ಸಹಾಯಕಿಯರ ಹುದ್ದೆಗಳ ಭರ್ತಿಗೆ ಅರ್ಜಿ ಆಹ್ವಾನ

ಕಲಬುರಗಿ,ಫೆ.19.(ಕ.ವಾ.)-ಕಲಬುರಗಿ ಜಿಲ್ಲೆಯಲ್ಲಿ 2025-26ನೇ ಸಾಲಿನಲ್ಲಿ ಖಾಲಿಯಿರುವ 89 ಅಂಗನವಾಡಿ ಕಾರ್ಯಕರ್ತೆಯರ ಹಾಗೂ 323 ಅಂಗನವಾಡಿ ಸಹಾಯಕಿಯರ ಗೌರವಧನ ಸೇವೆಯ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮಹಿಳಾ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ ಎಂದು ಕಲಬುರಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರು ತಿಳಿಸಿದ್ದಾರೆ. ಅಂಗನವಾಡಿ ಕಾರ್ಯಕರ್ತೆ ಹಾಗೂ ಸಹಾಯಕಿಯರ ಖಾಲಿಯಿರುವ ಹುದ್ದೆಗಳ ವಿವರ ಇಂತಿದೆ. ಅಫಜಲಪೂರ: 06 ಅಂಗನವಾಡಿ ಕಾರ್ಯಕರ್ತೆಯರ ಹಾಗೂ 35 ಅಂಗನವಾಡಿ ಸಹಾಯಕಿಯರ ಹುದ್ದೆಗಳು. ಆಳಂದ: 20 ಅಂಗನವಾಡಿ ಕಾರ್ಯಕರ್ತೆಯರ ಹಾಗೂ 68 ಅಂಗನವಾಡಿ ಸಹಾಯಕಿಯರ ಹುದ್ದೆಗಳು. ಚಿಂಚೋಳಿ: 10 ಅಂಗನವಾಡಿ ಕಾರ್ಯಕರ್ತೆಯರ ಹಾಗೂ 39

ಅಂಗನವಾಡಿ ಸಹಾಯಕಿಯರ ಹುದ್ದೆಗಳು. ಚಿತ್ತಾಪೂರ: 05 ಅಂಗನವಾಡಿ ಕಾರ್ಯಕರ್ತೆಯರ ಹಾಗೂ 29 ಅಂಗನವಾಡಿ ಸಹಾಯಕಿಯರ ಹುದ್ದೆಗಳು. ಕಲಬುರಗಿ (ಗ್ರಾಮೀಣ): 13 ಅಂಗನವಾಡಿ ಕಾರ್ಯಕರ್ತೆಯರ ಹಾಗೂ 56 ಅಂಗನವಾಡಿ ಸಹಾಯಕಿಯರ ಹುದ್ದೆಗಳು. ಕಲಬುರಗಿ (ನಗರ): 11 ಅಂಗನವಾಡಿ ಸಹಾಯಕಿಯರ ಹುದ್ದೆಗಳು. ಜೇವರ್ಗಿ: 19 ಅಂಗನವಾಡಿ ಕಾರ್ಯಕರ್ತೆಯರ ಹಾಗೂ 25 ಅಂಗನವಾಡಿ ಸಹಾಯಕಿಯರ ಹುದ್ದೆಗಳು. ಸೇಡಂ: 04 ಅಂಗನವಾಡಿ ಕಾರ್ಯಕರ್ತೆಯರ ಹಾಗೂ 21 ಅಂಗನವಾಡಿ ಸಹಾಯಕಿಯರ ಹುದ್ದೆಗಳು. ಶಹಾಬಾದ: 12 ಅಂಗನವಾಡಿ ಕಾರ್ಯಕರ್ತೆಯರ ಹಾಗೂ 39 ಅಂಗನವಾಡಿ ಸಹಾಯಕಿಯರ ಹುದ್ದೆಗಳು. ಅರ್ಜಿ ಸಲ್ಲಿಸಲಿಚ್ಛಿಸುವ ಅರ್ಹ ಮಹಿಳಾ ಅಭ್ಯರ್ಥಿಗಳ ವಯೋಮಿತಿ 19 ರಿಂದ 35 ವರ್ಷದೊಳಗಿರಬೇಕು. ವಿಕಲಚೇತನರಿಗೆ

10 ವರ್ಷಗಳ ವಯೋಮಿತಿ ಸಡಿಲಿಕೆ ಇರುತ್ತದೆ. ಅಂಗನವಾಡಿ ಕಾರ್ಯಕರ್ತೆಯರ ಹುದ್ದೆಗೆ ಅಭ್ಯರ್ಥಿಗಳು ಕನಿಷ್ಠ ವಿದ್ಯಾರ್ಹತೆ ಪಿ.ಯು.ಸಿ. ತೇರ್ಗಡೆ ಹೊಂದಿರಬೇಕು. ಎಸ್.ಎಸ್.ಎಲ್.ಸಿ.ಯಲ್ಲಿ ಕನ್ನಡ ಭಾಷೆಯನ್ನು ಪ್ರಥಮ ಅಥವಾ ದ್ವಿತೀಯ ಭಾಷೆಯನ್ನಾಗಿ ಓದಿರಬೇಕು.

# ಶಿವಾಜಿ ಮಹಾರಾಜರು ಕೇವಲ ಪೂಜೆಗೆ ಸೀಮಿತವಾಗದೆ ತತ್ವಗಳು ಅಳವಡಿಕೆಯಾಗಲಿ: ಅಜಿತ ಪುಂಡಲೀಕ್

(ವರದಿ:ಪರಮೇಶ ರಾಂಪುರೆ)

• ಮಲ್ಲಮ್ಮ ನುಡಿ ವಾರ್ತೆ ಕಮಲನಗರ



ಶಿವಾಜಿ ಮಹಾರಾಜರು ಕೇವಲ ಪೂಜೆಗೆ ಸೀಮಿತವಾಗದೆ ತತ್ವಗಳು ಜೀವನದಲ್ಲಿ ಅಳವಡಿಕೆಯಾಗಲಿ ಎಂದು ಡಾ. ಅಜಿತ ಪುಂಡಲೀಕ ಅವರು ಹೇಳಿದರು.

ಗುರುವಾರ ತಾಲೂಕು ಆಡಳಿತದ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಛತ್ರಪತಿ ಶಿವಾಜಿ ಮಹಾರಾಜರ 396ನೇ ಜಯಂತಿ ಕಾರ್ಯಕ್ರಮವು ಅತ್ಯಂತ ಸಡಗರದಿಂದ ಜರುಗಿತು. ಈ ಸಂದರ್ಭದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿ ವಿಶೇಷ ಉಪನ್ಯಾಸ ನೀಡಿದ ಡಾ. ಅಜಿತ ಪುಂಡಲೀಕ್ ಅವರು ಮಹಾರಾಜರ ಜೀವನ ಮತ್ತು ಸಾಧನೆಗಳ ಕುರಿತು ಭಾಷಣ ನೀಡಿದರು.

ಶಿವಾಜಿ ಮಹಾರಾಜರು ಕೇವಲ ಯುದ್ಧ ಭೂಮಿಯ ವೀರರಷ್ಟೇ ಅಲ್ಲ, ಅವರು ಒಬ್ಬ ದಕ್ಷ ಆಡಳಿತಗಾರರಾಗಿದ್ದರು. ರೈತರ ಕಲ್ಯಾಣಕ್ಕಾಗಿ ಅವರು ಜಾರಿಗೆ ತಂದಿದ್ದ ಭೂಸುಧಾರಣೆ ಮತ್ತು ನೀರಾವರಿ ಯೋಜನೆಗಳು ಇಂದಿಗೂ ಮಾದರಿಯಾಗಿವೆ.

ಸ್ವರಾಜ್ಯದ ಆಡಳಿತದಲ್ಲಿ ಮಹಿಳೆಯರಿಗೆ ನೀಡುತ್ತಿದ್ದ ಗೌರವ ಮತ್ತು ರಕ್ಷಣೆ ಅದ್ವಿತೀಯವಾದುದು. ಸ್ತ್ರೀಯರ ಘನತೆಯನ್ನು ಎತ್ತಿಹಿಡಿಯುವಲ್ಲಿ ಮಹಾರಾಜರು ತೋರಿದ ದಾರಿಯನ್ನು ಇಂದಿನ ಸಮಾಜ ಪಾಲಿಸಬೇಕಿದೆ ಎಂದದು ಹೇಳಿದರು. ಇನ್ನೂರು ಮುಖ್ಯ ಅತಿಥಿ ಶೀತಲ ಅನಿರೋದ ಅವರು ಮಾತನಾಡಿ, ಶಿವಾಜಿ ಮಹಾರಾಜರು

> "ಶಿವಾಜಿ ಮಹಾರಾಜರ ಜಯಂತಿಯು ಕೇವಲ ಭಾವಚಿತ್ರದ ಪೂಜೆಗೆ ಅಥವಾ ಮೆರವಣಿಗೆಗೆ ಸೀಮಿತವಾಗಬಾರದು. ಅವರ ಶಿಸ್ತು, ನ್ಯಾಯಸಮ್ಮತ ಆಡಳಿತ ಮತ್ತು ದೇಶಪ್ರೇಮದ ತತ್ವಗಳನ್ನು ನಮ್ಮ ದೈನಂದಿನ ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ಈ ಜಯಂತಿ ಆಚರಣೆಗೆ ಪೂರ್ಣ ಅರ್ಥ ಸಿಗುತ್ತದೆ"
> ಡಾ. ಅಜಿತಾ ಪುಂಡಲೀಕ,
> ಉಪನ್ಯಾಸಕರು.

ಹೆಣ್ಣುಮಕ್ಕಳಿ ಅಪಾರ ಗೌರವದಿಂದ ಕಾಣುತಿದ್ದರು, ರೈತರ ಬಗ್ಗೆ ಹೆಚ್ಚಿನ ಒಲವು ಇಟ್ಟಿಕೊಂಡಿದರು. ನಾವು ಯುವ ಜನರು ಚಿತ್ರ ನಟರನ್ನು ಆದರ್ಶವಾಗಿ ಇಟ್ಟಿಕೊಳ್ಳದೆ ರಿಯಲ್ ಹೀರೋ ಶಿವಾಜಿ ಮಹಾರಾಜರನ್ನು ಆದರ್ಶವಾಗಿ ಇಡುವಂತೆ ಹೇಳಿದರು.

ಕಾರ್ಯಕ್ರಮದಲ್ಲಿ ಕು. ಹರ್ಷಾಲಿ ಪ್ರಕಾಶರಾವ ಚಾಂಗುಣೆ ಛತ್ರಪತಿ ಶಿವಾಜಿ ಮಹಾರಾಜರ ಕಿರಿಟದ ಪ್ರತಿರೂಪವಾಗಿ ಕಿರೀಟನ್ನು ತಟ್ಟೆಯಲ್ಲಿ ಇಟ್ಟಿಕೊಂಡು ಮತ್ತು ಖಡ್ಗ ದೊಂದಿಗೆ ವೇದಿಕೆಗೆ ಆಗಮಿಸಿ ಶಿವ ಗರ್ಜನೆ ಮಾಡಿದು ವೇದಿಕೆಯಲ್ಲಿ ನೆರದವರನ್ನು ರೋಮಾಂಚನ ಗೊಳ್ಳಿಸಿತ್ತು. ಕರ್ನಾಟಕ ಪಬ್ಲಿಕ್ ಶಾಲೆ ಉರ್ದು ಕಮಲನಗರನ 6 ನೇ ತರಗತಿ ವಿದ್ಯಾರ್ಥಿನಿ ಕುಮಾರಿ ಸಾದಿಯಾ ಶಿವಾಜಿ ಮಹಾರಾಜರ ಕೂರಿತು ಭಾಷಣ ಮಾಡಿದಳು. ಶಿವಾಜಿ ಜಯಂತಿ ಸಮಿತಿ ಅಧ್ಯಕ್ಷರರಾದ ವಿನೋದ ಚಾಂಗುಣೆ ಹಾಗೂ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಶ್ರೀಮತಿ ಸುಶೀಲಾ ಮಹೇಶ ಸಜ್ಜನಶೆಟ್ಟಿ ಮಾತನಾಡಿದರು.

ಈ ಸಂದರ್ಭದಲ್ಲಿ ತಾಲೂಕು ಆಡಳಿತದ ಅಧಿಕಾರಿಗಳು, ವಿವಿಧ ಸಂಘಟನೆಗಳ ಪದಾಧಿಕಾರಿಗಳು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು. ತಹಸೀಲ್ದಾರ ಅತಿಥಿಗಳನ್ನು ಸ್ವಾಗತಿಸಿದರು, ಮಹಾದೇವ ಮಡಿವಾಳ ನಿರೂಪಣೆ ಮಾಡಿದರು. ಇಓ ಹನಮಂತರಾಯ ಕೌಟಗೆ ವಂದಿಸಿದರು.

### ಶಿವಾಜಿ ಮಹಾರಾಜರ 396ನೇಯ ಜಯಂತಿ ಆಚರಣೆ

## ಹಿಂದೂ ಫೈರ್ ಬ್ರಾಂಡ್ ಬಸನಗೌಡ ಪಾಟೀಲ್ ಯತ್ನಾಳ ಅಮೋಘ ದೇಶಪತಿ ಆಗಮನ

• ಮಲ್ಲಮ್ಮ ನುಡಿ ವಾರ್ತೆ, ಗುರುಮಠಕಲ್



ಗುರುಮಠಕಲ್, ಫೆ.19: ಛತ್ರಪತಿ ಶಿವಾಜಿ ಮಹಾರಾಜರ 396ನೇ ಜಯಂತಿಯ ಅಂಗವಾಗಿ ಇದೇ ಫೆಬ್ರುವರಿ 21ರಂದು ಪಟ್ಟಣದಲ್ಲಿ ಭವ್ಯ ಮೆರವಣಿಗೆ ಹಾಗೂ ವೇದಿಕೆ ಕಾರ್ಯಕ್ರಮಗಳನ್ನುಆಯೋಜಿಸಲಾಗಿದೆ ಎಂದು ಹಿಂದೂ ಯುವ ಘರ್ಜನೆ ಸಮಿತಿ ಅಧ್ಯಕ್ಷ ವೆಂಕಟೇಶ್ ಮುದಿರಾಜ್ ತಿಳಿಸಿದ್ದಾರೆ.

ಮಲ್ಲಮ್ಮ ನುಡಿ ಪತ್ರಿಕೆಗೆ ಮಾಹಿತಿ ನೀಡಿದ ಅವರು, ಫೆಬ್ರುವರಿ 21ರಂದು ಮಧ್ಯಾಹ್ನ 12 ಗಂಟೆಗೆ ನಗರದ ನಗರೇಶ್ವರ ದೇವಸ್ಥಾನದಿಂದ ಶಿವಾಜಿ ಮಹಾರಾಜರ ಪ್ರತಿಮೆಗೆ ಪೂಜೆ ಹಾಗೂ ಮಾಲಾರ್ಪಣೆ ನೆರವೇರಿಸಿ, ನಂತರ ಮುಖ್ಯರಸ್ತೆ ಮೂಲಕ ನಿಜಶರಣ ಅಂಬಿಗರ ಚೌಡಯ್ಯ ವೃತ್ತದವರೆಗೆ ಭವ್ಯ ಮೆರವಣಿಗೆ ನಡೆಯಲಿದೆ ಎಂದು ಮಾಹಿತಿ ನೀಡಿದರು.

ಕಾರ್ಯಕ್ರಮಕ್ಕೆ ಮಾಜಿ ಕೇಂದ್ರ ಸಚಿವರು ಹಾಗೂ ಪ್ರಸ್ತುತ ವಿಜಯಪುರ ನಗರ ವಿಧಾನಸಭಾ ಕ್ಷೇತ್ರದ ಶಾಸಕರಾದ ಬಸನಗೌಡ ಆರ್ ಪಾಟೀಲ್ ಯತ್ನಾಳ ಮತ್ತು ರಿಫ್ಲೆಕ್ಷನ್ ಗ್ರೂಪ್

ಆಫ್ ಚಾನಲ್ ಸ್ಥಾಪಕ ಹಾಗೂ ಸಿಇಒ ಅಮೋಘ ದೇಶಪತಿ ಆಗಮಿಸಲಿದ್ದು, ಶಿವಾಜಿ ಮಹಾರಾಜರ ಜೀವನ ಚರಿತ್ರೆ ಕುರಿತು ವಿಶೇಷ ಉಪನ್ಯಾಸಗಳು ನಡೆಯಲಿವೆ ಎಂದರು.

ಶಿವಾಜಿ ಮಹಾರಾಜರ ಆದರ್ಶಗಳು, ದೇಶಭಕ್ತಿ, ಶೌರ್ಯ ಮತ್ತು ಆಡಳಿತ ದಕ್ಷತೆಯನ್ನು ಯುವಪೀಳಿಗೆಗೆ ಪರಿಚಯಿಸುವುದು ಈ ಆಚರಣೆಯ

ಮುಖ್ಯ ಉದ್ದೇಶವಾಗಿದೆ. ಗುರುಮಠಕಲ್ ಹಾಗೂ ಸುತ್ತಮುತ್ತಲಿನ ಭಾಗದ ಹಿಂದೂ ಭಾಂದವರು, ಶಾಲಾ ಕಾಲೇಜು ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಸಮಿತಿಯ ಮನವಿ ಮಾಡಿದರು.

## ಕರ್ನಾಟಕ ಒನ್ ಕೇಂದ್ರ ಆರಂಭಕ್ಕೆ ಅರ್ಜಿ ಆಹ್ವಾನ.

ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ ಸೇವೆಗಳು ಒಂದೇ ಸೂರಿನಡಿ ಒದಗಿಸಲು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕರ್ನಾಟಕ ಒನ್ ಫ್ರಾಂಚೈಸಿ ಕೇಂದ್ರಗಳನ್ನು ಸ್ಥಾಪಿಸಲಾಗಿದೆ, ಕರ್ನಾಟಕ ಒನ್ ಕೇಂದ್ರ ಆರಂಭಕ್ಕೆ ಅರ್ಜಿ ಆಹ್ವಾನಿಸಲಾಗಿದೆ ಎಂದು ಯಾದಗಿರಿ ಅಪರ ಜಿಲ್ಲಾಧಿಕಾರಿ ಶ್ರೀ ರಮೇಶ ಕೋಲಾರ ಅವರು ತಿಳಿಸಿದ್ದಾರೆ. ನಗರಸಭೆ ವ್ಯಾಪ್ತಿಯಲ್ಲಿ ಯಾದಗಿರಿ ನಗರ ಹಾಗೂ ಸುರಪುರ ನಗರ ಖಾಲಿ ಇರುವ ಕೇಂದ್ರಗಳಿಗೆ ಅರ್ಜಿ ಆಹ್ವಾನಿಸಿದೆ. ಮೂಲಕ ಈ ಭಾಗದಲ್ಲಿ ಜನರಿಗೆ ಸರ್ಕಾರದ ಹಲವು ಸೇವೆಗಳು ತಮ್ಮ ಮನೆ ಬಾಗಿಲಿಗೆ ತಲುಪುತ್ತಿವೆ. ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರದ ನೂತನ ಯೋಜನೆಗಳನ್ನು ಸೇವಾ ಸಿಂಧು ಪೋರ್ಟಲ್ ಮೂಲಕ ಅನುಷ್ಠಾನಗೊಳಿಸುತ್ತಿದ್ದು, ಯಾದಗಿರಿ ಜಿಲ್ಲೆಯಲ್ಲಿ ಖಾಲಿ ಇರುವ ಕರ್ನಾಟಕ ಒನ್ ಕೇಂದ್ರಗಳಿಗೆ ಆನ್‌ಲೈನ್ ತಿತಿತಿ.ಇಚಿಡಿಟಚಿ–ಣಚಿಇಚಿಂಟಿಜ.ರಠತ.ಟಿ/ರಿಣಭಟುಛಿ/ಜಿಡಿಚಿಟಿ–ಛಿುಜಜ ಣಜಡಿಟ ನಲ್ಲಿ 2026ರ ಮಾರ್ಚ್ 2ರ ರಾತ್ರಿ 8 ಗಂಟೆಯ ವರೆಗೆ ಅರ್ಜಿಸಲ್ಲಿಸಬೇಕು. ಆಸಕ್ತಿ ಇರುವ ಅಭ್ಯರ್ಥಿಗಳು ತಮ್ಮ ಅರ್ಜಿಗಳನ್ನು ಆನ್‌ಲೈನ್‌ನಲ್ಲಿ ಮೂಲಕ ಮಾತ್ರ ಅರ್ಜಿ ಸಲ್ಲಿಸಬೇಕು. ಯಾವುದೆ ರೀತಿಯಲ್ಲಿ ಸಲ್ಲಿಸುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲವೆಂದು ತಿಳಿಸಿದೆ. ಹೆಚ್ಚಿನ ಮಾಹಿತಿ ಇ–ಆಡಳಿತ ಶಾಖೆಯನ್ನು ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸರಕಾರದಿಂದ ಮಾಧ್ಯಮದ ಮೇಲೆ ಸವಾರಿ ಸರಿಯಲ್ಲ ವಿವಾದಿತ ನಿಯಮಾವಳಿ ವಾಪಸ್ಸಗೆ ಸಂಕೀನ್ ಆಗ್ರಹ

ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ರಾಜ್ಯ ಸರಕಾರ ವಿಧಾನಸೌಧದ ಅಂಗಳದಲ್ಲಿ ಮಾಧ್ಯಮಗಳು ಹೀಗೆ ಇರಬೇಕು ಎಂದು ನಿಯಾಮವಳಿ ರೂಪಿಸಿರುವುದು ಮಾಧ್ಯಮಗಳ ಮೇಲಿನ ಹತ್ತಿಕ್ಕುವ ಕೆಲಸವಾಗಿದೆ. ಇದು ಪ್ರಜಾಪ್ರಭುತ್ವ ವಿರೋಧಿ ನಡೆಯಾಗಿದ್ದು ಸರಕಾರ ತನ್ನ ಆದೇಶವನ್ನು ಕೂಡಲೇ ವಾಪಸ್ಸು ಪಡೆಯಬೇಕು ಎಂದು ಜಿಲ್ಲಾ ಕಾರ್ಯನಿರತ

ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಮಲ್ಲಪ್ಪ ಸಂಕೀನ್ ಆಗ್ರಹಿಸಿದ್ದಾರೆ. ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಪ್ರಜಾಪ್ರಭುತ್ವದ ಪವಿತ್ರ ಸ್ಥಳದಲ್ಲಿಯೇ ಮಾಧ್ಯಮಗಳಿಗೆ ಮೂಗುಧಾರ ಹಾಕುವಂತಹ ಕೆಲಸ ಮಾಡುತ್ತಿರುವುದು ಆಘಾತಕಾರಿಯಾಗಿದೆ. ಇದು ಜನರ ಧ್ವನಿಯನ್ನೇ ಕಸಿಯುವಂತಹ ಕುತಂತ್ರವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇದನ್ನು ಗಂಭೀರವಾಗಿ ಪರಿಗಣಿಸಲು ಮುಂದಾಗಬೇಕಿದೆ. ಮಾಧ್ಯಮದ ಮೇಲೆ ಸವಾರಿ ಮಾಡಲು ಹೊರಟಿರುವ ಮತ್ತು ವಿವಾದಿತ ಆದೇಶ ಹೊರಡಿಸಿದ ಅಧಿಕಾರಿಗಳ





ಮೇಲೆ ಕಠಿಣ ಕ್ರಮಕೈಗೊಳ್ಳಬೇಕು ಎಂದು ಹೇಳಿದರು.

ವಿಧಾನ ಸೌಧದಲ್ಲಿ ಭದ್ರತೆಯ ನೆಪವೊಡ್ಡಿ ಮಾಧ್ಯಮದವರ ವಾಕ್ ಸ್ವಾತಂತ್ರ್ಯ ವನ್ನೇ ಹರಣ ಮಾಡುವಂತಹ ದುಸ್ಸಾಹಸಕ್ಕೆ ಸರಕಾರ ಕೈ ಹಾಕಿರುವುದು ನಿಜಕ್ಕೂ ಆಘಾತಕಾರಿ ಆಗಿದೆ ಎಂದು ಹೇಳಿದರು.

ಭದ್ರತೆ ಸಮಸ್ಯೆಗಳು ಇದ್ದರೇ ಸರಕಾರ ಇರುವ ಲೋಪವನ್ನು ಸರಿಪಡಿಸುವಂತಹ ಕೆಲಸ ಮಾಡಬೇಕು. ಅದು ಬಿಟ್ಟು ಮಾಧ್ಯಮಗಳ ಮೇಲೆ ಸವಾರಿ ಮಾಡಲು ಸರಕಾರ ಹೊರಟಿರುವುದು ನಿಜಕ್ಕೂ ಹಾಸ್ಯಾಸ್ಪದವಾಗಿದೆ. ಮಾಧ್ಯಮಗಳಿಂದ ಯಾವುದೇ ಗಣ್ಯವ್ಯಕ್ತಿಗಳ ಭದ್ರತೆಗೆ ಲೋಪವಾಗುವುದಿಲ್ಲ. ಇದನ್ನು ಮೊದಲು ಸರಕಾರ ಅರಿತು–ಕೊಂಡು ಆಡಳಿತ ನಡೆಸಬೇಕು ಎಂದು ಒತ್ತಾಯಿಸಿದರು. ಸರಕಾರ ಆದೇಶವನ್ನು ಕೂಡಲೇ ವಾಪಸ್ಸು ಪಡೆದು ಮಾಧ್ಯಮಗಳು ಮುಕ್ತವಾಗಿ ಕೆಲಸ ಮಾಡಲು ಅವಕಾಶ ಮಾಡಿಕೊಡಬೇಕು ಎಂದು ಒತ್ತಾಯಿಸಿದರು.

## ಯುವಜನಾಂಗಕ್ಕೆ ಶಿವಾಜಿ ಹೋರಾಟ ಸ್ಫೂರ್ತಿ: ಜಿಲ್ಲಾಧಿಕಾರಿ

ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಛತ್ರಪತಿ ಶಿವಾಜಿ ಅವರ ಸ್ವ–ರಾಜ್ಯದ ಹೋರಾಟ,

ತ್ಯಾಗ,ಬಲಿದಾನವುಯುವಜನಾಂಗಕ್ಕೆ ಸ್ಫೂರ್ತಿಯಾಗಿದೆಎಂದುಜಿಲ್ಲಾಧಿಕಾರಿ ಶ್ರೀ ಹರ್ಷಲ್ ಭೋಯರ್ ಅವರು ಹೇಳಿದರು. ನಗರದ ಭವಾನಿ ಮಂದಿರದಲ್ಲಿ ಇಂದು ಛತ್ರಪತಿ ಶಿವಾಜಿ ಅವರ ಜಯಂತ್ಯೋತ್ಸವ ಅಂಗವಾಗಿ, ಶಿವಾಜಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಗೌರವ ಅರ್ಪಿಸಿ ಅವರು ಮಾತನಾಡಿದರು. ಛತ್ರಪತಿ ಶಿವಾಜಿ ಮಹಾರಾಜರು ಮರಾಠಿಗರಿಗೆ ದೈವಿಸ್ವರೂಪಿಯಾಗಿದ್ದಾರೆ. ಸ್ವರಾಜ್ಯಕ್ಕಾಗಿ ಅವರ ಹೋರಾಟ,ಪರಾಕ್ರಮ, ತ್ಯಾಗ ಬಲಿದಾನ ಯುವಪೀಳಿಗೆಗೆ ಸ್ಫೂರ್ತಿಯಾಗಿದೆ ಎಂದು ಹೇಳಿದರು. ಛತ್ರಪತಿ ಶಿವಾಜಿ ಅವರ ಮೊಘಲ್ ದೊರೆ ಔರಂಗಜೇಬ್ ಜೊತೆಗಿನ ಸಂಘರ್ಷ, ಅಫ್ಘಾನಿಸ್ತಾನದಿಂದ ಪೇಶಾವರವರೆಗೆ ಮರಾಠಾ ಸಾಮ್ರಾಜ್ಯದ ವಿಸ್ತಾರ ನಮಗೆಲ್ಲರಿಗೆ ಗರ್ವದ ವಿಷಯವಾಗಿದೆ. ಛತ್ರಪತಿ ಶಿವಾಜಿ ಅವರು ಎಲ್ಲಾ ಸಮಾಜಕ್ಕೆ ಗೌರವ ನೀಡಿದ್ದರು. ಅವರ ಸೇನೆಯಲ್ಲಿ ಮುಸ್ಲಿಮರು ಕೂಡ ಇದ್ದರು ಎಂದ ಅವರು, ಇಂದು ಈ ಮಹಾನಾಯಕನ ಜಯಂತಿಗೆ ಸರ್ಕಾರ ಅನುವು ಮಾಡಿಕೊಟ್ಟಿರುವುದು ಎಲ್ಲರಿಗೂ ಐತಿಹಾಸಿಕ ದಿನವಾಗಿದೆ ಎಂದು ಹೇಳಿದರು. ಇಂತಹ ಕಾರ್ಯಕ್ರಮದಲ್ಲಿ ಭಾಗಿಯಾಗಿ ಮರಾಠಾ ಸಮಾಜದವರೂ ಕೂಡ ಎಲ್ಲರೊಂದಿಗೆ ಬೆರೆತು ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿ ಕೊಡುಗೆ ನೀಡಿ ಎಂದು ಅವರು ಸಲಹೆ



ನೀಡಿದರು. ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿದ ಶ್ರೀಮತಿ ಪಾರ್ವತಿ ಬುದೂರ ಅವರು, ತಾಯಿ ಜೀಜಾಬಾಯಿ ಅವರಿಂದ ಸಂಸ್ಕಾರ ಪಡೆದ ಶಿವಾಜಿ ಧೈರ್ಯ,ಸ್ಥೈರ್ಯ, ದೇಶಾಭಿಮಾನ,ಮಹಿಳೆಯರಿಗೆ ಗೌರವ ಗುಣ ಬೆಳೆಸಿಕೊಂಡಿದ್ದರು. ಗೇರಿಲ್ಲಾ ಯುದ್ಧ ನೀತಿಯ ಮೂಲಕ ಸ್ವಧರ್ಮ ರಕ್ಷಣೆ ಹಾಗೂ ಪರಕಿಂ–ಯರಿಂದ ದಾಳಿಯನ್ನು ತಡೆದರು. ಅನ್ಯಧರ್ಮ, ಪರಸ್ತ್ರೀಯರ,ರೈತರ ಬಗ್ಗೆ ಗೌರವಾದರ ಹೊಂದಿದ್ದ ಶಿವಾಜಿ ಮೂರನೇ ಒಂದು ಭಾಗದಷ್ಟು ಮುಸ್ಲಿಂ ಸೈನಿಕರನ್ನು ಹೊಂದಿರುವುದು ವಿಶೇಷವಾಗಿತ್ತು. ದೇಶದ ಗಡಿ ರಕ್ಷಣೆ,ಸನಾತನ ಸಂಸ್ಕೃತಿ ರಕ್ಷಣೆ, ಸ್ವರಾಜ್ಯಕ್ಕಾಗಿ ಹೋರಾಟ, ದೇಶ, ನ್ಯಾಯಕ್ಕಾಗಿ ಅವರ ಹೋರಾಟ ಸ್ಮರಣೀಯ ವಾಗಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಗಾಯತ್ರಿ ಧವಳೆ ಶಿವಾಜಿ ಕುರಿತು ಘೋಷವಾಕ್ಯ ಹೇಳಿದರು. ಮಹಿಳೆಯರಿಂದ ಶಿವಾಜಿ ಕುರಿತು ತೊಟ್ಟಿಲು ತೂಗುವ ಕಾರ್ಯಕ್ರಮ ನಡೆಯಿತು.

ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಬಾಬುರಾವ್ ಕಾಡ್ಲೂರ್, ಕಾರ್ಯಕ್ರಮ ಉದ್ಘಾಟಿಸಿದರು.

ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ಶ್ರೀ ಪೃಥ್ವಿಕ್ ಶಂಕರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕಿ ಉತ್ತರಾದೇವಿ ಮಠಪತಿ, ಮರಾಠಾ ಸಮಾಜದ ಜಿಲ್ಲಾಧ್ಯಕ್ಷ ರಾಜಕುಮಾರ್ ಢವಳೆ, ದಿಲಿಪ್ ಜಾದವ್,ಗಣೇಶ್ ಬಾಪಕರ್,ಇತರರು ಉಪಸ್ಥಿತರಿದ್ದರು

## ವಿದ್ಯಾರ್ಥಿಗಳು ಕಲಿಕಾ ಸಾಮಗ್ರಿಗಳ ಸದುಪಯೋಗ ಪಡೆಯಲಿ: ಭಾರತಿ



ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ.

ವಿದ್ಯಾರ್ಥಿಗಳು ನಿತ್ಯ ಶಾಲೆಗೆ ಬಂದು, ಆಟ ಪಾಠದ ಜೊತೆಗೆ ಕಲಿಕಾ ಸಾಮಗ್ರಿಗಳನ್ನು ಸದುಪಯೋಗ ಪಡೆದು ಕೊಳ್ಳಬೇಕು ಎಂದು ಯಾದಗಿರಿ ಎಸ್ ಬಿ ಐ ಬ್ಯಾಂಕ್ ನ ಮುಖ್ಯ ವ್ಯವಸ್ಥಾಪಕಿ ಶಾಂತ ಭಾರತಿ ಜಿ. ಹೇಳಿದರು. ಗುರುವಾರ ನಗರದ ಸ್ಟೇಷನ್ ಏರಿಯಾ ಹಾಗೂ ಶಿವನಗರದಲ್ಲಿನ ಎರಡು ಅಂಗನವಾಡಿ ಶಾಲೆಗಳ ಸುಂದರಿಕರಣ, ಮೂಲಭೂತ ಸೌಕರ್ಯ ಸೇರಿದಂತೆ ಕಲಿಕಾ ಸಾಮಗ್ರಿಗಳನ್ನು ವಿತರಿಸಿ ಮಾತನಾಡಿ, ಎಸ್ ಬಿ ಐ ಬ್ಯಾಂಕ್, ಹಾಗೂ ಸುರಭಿ, ಫೌಂಡೇಶನ್ ಟ್ರಸ್ಟ್ ವತಿಯಿಂದ ನಗರದಲ್ಲಿನ ಎರಡು ಅಂಗನವಾಡಿ ಶಾಲೆ ದುರಸ್ಥಿ ಹಾಗೂ ವಿದ್ಯಾರ್ಥಿಗಳಿಗೆ ಕಲಿಕಾ ಸಾಮಗ್ರಿಗಳನ್ನು ವಿತರಿಸುತ್ತಿದ್ದು,

ವಿದ್ಯಾರ್ಥಿಗಳು ಇವುಗಳ ಸದುಪಯೋಗ ಪಡೆಯಬೇಕು ಎಂದರು. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಧಿಕ್ಷಕಿ ದೀಪಿಕಾ ಬಿ. ವಿ. ಮಾತನಾಡಿ , ಎಸ್ ಬಿ ಐ ಬ್ಯಾಂಕ್ ಹಾಗೂ ಸುರಭಿ ಫೌಂಡೇಶನ್ ಟ್ರಸ್ಟ್ ವತಿಯಿಂದ ನಗದರದಲ್ಲಿನ ಎರಡು ಅಂಗನವಾಡಿ ಶಾಲೆಗಳ ಸುಣ್ಣ, ಬಣ್ಣ,ಗಳಿಂದ ಸುಂದರಿಕರಿಸುವ ಹಾಗೂ ಕಲಿಕಾ ಸಾಮಗ್ರಿಗಳನ್ನು ಉಚಿತವಾಗಿ ನೀಡುವ ಕಾರ್ಯ ಮಾದರಿ ಕಾರ್ಯವಾಗಿದೆ ಎಂದರು. ಕೊಲ್ಲೂರು ಮಲ್ಲಪ್ಪ ಪದವಿ ಕಾಲೇಜು ಪ್ರಾಂಶುಪಾಲ ಕಿರಣಕುಮಾರ್ ಎಚ್.ಕೆ ಮಾತನಾಡಿ, ಎಸ್ ಬಿ ಐ ಬ್ಯಾಂಕ್ ಹಾಗೂ ಸುರಭಿ ಫೌಂಡೇಶನ್ ಟ್ರಸ್ಟ್ ಸಹಯೋಗದಲ್ಲಿನ ಕಾರ್ಯ ಮಹತ್ತರವಾಗಿದ್ದು, ಮುಂದಿನ ದಿನಗಳಲ್ಲಿ ಇನ್ನು ಹೆಚ್ಚಿನ ಶಾಲೆಗಳ ನೆರವಿಗೆ ಮುಂದಾಗಲಿ ಎಂದರು. ಈ ಸಂಧರ್ಭದಲ್ಲಿ ನಗರಸಭೆ ಸದಸ್ಯೆ ಚಂದ್ರಕಲಾ ಮಡ್ಡಿ, ಬ್ಯಾಂಕ್ ನ ಸಹಾಯಕ ವ್ಯವಸ್ಥಾಪಕ ಅಮರೇಶ್, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಹಾಯಕ ಅಧಿಕ್ಷಕ ನರೇಂದ್ರ ರೆಡ್ಡಿ, ಮೇಲ್ವಿಚಾರಕಿ ಸೈದಾ ರೂಖಿಯಾ ಖಾತೂಮ್, ಸುರಭಿ ಫೌಂಡೇಶನ್ ಟ್ರಸ್ಟ್ ನ ಕ್ಷೇತ್ರ ಸಂಯೋಜಕರಾದ ರಾಜು, ರವಿ, ಕಾಂಗ್ರೆಸ್ ಮುಖಂಡ ಪ್ರವೀಣ್ ಕುಮಾರ್, ಅಂಗನವಾಡಿ ಕಾರ್ಯಕರ್ತೆರಾದ ರೇಣುಕಾ, ಚಂದ್ರಕಲಾ, ಸೇರಿದಂತೆ ವಿದ್ಯಾರ್ಥಿಗಳು ಇದ್ದರು.

### ಹೇಮರಡ್ಡಿ ಮಲ್ಲಮ್ಮ ಶಾಲೆಯಲ್ಲಿ ಸಂಭ್ರಮದ ಸಮಾರಂಭ

## ಮಾತೃ ವಂದನೆ, ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ

• ಮಲ್ಲಮ್ಮ ನುಡಿ ವಾರ್ತೆ ಕೆಂಭಾವಿ

ಪಟ್ಟಣದ ಶ್ರೀ ಮಹಾ ಶಿವಶರಣೆ ಹೇಮರಡ್ಡಿ ಮಲ್ಲಮ್ಮ ಆಂಗ್ಲ ಮಾಧ್ಯಮ ಪ್ರೌಢ ಶಾಲೆಯಲ್ಲಿ ಗುರುವಾರ ಹಮ್ಮಿಕೊಂಡಿದ್ದ ಮಾತೃ ವಂದನಾ ಹಾಗೂ ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭವು ಅತ್ಯಂತ ಭಾವಪೂರ್ಣವಾಗಿ ನೆರವೇರಿತು.




ಕಾರ್ಯಕ್ರಮದಲ್ಲಿ ಭಾಗವಹಿಸಿದ ಸಾಹಿತಿ ಹಳ್ಳೇರಾವ್ ಕುಲ್ಕರ್ಣಿ ಮಾತನಾಡಿ, "ಶಾಲೆಗಳಲ್ಲಿ ತಾಯಿಯನ್ನು ಗೌರವಿಸುವ 'ಮಾತೃ ವಂದನಾ' ಕಾರ್ಯಕ್ರಮ ಆಯೋಜಿಸುವುದು ಒಂದು ಶ್ರೇಷ್ಠ ಸಾಂಸ್ಕೃತಿಕ ಪರಂಪರೆ. ಇಂದಿನ ಆಧುನಿಕ ಯುಗದಲ್ಲಿ ಮಕ್ಕಳಿಗೆ ಶೈಕ್ಷಣಿಕ ಅಂಕಗಳಿಗಿಂತ 'ಸಂಸ್ಕಾರ' ಮುಖ್ಯ. ಯಾರು ಗುರು–ಹಿರಿಯರನ್ನು ಗೌರವಿಸಿ, ಶಿಸ್ತು ಮತ್ತು ಸಮಯ ಪ್ರಜ್ಞೆಯನ್ನು ಮೈಗೂಡಿಸಿಕೊಳ್ಳುತ್ತಾರೋ ಅವರು ಮಾತ್ರ ಜೀವನದಲ್ಲಿ ಯಶಸ್ವಿಯಾಗಲು ಸಾಧ್ಯ. ಸತ್ಯ ಮತ್ತು ನಿಷ್ಠೆಯ ಹಾದಿ ನಿಮ್ಮನ್ನು ಉನ್ನತ ಸ್ಥಾನಕ್ಕೇರಿಸುತ್ತದೆ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಸಿಆರ್‌ಪಿ ಬಂದೇನವಾಜ್ ನಾಲತವಾಡ ಮಾತನಾಡಿ, ವಿದ್ಯಾರ್ಥಿ ಜೀವನದಲ್ಲಿ ಎಸ್‌ಎಸ್‌ಎಲ್‌ಸಿ ಎಂಬುದು ಅದೊಂದು ಹೊಸ ಯಾತ್ರೆಯ ಆರಂಭ. ಪರೀಕ್ಷಾ ಪದ್ಧತಿಯ ಬದಲಾವಣೆಯು ವಿದ್ಯಾರ್ಥಿಗಳಿಗೆ ಪೂರಕವಾಗಿದ್ದು, ಇದರ ಸದುಪಯೋಗ ಪಡೆದುಕೊಳ್ಳಬೇಕು. ನಿಮ್ಮ ಸಾಧನೆಯ ಮೂಲಕ ಪೋಷಕರ ಮತ್ತು ಊರಿನ ಕೀರ್ತಿಯನ್ನು ಬೆಳಗಬೇಕು. ದೇಶದ ಉತ್ತಮ ಪ್ರಜೆಗಳಾಗಿ ಹೊರಹೊಮ್ಮಿ, ಎಂದು ಹೇಳಿದರು.

ಕೆಂಭಾವಿ ಹಿರೇಮಠದ ಷ.ಬ್ರ ಚನ್ನಬಸವ ಶಿವಾಚಾರ್ಯರು ಹಾಗೂ ನಗನೂರು ಸೂಗೂರೇಶ್ವರ ಶಿವಾಚಾರ್ಯರು ದಿವ್ಯ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆ ರಾಮನಗೌಡ ಹೊಸಮನಿ ಯಾಳಗಿ ವಹಿಸಿದ್ದರು. ಪ್ರಮುಖರಾದ ಹಿರಿಯ ಪತ್ರಕರ್ತ ಸಂಜೀವರಾವ್ ಕುಲ್ಕರ್ಣಿ, ಹಳ್ಳಪ್ಪಗೌಡ ಪರಸನಹಳ್ಳಿ, ಪವನ ಕುಲ್ಕರ್ಣಿ, ಡಿ.ಸಿ ಪಾಟೀಲ್, ಡಾ. ಯಂಕನಗೌಡ ಪಾಟೀಲ್, ರಾಜಶೇಖರಯ್ಯ ಹಿರೇಮಠ, ಗುರು ಕುಂಬಾರ ಸೇರಿದಂತೆ ಶಾಲೆಯ ಶಿಕ್ಷಕ ವೃಂದ, ವಿದ್ಯಾರ್ಥಿಗಳು ಮತ್ತು ಪೋಷಕರು ಉಪಸ್ಥಿತರಿದ್ದರು. ಶಿಕ್ಷಕಿ ಭಾರತಿ ಪಾಟೀಲ್ ಕಾರ್ಯಕ್ರಮ ನಡೆಸಿಕೊಟ್ಟರು. ಸಂಸ್ಥೆಯ ಸಂಚಾಲಕ ಮೋಹನರಡ್ಡಿ ಡಿಗ್ಗಾವಿ ಸ್ವಾಗತಿಸಿದರು.

ಇದೇ ಸಂದರ್ಭದಲ್ಲಿ ವಿದ್ಯಾರ್ಥಿಗಳು ತಮ್ಮ ತಾಯಂದಿರ ಪಾದಪೂಜೆ ಮಾಡುವ ಮೂಲಕ 'ಮಾತೃ ವಂದನೆ' ಸಲ್ಲಿಸಿದ್ದು ಕಾರ್ಯಕ್ರಮದ ವಿಶೇಷವಾಗಿತ್ತು. ನಂತರ ಶಾಲೆ ಮಕ್ಕಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

## ರಸ್ತೆ ಸುರಕ್ಷತೆಗೆ ಅಗತ್ಯ ಕ್ರಮವಹಿಸಿ: ಜಿಲ್ಲಾಧಿಕಾರಿ



• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ

ರಸ್ತೆ ಸುರಕ್ಷತೆ ಕುರಿತು ಈ ಸಮಿತಿ ಸಭೆಯಲ್ಲಿ ತೆಗೆದುಕೊಳ್ಳುವ ನಿರ್ಣಯಗಳನ್ನು ಪಾಲಿಸುವ ಮೂಲಕ ಜಿಲ್ಲೆಯ ರಸ್ತೆ ಸುರಕ್ಷತೆಗೆ ಸಂಬಂಧಿಸಿದ ಅಧಿಕಾರಿಗಳು ಅಗತ್ಯ ಕ್ರಮವಹಿಸುವಂತೆ ಜಿಲ್ಲಾಧಿಕಾರಿ ಡಾ. ಸುರೇಶ ಬಿ. ಇಟ್ನಾಳ ಅವರು ಸೂಚನೆ ನೀಡಿದರು.

ಕೊಪ್ಪಳ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಬುಧವಾರ ನಡೆದ ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿ ಸಭೆಯ ಅಧ್ಯಕ್ಷತೆವಹಿಸಿ ಅವರು ಮಾತನಾಡಿದರು.

ರಸ್ತೆ ಸುರಕ್ಷತೆ ಕುರಿತು ಇರುವ ಸುಪ್ರೀಂಕೋರ್ಟ್ ನಿರ್ದೇಶನಗಳನ್ನು ಸಂಬಂಧಿಸಿದ ಇಲಾಖೆಯ ಅಧಿಕಾರಿಗಳು ಪಾಲನೆ ಮಾಡಬೇಕು. ಇಲ್ಲದಿದ್ದರೆ ನ್ಯಾಯಾಲಯದ ಆದೇಶದ ಉಲ್ಲಂಘನೆಯಾಗುತ್ತದೆ. ಹಾಗಾಗಿ ಅಧಿಕಾರಿಗಳು ಎಚ್ಚರಿಕೆಯಿಂದ ಕೆಲಸ ಮಾಡಬೇಕು. ಜಿಲ್ಲೆಯಲ್ಲಿ ಹಾದು ಹೋಗಿರುವ ರಾಷ್ಟ್ರೀಯ, ರಾಜ್ಯ ಮತ್ತು ಜಿಲ್ಲಾ ಹೆದ್ದಾರಿಗಳ ಹಾಗೂ ಫ್ಲೈ ಓವರ್‌ಗಳಲ್ಲಿರುವ ರಸ್ತೆ ಗುಂಡಿಗಳನ್ನು ಕೂಡಲೇ ಮುಚ್ಚುವಂತೆ ಅಗತ್ಯ ಕ್ರಮ ಕೈಗೊಳ್ಳಬೇಕು. ಈ ಕುರಿತು ಸರ್ವಿಸ್ ರಸ್ತೆಗಳಲ್ಲಿಯೂ ಗಮನ ಹರಿಸಬೇಕು. ರಸ್ತೆಗಳಲ್ಲಿ ಬ್ಲ್ಯಾಕ ಸ್ಪಾಟಗಳಿದ್ದರೆ ತಕ್ಷಣ ಅವುಗಳನ್ನು ಸರಿಪಡಿಸಬೇಕು. ಬ್ಲಾಕ್‌ಸ್ಪಾಟ್ ರಸ್ತೆಗಳಲ್ಲಿ ಸಿಸಿಟಿವಿ ಹಾಗೂ ವಿದ್ಯುತ್ ದೀಪಗಳನ್ನು ಅಳವಡಿಕೆ ಕಡ್ಡಾಯವಾಗಿದೆ ಎಂದರು.

ರಸ್ತೆ ಸುರಕ್ಷತೆ ಕುರಿತು ಜಾಗೃತಿ ಮೂಡಿಸಿದಾಗ ಅಪಘಾತಗಳ ಸಂಖ್ಯೆ ಕಡಿಮೆಯಾಗುತ್ತವೆ. ಈ ನಿಟ್ಟಿನಲ್ಲಿ ರಸ್ತೆ ಸುರಕ್ಷತೆಗೆ ಹೆಚ್ಚಿನ ಅರಿವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಜಿಲ್ಲೆಯ ಎಲ್ಲಾ ಶಾಲಾ ಕಾಲೇಜು ಬಸ್ಸುಗಳಿಗೆ ಜಿ.ಪಿ.ಆರ್.ಎಸ್. ಅಳವಡಿಸಬೇಕು. ಜಿ.ಪಿ.ಆರ್.ಎಸ್. ಅಳವಡಿಸದ ಶಾಲಾ ವಾಹನಗಳನ್ನು ಸೀಜ್ ಮಾಡಲು ಕ್ರಮ ಕೈಗೊಳ್ಳಬೇಕು. ವಾಹನ ಚಾಲಕರಿಗೆ ಮಕ್ಕಳ ಸುರಕ್ಷತೆಯ ಬಗ್ಗೆಯೂ ತಿಳಿಸಬೇಕು. ಎಲ್ಲಾ ಶಾಲಾ ಕಾಲೇಜು ಬಸ್ಸುಗಳಿಗೆ ಹಾಗೂ ಸರ್ಕಾರಿ ಕಚೇರಿ ವಾಹನಗಳನ್ನು ಸರಿಯಾಗಿ ಪರಿಶೀಲಿಸಿ ವಾಹನದ ಸುಸ್ಥಿತಿ ಪ್ರಮಾಣ ಪತ್ರವನ್ನು ನೀಡಬೇಕು ಎಂದು ಹೇಳಿದರು.

ಕೊಪ್ಪಳ ಸಂಸದರಾದ ಕೆ.ರಾಜಶೇಖರ ಬಸವರಾಜ ಹಿಟ್ನಾಳ ಅವರು ಸಭೆಯಲ್ಲಿ ಭಾಗವಹಿಸಿ ಮಾತನಾಡಿ, ಹೊಸಳ್ಳಿ ರಸ್ತೆ ಮೇಲ್ಸೇತುವೆಯ ಸರ್ವಿಸ್ ರಸ್ತೆಯನ್ನು ಅಗಲೀಕರಣ ಮಾಡಿ, ಟ್ರಾಫಿಕ್ ಆಗದಂತೆ ಕ್ರಮ ವಹಿಸಬೇಕು. ರಾಷ್ಟ್ರೀಯ, ರಾಜ್ಯ ಹಾಗೂ ಜಿಲ್ಲಾ ಹೆದ್ದಾರಿಗಳಲ್ಲಿ ವಿದ್ಯುತ್ ದೀಪ, ಸಿಸಿಟಿವಿ ಮತ್ತು ಸಾರ್ವಜನಿಕರಿಗೆ ಇತರೆ ಅಗತ್ಯ ಸೌಲಭ್ಯಗಳನ್ನು ಕಲ್ಪಿಸುವ ಕಾಮಗಾರಿಯನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಬೇಕು. ರಾಷ್ಟ್ರೀಯ ಹೆದ್ದಾರಿಯಲ್ಲಿನ ಅನಧಿಕೃತ ರಸ್ತೆ ಉಬ್ಬುಗಳನ್ನು ತೆರವುಗೊಳಿಸಲು ನಿಯಮಾನುಸಾರ ಕ್ರಮ ಕೈಗೊಳ್ಳಿ. ರಾಷ್ಟ್ರೀಯ ಹೆದ್ದಾರಿಗಳಲ್ಲಿ ಈಗಾಗಲೇ ಅಳವಡಿಸಿರುವ ವಿದ್ಯುತ್ ದೀಪ, ಸ್ಪೀಡ್‌ಗನ್ ಮತ್ತು ಸಿ.ಸಿ.ಟಿ.ವಿ ಕ್ಯಾಮೆರಾಗಳು ಎಲ್ಲವೂ ಕಾರ್ಯನಿರ್ವಹಿಸುತ್ತಿರಬೇಕು. ರಸ್ತೆ ಸುರಕ್ಷತೆ ಕುರಿತು ರಸ್ತೆಗಳಲ್ಲಿ ಕಡ್ಡಾಯವಾಗಿ ಮಾಹಿತಿ ಫಲಕ ಹಾಗೂ ಸೂಚನಾ ಫಲಕಗಳ ಅಳವಡಿಸಿರಬೇಕು ಎಂದು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಈ ಸಭೆಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ರಾಮ್ ಎಲ್. ಅರಸಿದ್ದಿ, ಲೋಕೋಪಯೋಗಿ ಇಲಾಖೆಯ ಕಾರ್ಯಪಾಲಕ ಅಭಿಯಂತರರಾದ ಹೇಮಂತ್, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಹೇಮಂತ್ ಕುಮಾರ, ಕೊಪ್ಪಳ ಪ್ರಾದೇಶಿಕ ಸಾರಿಗೆ ಅಧಿಕಾರಿ ಪ್ರಭುಸ್ವಾಮಿ ಹಿರೇಮಠ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಟಿ.ಲಿಂಗರಾಜು, ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಜಗದೀಶ್, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಧಾರವಾಡದ ಎಇಇ ಶ್ರೀದೇವಿ, ಹೊಸಪೇಟೆಯ ಎಇಇ ದಾನೇಶ, ಹುಬ್ಬಳಿ–ಹೊಸಪೇಟೆ ಆರ್.ಇ ನಾಗರಾಜ ಪಾಟೀಲ್, ಕೊಪ್ಪಳ ಲೋಕೋಪಯೋಗಿ ಇಲಾಖೆಯ ಎಇಇ ವೆಂಕಟೇಶ ಮತ್ತು ರಾಷ್ಟ್ರೀಯ ಹೆದ್ದಾರಿಗಳ ಇತರೆ ಪ್ರತಿನಿಧಿಗಳು ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಮತ್ತಿತರರು ಉಪಸ್ಥಿತರಿದ್ದರು.

## ಬಜೆಟ್‌ನಲ್ಲಿ ದಾಸರಹಳ್ಳಿ ಕ್ಷೇತ್ರಕ್ಕೆ ಹೆಚ್ಚು ಅನುದಾನ ನೀಡುವಂತೆ ಸರ್ಕಾರಕ್ಕೆ ಮುನಿರಾಜು ಅಗ್ರಹ

• ಮಲ್ಲಮ್ಮ ನುಡಿ ವಾರ್ತೆ ಪೀಣ್ಯ ದಾಸರಹಳ್ಳಿ

ದಾಸರಹಳ್ಳಿ ಕ್ಷೇತ್ರದಲ್ಲಿ ಅನೇಕ ಮೂಲಭೂತ ಸಮಸ್ಯೆಗಳು ಉಲ್ಬಣಗೊಳ್ಳುತ್ತಿದ್ದು ನಗರದ ವೇಗಕ್ಕೆ ತಕ್ಕಂತೆ ಅಭಿವೃದ್ಧಿ ಕೆಲಸ ಕೈಗೊಳ್ಳಲು ಮುಂಬರುವ ಬಜೆಟ್ ನಲ್ಲಿ ದಾಸರಹಳ್ಳಿ ಕ್ಷೇತ್ರಕ್ಕೆ ಹೆಚ್ಚು ಅನುದಾನ ನೀಡುವಂತೆ ಸರ್ಕಾರ–ಕ್ಕೆ ಶಾಸಕ ಎಸ್. ಮುನಿರಾಜು ಅಗ್ರಹಿಸಿದರು.




ಕೆಂಪಾಪುರ ಮುಖ್ಯರಸ್ತೆಯ ಮಹಾರುದ್ರೇಶ್ವರ ನಗರ ಕಾಂಕ್ರೀಟ್ ರಸ್ತೆ ,

ಕಮ್ಮಗೊಂಡನಹಳ್ಳಿಯ ಧರ್ಮಸ್ಥಳ ಬೇಕರಿ ಹತ್ತಿರ ಹಾಗೂ ಚೊಕ್ಕಸಂದ್ರ ಹೆಚ್.ಎಂ.ಟಿ ಲೇಔಟ್ ವಾಟರ್ ಲೈನ್, ನೆಲಗದರನಹಳ್ಳಿ ಸರ್ಕಲ್ ಹತ್ತಿರ ಒಳಚರಂಡಿ ಪೈಪ್ ಅಳವಡಿಕೆ ಕಾಮಗಾರಿ ಗಳಿಗೆ ಗುದ್ದಲಿ ಪೂಜೆ ನೇರೆವೇರಿಸಿ ಮಾತಾನಾಡಿದರು.

ಕ್ಷೇತ್ರದಲ್ಲಿ ಇರುವಂತಹ ಸಮಸ್ಯೆಗಳಿಗೂ ಕ್ಷೇತ್ರಕ್ಕೆ ಬರುವ ಅನುದಾನಕ್ಕೂ ಅಜಗಜಾಂತರ ವ್ಯತ್ಯಾಸವಿದ್ದು ಸಮಸ್ಯೆ ಬಗೆಹರಿಸಲು ಅನುದಾನ ಸಾಲುತ್ತಿಲ್ಲ, ಜನಪ್ರತಿನಿಧಿಗಳಾದ ನಾವು ಬೆಂಗಳೂರಿನಂಥ ಬೃಹತ್ ನಗರಗಳಲ್ಲಿ ವಾಸಿಸುವ ನಾಗರಿಕರಿಗೆ ಕನಿಷ್ಠ ಮೂಲಭೂತ ಸೌಕರ್ಯ ಒದಗಿಸಿ ಅವರ ಅಶೋತ್ತರಗಳಿಗೆ ಸ್ಪಂದಿಸಬೇಕಿದೆ,ಈ ನಿಟ್ಟಿನಲ್ಲಿ ಆಡಳಿತರೂಢ ಸರ್ಕಾರವೂ ಶಾಸಕರ ಭಾವನೆಗಳಿಗೆ ಪೂರಕವಾಗಿ ನಿಲ್ಲಬೇಕು' ಎಂದರು.

ಈ ಸಂಧರ್ಭದಲ್ಲಿ ಜಲಮಂಡಳಿಯ ಎಇಇಗಳಾದ ನಾಗರಾಜ್,ಗೌಸ್, ಎಇ ಕಾರ್ತಿಕ್ ,ಗುತ್ತಿಗೆದಾರ ಮಾದವರೆಡ್ಡಿ,ಮಾಜಿ ಜಿಲ್ಲಾ ಪಂಚಾಯತಿ ಅಧ್ಯಕ್ಷ ಜಿ. ಮರಿಸ್ವಾಮಿ ,ಬಿ.ಎಂ. ಚಿಕ್ಕಣ್ಣ,ಭಾಗ್ಯಮ್ಮ, ನೆಲಗೆದರನಹಳ್ಳಿ ವಾರ್ಡ್ ಬಿಜೆಪಿ ಅಧ್ಯಕ್ಷ ನಿಸರ್ಗ ಕೆಂಪರಾಜು, ಕೌಸಲ್ಯ, ಎಂ.ಕೆ. ಜಗದೀಶ್, ಬೆಲ್ಮಾರ್ ಸುರೇಶ್ ಗೌಡ, ವಿಜಯ್ ಕುಮಾರ್ ಮತ್ತಿತರರು.ಇದ್ದರು.

# ಸೈನಿಕರಂತೆ ಸಮಾಜ ಕಾಪಾಡುವವರು ಪತ್ರಕರ್ತರು : ಭರತ್ ರೆಡ್ಡಿ

**ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಪತ್ರಕರ್ತರ ಭದ್ರತೆ ಮತ್ತು ಮಾಧ್ಯಮ ಸ್ವಾತಂತ್ರ್ಯ ಬಲಪಡಿಸುವ ಉದ್ದೇಶದಿಂದ ಖಟಿಜುಚಿಟಿ ಎಠಣಡಿಟಿಚಿಟ್ಖುಣ ಗಟಿಱಠಟಿ ವತಿಯಿಂದ ಆಯೋಜಿಸಲಾದ ರಾಷ್ಟ್ರೀಯ ಕೌನ್ಸಿಲ್ ಸಭೆಯಲ್ಲಿ ಮಾಧ್ಯಮ ರಕ್ಷಣೆಗೆ ವಿಶೇಷ ಕಾಯ್ದೆ ತರಬೇಕೆಂಬ ಒತ್ತಾಯ ಕೇಳಿಬಂದಿತು. ನಗರದ ನಕ್ಷತ್ರ ಹೋಟೆಲ್‌ನಲ್ಲಿ ನಡೆದ ಸಭೆಯಲ್ಲಿ ವಿವಿಧ ರಾಜ್ಯಗಳಿಂದ ಬಂದ ಪ್ರತಿನಿಧಿಗಳು ಭಾಗವಹಿಸಿದರು.



ಸಭೆಯಲ್ಲಿ ಮಾತನಾಡಿದ ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ಅವರು, "ಗಡಿಯಲ್ಲಿ ಸೈನಿಕನು ದೇಶವನ್ನು ಕಾಪಾಡುವಂತೆ, ಸಮಾಜದ ಒಳಗಿನ ಸಮಸ್ಯೆಗಳು, ಅನ್ಯಾಯಗಳು ಮತ್ತು ಭ್ರಷ್ಟಾಚಾರಗಳನ್ನು ಬೆಳಕಿಗೆ ತರುವ ಮೂಲಕ ಪತ್ರಕರ್ತರು ಪ್ರಜಾಪ್ರಭುತ್ವವನ್ನು ಕಾಪಾಡುತ್ತಾರೆ" ಎಂದು ಹೇಳಿದರು.

ಪತ್ರಕರ್ತರನ್ನು "ಸಮಾಜದ ನಾಲ್ಕನೇ ಅಂಗ" ಎಂದು ಉಲ್ಲೇಖಿಸಿದ ಅವರು, ಸಾರ್ವಜನಿಕ ಹಿತಕ್ಕಾಗಿ ತಮ್ಮ ವೈಯಕ್ತಿಕ ಕಷ್ಟಗಳನ್ನು ಮರೆತು ಕಾರ್ಯನಿರ್ವಹಿಸುವ ಮಾಧ್ಯಮ ಸಿಬ್ಬಂದಿಗೆ ಕಾನೂನು ರಕ್ಷಣೆ-ಯ ಅಗತ್ಯ ತುರ್ತುವಾಗಿದೆ ಎಂದು ಅಭಿಪ್ರಾಯಪಟ್ಟರು.

ಸಭೆಯಲ್ಲಿ ಪತ್ರಕರ್ತರು ಎದುರಿಸುತ್ತಿರುವ ಬೆದರಿಕೆಗಳು, ದೌರ್ಜನ್ಯಗಳು ಹಾಗೂ ಕಾನೂನು ಸಂಬಂಧಿತ ಅಡಚಣೆಗಳ ಕುರಿತು ವಿಸ್ತೃತ ಚರ್ಚೆ ನಡೆಯಿತು. ಮಾಧ್ಯಮ ರಕ್ಷಣಾ ಕಾಯ್ದೆ ಜಾರಿಗೆ ತರಬೇಕು, ಪತ್ರಕರ್ತರ ಮೇಲೆ ದಾಳಿ ನಡೆಸಿದವರಿಗೆ ಕಠಿಣ ಶಿಕ್ಷೆ ವಿಧಿಸಬೇಕು ಹಾಗೂ ಸುದ್ದಿ ಸಂಗ್ರಹಣೆಯ ಸಂದರ್ಭದಲ್ಲಿ ಪೊಲೀಸ್ ಮತ್ತು ಆಡಳಿತದಿಂದ ಸೂಕ್ತ ಸಹಕಾರ ಒದಗಿಸಬೇಕು ಎಂದು ಸಭೆಯಲ್ಲಿ ಒತ್ತಾಯಿಸಲಾಯಿತು. ಈ ಸಭೆ ಮಾಧ್ಯಮ ಕ್ಷೇತ್ರದ ಹಕ್ಕುಗಳು ಮತ್ತು ಭದ್ರತೆ ಕುರಿತ ಚರ್ಚೆಗೆ ವೇದಿಕೆ ಒದಗಿಸಿತು.

# ಶಾಲಾ- ಕಾಲೇಜುಗಳಲ್ಲಿ ವಿವಿಧ ಸಮಿತಿಗಳನ್ನು ರಚಿಸಿ- ಇಟ್ನಾಳ


**ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ :** ಜಿಲ್ಲೆಯ ಎಲ್ಲಾ ಶಾಲಾ-ಕಾಲೇಜು ಮತ್ತು ವಿಶ್ವವಿದ್ಯಾಲಯ ಹಾಗೂ ಮೆಡಿಕಲ್ ಮತ್ತು ಇಂಜಿನೀಯರಿಂಗ್ ಕಾಲೇಜುಗಳಲ್ಲಿ ಆ್ಯಂಟಿಡ್ರಗ್ ಕಮಿಟಿಗಳನ್ನು ರಚಿಸಿ ವಿದ್ಯಾರ್ಥಿಗಳು ದುಶ್ಚಟಗಳಿಗೆ ಬಲಿಯಾಗದಂತೆ ಅವರಿಗೆ ತಿಳಿಹೇಳಬೇಕೆಂದು ಜಿಲ್ಲಾಧಿಕಾರಿ ಡಾ. ಸುರೇಶ ಬಿ. ಇಟ್ನಾಳ ಹೇಳಿದರು.



ಅವರು ಬುಧವಾರ ಜಿಲ್ಲಾಧಿಕಾರಿ ಕಛೇರಿ ಸಭಾಂಗಣದಲ್ಲಿ ಕರೆದ ನಾರ್ಕೋ ಕೋ- ಆರ್ಡಿನೇಷನ್ ಸೆಂಟ-ರ್ (NCORD) ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಜಿಲ್ಲಾ ಆಸ್ಪತ್ರೆ, ತಾಲ್ಲೂಕು ಆಸ್ಪತ್ರೆ ಸೇರಿದಂತೆ ಜಿಲ್ಲೆಯ ಎಲ್ಲಾ ಆಸ್ಪತ್ರೆಯಲ್ಲಿ ಮಾದಕ ದ್ರವ್ಯ ಪತ್ತೆ ಹಚ್ಚುವ 50 ಕಿಟ್‌ಗಳನ್ನಾದರೂ ಎಲ್ಲಾ ಆಸ್ಪತ್ರೆಗಳಲ್ಲಿ ಇಡಬೇಕು. ಜಿಲ್ಲಾ ಆಸ್ಪತ್ರೆಯಲ್ಲಿ ಸ್ವಲ್ಪ ಹೆಚ್ಚಿನ ಸಂಖ್ಯೆಯಲ್ಲಿ ಅವುಗಳು ಇರುವಂತೆ ನೋಡಿಕೊಳ್ಳಿ. ಅಬಕಾರಿ ಇಲಾಖೆಯವರು ಇಲ್ಲಿಯವರೆಗೆ ಎಷ್ಟು ರೆಸಾರ್ಟ್‌ಗಳಿಗೆ ಭೇಟಿ ನೀಡಿದ್ದೀರಾ, ರೆಸಾರ್ಟ್‌ಗಳಲ್ಲಿ ಯಾವುದೇ ಮಾದಕ ವಸ್ತುಗಳು ಕಂಡು ಬಂದಲ್ಲಿ ತಕ್ಷಣವೇ ಅಂತಹ ರೆಸಾರ್ಟ್‌ಗಳ ವಿರುದ್ಧ ಕ್ರಮ ಕೈಗೊಳ್ಳುವುದರ ಜೊತೆಗೆ ಹೆಚ್ಚಿನ ಪ್ರಕರಣಗಳನ್ನು ದಾಖಲಿಸಿ. ಜಿಲ್ಲೆಯ ಎಲ್ಲಾ ರೆಸಾರ್ಟ್‌ಗಳಿಗೆ ಆಗಾಗ್ಗೆ ಭೇಟಿ ನೀಡಿ ತಪಾಸಣೆ ಕೈಗೊಳ್ಳಬೇಕು ಎಂದರು.

ಮಾದಕ ವಸ್ತುಗಳ ಸಾಗಾಟ, ಮಾರಾಟ ಮತ್ತು ಬಳಕೆಯ ಕುರಿತ ವಿಷಯಗಳನ್ನು ಗಂಭೀರವಾಗಿ ಪರಿಗಣಿಸಿ. ಇಂತಹ ಯಾವುದೇ ಪ್ರಕರಣಗಳು ಕಂಡು ಬಂದರೆ ಪೊಲೀಸ್, ಅರಣ್ಯ ಇಲಾಖೆ, ಸಾರಿಗೆ, ಅಬಕಾರಿ ಹಾಗೂ ಇತರೆ ಸಂಬಂಧಿಸಿದ ಇಲಾಖೆಯ ಅಧಿಕಾರಿಗಳು ತಕ್ಷಣ ಕ್ರಮವಹಿಸಬೇಕು. ರೆಸಾರ್ಟ್, ಡಾಬಾಗಳು, ಹೊಟೇಲ್, ಸ್ಟೇ ಹೋಂಗಳಿಗೆ ಆಗಾಗ ಭೇಟಿ ನೀಡಿ ಪರಿಶೀಲನೆ ನಡೆಸುತ್ತಿರಬೇಕು. ಗಾಂಜಾವನ್ನು ಸಾಗುವಳಿ ಭೂಮಿಯ ಮಧ್ಯಭಾಗದಲ್ಲಿ ಹೆಚ್ಚಾಗಿ ಬೆಳೆಯುತ್ತಾರೆ ಎನ್ನುವ ದೂರುಗಳಿದ್ದು, ಈ ಕುರಿತು ಅರಣ್ಯ ಇಲಾಖೆಯವರು ಗಮನ ಹರಿಸಲು ತಮ್ಮ ಸಿಬ್ಬಂದಿಗಳನ್ನು ಬೀಟ್‌ಗಳಾಗಿ ನಿಯೋಜಿಸಿ ಗಮನ ಹರಿಸುತ್ತಿರಬೇಕೆಂದು ಹೇಳಿದರು. ಈ ಸಭೆಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ರಾಮ್ ಎಲ್. ಅರಸಿದ್ದಿ, ಜಿಲ್ಲಾ ಆರೋಗ್ಯ ಅಧಿಕಾರಿ ಟಿ. ಲಿಂಗರಾಜು, ಪದವಿಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಜಗದೀಶ್, ಪ್ರಾದೇಶಿಕ ಸಾರಿಗೆ ಅಧಿಕಾರಿ ಪಿ.ಎಸ್. ಹಿರೇಮಠ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಉಪನಿರ್ದೇಶಕರಾದ ಸೋಮಶೇಖರಗೌಡ ಪಾಟೀಲ ಸೇರಿದಂತೆ ಅರಣ್ಯ, ಸಾರಿಗೆ ಇಲಾಖೆ, ಇತರೆ ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

# ಕಾಂಗ್ರೆಸ್ ಸರಕಾರ ಪತನ : ಯತ್ನಾಳ್



**ಮಲ್ಲಮ್ಮ ನುಡಿ ವಾರ್ತೆ ಮುದಗಲ್**

ಕಾಂಗ್ರೆಸ್ ಸರಕಾರ ಪತನವಾಗಲಿದೆ ಎಂದು ವಿಜಯಪುರ ಶಾಸಕ ಬಸವನ ಗೌಡ ಪಾಟೀಲ್ ಯತ್ನಾಳ ಸನ್ನಿಹಿತ ಹೇಳಿಕೆ ಬುದುವಾರ ಹೇಳಿದರು.

ಪಟ್ಟಣದ ಹೊರವಲಯ ಲಿಂಗಸಗೂರು ಹಾಗೂ ತಾವರಗೇರಿ ರಸ್ತೆ ಸರ್ಕಲ್ ನಲ್ಲಿ ಬಿಜೆಪಿ ಕಾರ್ಯಕರ್ತರು ಹಾಗೂ ಪಂಚಮಸಾಲಿ ಸಮುದಾಯ ಮುಖಂಡರೊಂದಿಗೆ ಸನ್ಮಾನ ಸ್ವೀಕರಿಸಿ, ಸುದ್ದಿಗಾರರೊಂದಿಗೆ ಮಾತನಾಡಿದ ಅವರು ರಾಜ್ಯದಲ್ಲಿ ಕಾಂಗ್ರೆಸ್ ಶಾಸಕರ ಟೂರ್ ಪಾಲಿಟಿಕ್ಸ್ ಜೋರಾಗಿದ್ದು, ಶಿಘ್ರದಲ್ಲಿ ಸರಕಾರ ಪತವಾಗೊಳ್ಳಲಿದೆ. ಗ್ಯಾರಂಟಿಗಳನ್ನು ನಂಬಿ ಶಾಸಕರಾದವರಿಗೆ ಅನುದಾನವಿಲ್ಲದೇ ಟೂರ್ ಮಾಡುತ್ತಿದ್ದಾರೆ. ಸಿದ್ರಾಮಯ್ಯ ಹಾಗೂ ಡಿಕೆಸಿ ಬಣಗಳ ಜಗಳದಿಂದ ಶಾಸಕರಿಗೆ ದಿಕ್ಕುತೋಚದಂತಾಗಿದೆ. ರಾಜ್ಯದಲ್ಲಿ ಬಿಜೆಪಿ ಅದ್ಯಕ್ಷರ ಬದಲಾವಣೆ ನನಗೆ ಗೊತ್ತಿಲ್ಲ ಎಂದರು. ಯಾವುದೇ ಕಾರಣಕ್ಕೂ ಸಿಂ ಸ್ಥಾನವನ್ನು ಸಿದ್ರಾಮಯ್ಯನವರು ಬಿಟ್ಟು ಕೊಡುವುದಿಲ್ಲ. ಡಿಕೆಸಿ ಸಿಎಂ ಆಗುವುದು ಅನುಮಾನ ಎಂದರು.

ಪಿ ಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಮಹಾಂತೇಶ್ ಪಾಟೀಲ್, ಸಿದ್ದಯ್ಯ ಸ್ವಾಮಿ ಮೇಗಳಪೇಟೆ, ಕರಿಯಪ್ಪ ಯಾದವ್, ನಾಗರಾಜ್ ತಳವಾರ್, ಲಿಂಗಪ್ಪ ಹಣಗಿ ಸೇರಿದಂತೆ ಇತರರಿದ್ದರು.

# ಭಕ್ತ ಸಮೂಹದೊಂದಿಗೆ ಸಂಪನ್ನಗೊಂಡ ಶರಣ ಶಿವ ಬಸವೇಶ್ವರ ಮಹಾರಥೋತ್ಸವ



**ಮಲ್ಲಮ್ಮ ನುಡಿ ವಾರ್ತೆ ಕುಕನೂರ**

ತಾಲೂಕಿನ ಬೂದಗುಂಪಾ ಗ್ರಾಮದ ಶರಣ ಶಿವ ಬಸವೇಶ್ವರ ಮಹಾ ರಥೋತ್ಸವ ಭಕ್ತ ಸಾಗರದ ನಡುವೆ ವಿಜೃಂಭಣೆಯಿಂದ ಸಂಪನ್ನಗೊಂಡಿತು.

ರಥೋತ್ಸವದ ದಿನ ಪ್ರಾತಃಕಾಲದಿಂದ ದೇವಸ್ಥಾನದಲ್ಲಿ ವಿವಿಧ ಧಾರ್ಮಿಕ ವಿಧಿ ವಿಧಾನಗಳನ್ನು ನಡೆದವು.

ಈ ವೇಳೆಯಲ್ಲಿ ಗ್ರಾಮದ ಮುತ್ತೈದೆಯರು ಹೂವಿನ ಹಾರ ಹಾಕಿ ಪೂಜೆ ಸಲ್ಲಿಸುವುದರೊಂದಿಗೆ ಸ್ವಾಗತಿಸಿಕೊಂಡರು.

ಸಂಜೆ ವೇಳೆ ಯಾಗುತ್ತಿದ್ದಂತೆ ಹತ್ತಿರದ ಯಡಿಯಾಪುರ ಗ್ರಾಮದ ಶ್ರೀ ಸಿದ್ದಲಿಂಗೇಶ್ವರನ ಭಕ್ತರಿಂದ

ನಂದಿಕೋಲು ಸೇವೆ ಹಾಗೂ ತೇರಿನ ಹಗ್ಗದ ಸೇವೆ ಆಗಮಿಸಿದ ನಂತರ ನಂದಿಧ್ವಜ ಹಾಗೂ ರುದ್ರಾಕ್ಷಿ ಮಾಲೆಯ ಲೀಲಾವು ನಡೆಸಿ ಮಹಾ ರಥೋತ್ಸವಕ್ಕೆ ಚಾಲನೆ ನೀಡಲಾಯಿತು.

ಬೂದಗುಂಪಾ ಗ್ರಾಮ ಸೇರಿದಂತೆ ಸುತ್ತಮುತ್ತಲಿನ ಹಾಗೂ ನೆರೆ ಜಿಲ್ಲೆಗಳಿಂದ ಸಹಸ್ರಾರು ಭಕ್ತರು ಮಹಾ ರಥೋತ್ಸವ ಸಂದರ್ಭದಲ್ಲಿ ಪಾಲ್ಗೊಂಡು ಶ್ರೀ ಶರಣ ಶಿವ ಬಸವೇಶ್ವರನಿಗೆ ತಮ್ಮ ಹರಕೆ, ಇಷ್ಟಾರ್ಥಗಳನ್ನು ನೆರವೇರಿಸಿ ಸ್ವಾಮಿಯ ಕೃಪೆಗೆ ಪಾತ್ರರಾದರು.

ಮಹಾರಥೋತ್ಸವದ ದಿನದಂದು ಗ್ರಾಮದ ವತಿಯಿಂದ ಅನ್ನ ಸಂತರ್ಪಣೆಯ ಮಹಾ ಪ್ರಸಾದ ಆಯೋಜನೆ ಮಾಡಲಾಯಿತು. ರಾತ್ರಿ ವೇಳೆ ಗ್ರಾಮದಲ್ಲಿ ಉಚಿತ ನಾಟಕ ಪ್ರದರ್ಶನ ಗೊಳ್ಳಲಿದೆ ಎಂದು

ಶ್ರೀ ಶರಣ ಶಿವ ಬಸವೇಶ್ವರ ಸೇವಾ ಸಮಿತಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದರು. ಈ ಸಂದರ್ಭದಲ್ಲಿ ಗ್ರಾಮದ ಹಿರಿಯರಾದ ಕೂಡ್ಲಯ್ಯ ಸೊಪ್ಪಿಮಠ, ಯಂಕಣ ಆರ್ಯರ, ರುದ್ರಪ್ಪ ಸುರ್ವೆ, ನೇತಾಜಪ್ಪ ಆರ್ಯರ, ಹನುಮರೆಡ್ಡಿಪ್ಪ ರಡ್ಯಾರ, ಜಂಬಣ್ಣ ಕಾಡಿಗೌಡ್ರು, ಈರಪ್ಪ ದೇವರಮನಿ, ಮಲ್ಲಿಕಾರ್ಜುನ್ ರಡ್ಯಾರ, ಸುಭಾಷ ಮಡಿವಾಳರ್, ಸತೀಶ್ ರಡ್ಯಾರ, ಗಂಗಾಧರ್ ಪುಸಿಗೇರಿ, ಮುಕ್ಕಣ್ಣ ಕನಕಗಿರಿ , ಬೆಟ್ಟದಪ್ಪ ಬಳಗೇರಿ, ಸೋಮಶೇಖರ ಅಂಗಡಿ, ಸುಭಾಷ್ ಎಚ್. ಮಡಿವಾಳ, ಯಮನೂರಪ್ಪ ಹಿರೇಮನಿ, ಭೀಮಣ್ಣ ನಡೂಲಮನಿ, ಶರಣಪ್ಪ ಹಿರೇಮನಿ, ಮಾಂತೇಶ್ ತೆಗಾಡಿ ಮನಿ , ರಾಮಣ್ಣ ಹೊಸ್ಮನಿ, ಮುತ್ತು ಹಳ್ಳಿ , ಮಂಜುನಾಥ್ ರಡ್ಯಾರ, ಸುಭಾಷ್ ಕುರಿ, ಹಾಗೂ ಇನ್ನಿತರರು ಉಪಸ್ಥಿತರಿದ್ದರು.

# ಧೈರ್ಯ, ಸಾಹಸ ಶೌರ್ಯದ ಪ್ರತಿಕವೇ ಶಿವಾಜಿ ಮಹಾರಾಜರು: ಬಿರಾದಾರ



**ಮಲ್ಲಮ್ಮ ನುಡಿ ವಾರ್ತೆ ರಾಯಚೂರು**

ಭವ್ಯ ಭಾರತದ ಇತಿಹಾಸದಲ್ಲಿ. ಹಲವಾರು ರಾಜರು ತಮ್ಮ ಪ್ರದೇಶದ ಅಭಿವೃದ್ಧಿಗಾಗಿ ವಿಸ್ತರಣೆಗಾಗಿ ಹಲವಾರು ರೀತಿಯ ಹೋರಾಟವನ್ನು ಮಾಡಿದ್ದಾರೆ. ಆದರೆ ವಿಶೇಷವಾಗಿ ಮರಾಠ ಜನರನ್ನು ಒಗ್ಗೂಡಿಸುವಲ್ಲಿ ಜೊತೆಗೆ ಎಲ್ಲಾ ಹಿಂದೂಗಳಲ್ಲಿ ದೇಶಭಕ್ತಿ ಸ್ವಾಭಿಮಾನ ಏಕತೆಯನ್ನು ಮೂಡಿಸುವಲ್ಲಿ ಪ್ರಮುಖ ಪಾತ್ರವಹಿಸಿದ. ಇತಿಹಾಸದಲ್ಲಿ ಅಪೂರ್ವವಾದ ಸ್ಥಾನವನ್ನು ಪಡೆದ ಜನ್ಮತ ಜನನಾಯಕನಾಗಿ.

ತನ್ನ ವೈಯಕ್ತಿಕ ಶಕ್ತಿ ಸಾಮರ್ಥ್ಯ ಪ್ರತಿಭೆಗಳಿಂದ ಛತ್ರಪತಿ ಸ್ಥಾನಕ್ಕೇರಿ ತನ್ನ ಅತ್ಯುನ್ನತಿಯನ್ನು ಕಟ ಮೊಗಲ್ ಸಾಮ್ರಾಜ್ಯಕ್ಕೆ ಪ್ರಬಲ ಶತ್ರುವಾಗಿ ಮಾರ್ಪಟ್ಟು ಮೊಘಲರನ್ನು ಸಂಪೂರ್ಣವಾಗಿ ಸದೆಬಡಿಯಲು ಯಶಸ್ವಿ ಹಾದಿಯನ್ನು ತುಳಿದಂತ ಮರಾಠರನ್ನು ಒಂದು ಪ್ರಬಲ ರಾಷ್ಟವನ್ನಾಗಿ ಸಂಘಟಿಸುವಲ್ಲಿ ಅವರಲ್ಲಿ. ನವಶಕ್ತಿ ಮತ್ತು ನವಶ್ಚೈತನ್ಯವನ್ನು ಮೂಡಿಸಿ ಅಂತ ಧೈರ್ಯ ಸಾಹಸ ಮೌರ್ಯ ಪ್ರತಿಕವೇ ಛತ್ರಪತಿ ಶಿವಾಜಿ ಮಹಾರಾಜರು ಎಂದು ದಿನಾಂಕ 19 /02/26ರಂದು ರಾಯಚೂರು ತಾಲೂಕಿನ ಸರ್ಕಾರಿ ಪ್ರೌಢಶಾಲೆ ಉಡಮಗಲ ಖಾನಾಪುರದಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಜಯಂತಿಯ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಶಾಲಾ ಕನ್ನಡ ಕಲಾ ಶಿಕ್ಷಕರು. ಹಾಗೂ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಹ ಕಾಯ ಕಾರ್ಯದರ್ಶಿಯಾದ. ಡಾ. ದಂಡಪ್ಪ ಬಿರಾದಾರ ಮಾತನಾಡಿದರು.

ನಂತರ ಅವರು ಮುಂದುವರೆದು ಮಾತನಾಡುತ್ತಾ , ಜೀಜಾಬಾಯಿ ತಾಯಿಯ ಮಾರ್ಗದರ್ಶನದಲ್ಲಿ ದಾದಾಜಿ ಕೊಂಡ ದೇವ ಇವರ ಸನ್ಮಾರ್ಗದಲ್ಲಿ ಶಿವಾಜಿ ಯುದ್ಧದ ಎಲ್ಲಾ ಕಲೆಗಳನ್ನು ಕರಗತ ಮಾಡಿಕೊಂಡು ಶತ್ರುಗಳನ್ನು ನಾಶ ಮಾಡಲು ಎಲ್ಲ ಯುದ್ಧಗಳನ್ನು ಕಲಿತುಕೊಂಡಿದ್ದರು . ಶಿವಾಜಿಯು ತನ್ನ ರಾಜ್ಯದಲ್ಲಿ ಜನರ ಗೌರವ ಮತ್ತು ಮರ್ಯಾದಿಗಳನ್ನು ಕಾಪಾಡಲು ಶ್ರಮಿಸುತ್ತಾ ಮುಸ್ಲಿಮರು ಸೇರಿದಂತೆ ಹೆಂಗಸರು ಮತ್ತು ಮಕ್ಕಳ ಗೌರವವನ್ನು ಕಾಪಾಡಲು ಪ್ರತಿಯೊಬ್ಬರು ಎಚ್ಚರಿಕೆ ವಹಿಸಬೇಕು

ಅವರ ಬಗ್ಗೆ ಯಾರು ಕೆಟ್ಟ ವರ್ತನಿಂದ ನಡೆಯಬಾರದು ಎಂದು ಕಟ್ಟಾದ್ನಿ ಮಾಡಿದ್ದನು. ಮುಸ್ಲಿಂರಿಗೆ ಗೌರವ ತೋರಿಸುತ್ತಿದ್ದು ಶಿವಾಜಿ ಅವರ ಧರ್ಮ ಸಹಿಷ್ಣುತೆ ನೀತಿಗೆ ಒಂದು ಉದಾಹರಣೆ ಆಗಿದೆ. ಎಂದು ಡಾ. ಬಿರಾದಾರ ಹೇಳಿದರು.

ಮುಖ್ಯಗುರುಗಳಾದ ವೀರೇಶ್ ಅಂಗಡಿ ಕಾರ್ಯಕ್ರಮ ಕುರಿತು ಮಾತನಾಡುತ್ತಾ ಶಿವಾಜಿ ಮಹಾರಾಜರು ಅವರ ತಂದೆ ತಾಯಿಗಳಿಂದ ಪಡೆದ ಮಾರ್ಗದರ್ಶನ ಗುರುಗಳು ತೋರಿಸಿಕೊಟ್ಟ ಹಾದಿಯಲ್ಲಿ ನಡೆದು ತನ್ನ ಸಾಹಸವನ್ನ ಕಾರ್ಯದಿಂದ ಇತಿಹಾಸದಲ್ಲಿ ಪ್ರಸಿದ್ಧ ರಾಜರಾಗಿದ್ದಾರೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಶಾಲಾ ಶಿಕ್ಷಕರಾದ ನಫಿಸ ಅಂಜುಮ. ವೀಣಾ ಕುಲಕರ್ಣಿ. ಸಾವಿತ್ರಿ. ಶಿವಲೀಲಾ. ಅನಿತಾ ಎನ. ಪಾಂಡುರಂಗ ದೇಸಾಯಿ. ಸರಸ್ವತಿ. ಸೇರಿದಂತೆ ಇನ್ನಿತರರು ಇದ್ದರು. ಶಾಲಾ ಸಿಬ್ಬಂದಿ ನೀಲಕಂಠ ಕಾರ್ಯಕ್ರಮ ಆಯೋಜನೆಯಲ್ಲಿ ಸಹಕರಿಸಿದನು.

# ಸಿಸಿ ರಸ್ತೆ, ಚರಂಡಿ ಕಾಮಗಾರಿಗಳಿಗೆ ಚಾಲನೆ

**ಮಲ್ಲಮ್ಮ ನುಡಿ ವಾರ್ತೆ ಕಮಲನಗರ**

ಶಾಸಕರಾದ ಪ್ರಭು ಬಿ. ಚವ್ಹಾಣ ಅವರು ಬುಧವಾರ ರಂದು ಕಮಲನಗರ ಪಟ್ಟಣದ ವಿವಿಧ ವಾರ್ಡ್‌ಗಳಲ್ಲಿ 1.80 ಕೋಟಿ ವೆಚ್ಚದ ಸಿಸಿ ರಸ್ತೆ ಹಾಗೂ ಚರಂಡಿ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಿದರು.

ಈ ವೇಳೆ ಮಾತನಾಡಿದ ಅವರು, ಕಳೆದ ಗ್ರಾಮ ಸಂಚಾರದ ಸಂದರ್ಭದಲ್ಲಿ ಕಮಲನಗರಕ್ಕೆ ಆಗಮಿಸಿದ್ದ ವೇಳೆ ಪಟ್ಟಣದ ಕೆಲವು ವಾರ್ಡ್‌ಗಳಲ್ಲಿ ರಸ್ತೆಗಳು ಕೆಟ್ಟು ಹೋಗಿರುವ ಬಗ್ಗೆ ಮತ್ತು ಸಾರ್ವಜನಿಕರು ಪ್ರತಿನಿತ್ಯ ಓಡಾಡಲು ಎದುರಿಸುತ್ತಿರುವ ಸಂಕಷ್ಟಗಳ ಕುರಿತು ನನ್ನ ಗಮನಕ್ಕೆ ತಂದಿದ್ದರು. ಮುಂದಿನ ಸಲ ಬರುವಾಗ ಯೋಜನೆಗಳೊಂದಿಗೆ ಬರುತ್ತೇನೆಂದು ಹೇಳಿದ್ದೆ. ಅದರಂತೆ ವಿವಿಧ ವಾರ್ಡ್‌ಗಳಲ್ಲಿ ಸುಮಾರು 1.80 ಕೋಟಿ ಅನುದಾನದಲ್ಲಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿಯನ್ನು ಕೈಗೊಂಡಿದ್ದೇನೆ. ಎಲ್ಲ ಕಾಮಗಾರಿಗಳನ್ನು ಸರಿಯಾಗಿ ಮಾಡಬೇಕು. ಕ್ಯೂರಿಂಗ್ ಆಗಬೇಕು. ವಿಳಂಬ, ನಿರ್ಲಕ್ಷ್ಯ ಅಥವಾ ಗುಣಮಟ್ಟದಲ್ಲಿ ಲೋಪ ಕಂಡು ಬಂದರೆ ಯಾವುದೇ ಕಾರಣಕ್ಕೂ ಸಹಿವುದಿಲ್ಲ. ಬಿಲ್ಲುಗಳನ್ನು ಮಾಡಲು



ಬಿಡುವುದಿಲ್ಲವೆಂದು ಶಾಸಕರು ಅಧಿಕಾರಿಗಳು ಮತ್ತು ಗುತ್ತಿಗೆದಾರರಿಗೆ ಎಚ್ಚರಿಸಿದರು. ಸಾರ್ವಜನಿಕರು ಕೂಡ ತಮ್ಮ-ತಮ್ಮ ವಾರ್ಡ್‌ಗಳಲ್ಲಿ ನಡೆಯುವ ಕಾಮಗಾರಿಗಳ ಮೇಲೆ ನಿಗಾ ವಹಿಸಬೇಕು. ಕಾಮಗಾರಿ ಸರಿಯಾಗಿ ನಡೆಯುವಂತೆ ಮುತುವರ್ಜಿ ವಹಿಸಬೇಕು. ಕಾಮಗಾರಿ ನಡೆಯುವ ವೇಳೆ ಯಾವುದಾದರೂ ಲೋಪಗಳು, ಗುಣಮಟ್ಟದ ಕೊರತೆ ಕಂಡುಬಂದರೆ ತಕ್ಷಣ ನನ್ನ ಗಮನಕ್ಕೆ ತರಬೇಕೆಂದು ಮನವಿ ಮಾಡಿದರು. ಜನರ ಸಹಕಾರದಿಂದ ಮಾತ್ರ ಉತ್ತಮ ಗುಣಮಟ್ಟದ ಕೆಲಸಗಳಾಗಲು ಸಾಧ್ಯವೆಂದು ಹೇಳಿದರು.

ಕಮಲನಗರದ ಸರ್ವಾಂಗೀಣ ಅಭಿವೃದ್ಧಿಗೆ ನಿರಂತರ ಶ್ರಮಿಸುತ್ತಿದ್ದೇನೆ. ಇಷ್ಟು ವರ್ಷ ಗ್ರಾಮ ಪಂಚಾಯಿತಿಯಾಗಿದ್ದ ಕಮಲನಗರವನ್ನು ಪಟ್ಟಣ ಪಂಚಾಯಿತಿಯಾಗಿ ಮಾಡಿದ್ದೇನೆ. ಭವ್ಯ ಪ್ರಜಾಸೌಧ ಕಟ್ಟಡ ನಿರ್ಮಾಗೊಳ್ಳುತ್ತಿದೆ. ಕೆಪಿಎಸ್ ಶಾಲೆ, ಅಗ್ನಿಶಾಮಕ ಠಾಣೆ, ಡಾ.ಬಿಆರ್ ಅಂಬೇಡ್ಕರ್ ವಸತಿ ಶಾಲೆ ತಂದಿದ್ದೇನೆ. ಶಾಲೆ-ಕಾಲೇಜು, ರಸ್ತೆ, ಕುಡಿಯುವ ನೀರು ಸೇರಿದಂತೆ ಜನತೆಗೆ ಉತ್ತಮ ಮೂಲಭೂತ ಸೌಕರ್ಯ ಒದಗಿಸುವುದು ನನ್ನ ಮೊದಲ ಆದ್ಯತೆಯಾಗಿದೆ. ಮುಂಬರುವ ದಿನಗಳಲ್ಲಿ ಎಲ್ಲ ಬೇಡಿಕೆಗಳನ್ನು ಹಂತ ಹಂತವಾಗಿ ಈಡೇರಿಸಲಾಗುವೆಂದು ಭರವಸೆ ನೀಡಿದರು.

# ರೀಲ್ಸ್ ವ್ಯಾಮೋಹಕ್ಕೆ ಬಲಿಯಾಗಬೇಡಿ: ಭರತ್ ರೆಡ್ಡಿ

**ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ**



ವಿದ್ಯಾರ್ಥಿ ಯುವಜನರು ರೀಲ್ಸ್ ವ್ಯಾಮೋಹಕ್ಕೆ ಬಲಿಯಾಗದೇ ಓದಿನತ್ತ ಗಮನ ಹರಿಸಿ ಪೋಷಕರು ನಿಮ್ಮ ಬಗ್ಗೆ ಹೊಂದಿರವ ಕನಸು ನನಸು ಮಾಡಬೇಕೆಂದು ನಗರ ಶಾಸಕ ನಾರಾ ಭರತ್ ರೆಡ್ಡಿ ಹೇಳಿದ್ದಾರೆ.

ಅವರು ನಿನ್ನೆ ಸರ್ಕಾರಿ ಬಾಲಕಿಯರ ಪದವಿಪೂರ್ವ ಪ್ರೌಢಶಾಲೆಯ ವಾರ್ಷಿಕೋತ್ಸವ ಮತ್ತು ಸಾಂಸ್ಕೃತಿಕ ಸಾಂಘಿಕ ಚಟುವಟಿಕೆಗಳ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದರು.

ಸೋಶಿಯಲ್ ಮೀಡಿಯಾದಲ್ಲಿ ಒಳ್ಳೆಯದು ಕೆಟ್ಟದ್ದೂ ಎರಡೂ ಇವೆ, ಜ್ಞಾನ ಸಂಪಾದನೆಗೆ ಬಳಸಿಕೊಳ್ಳಿ, ಆದರೆ ಓದುವ, ಒಂದು ನಿರ್ದಿಷ್ಟಗುರಿ ತಲುಪುವ ಈ ವಯಸ್ಸಿನಲ್ಲಿ ಶಿಕ್ಷಕರ, ಗುರುಹಿರಿಯರ ಮಾರ್ಗದರ್ಶನದಂತೆ ನಡೆಯಿರಿ ಎಂದರು.

, ನೀವು ನನ್ನ ಬೆಂಬಲಕ್ಕಿದ್ದರೆ ಯಾರೇ ಆಗಲಿ- ಯಾವ ಶಕ್ತಿಯೇ ಆಗಲಿ ಅಡ್ಡ ಬಂದರೂ ಎದಿರಿಸುವೆ ಎಂದ ಅವರು, ನಗರದಲ್ಲಿ ಮೂಲಭೂತ ಸೌಕರ್ಯಗಳ ಅಭಿವೃದ್ಧಿಯಾದರೆ ಇಲ್ಲಿಗೆ ಐಟಿ-ಬಿಟಿ ಕಂಪೆನಿಗಳನ್ನು ಆಕರ್ಷಿಸಬಹುದು, ಆಗಸ್ಥಳೀಯವಾಗಿ ಉದ್ಯೋಗ ಸೃಷ್ಟಿ ಸುಲಭ ಎಂದರು.

ಇದಕ್ಕೂ ಮುನ್ನ 1.24 ಕೋಟಿ ರೂ.ಗಳ ವೆಚ್ಚದಲ್ಲಿ ನಿರ್ಮಾಣವಾಗಿರುವ 7 ಕೊಠಡಿಗಳು, 2 ಲ್ಯಾಬೊರೇಟರಿಗಳನ್ನು ಉದ್ಘಾಟಿಸಿದರು. ಶುದ್ಧ ಕುಡಿಯುವ ನೀರಿನ ಘಟಕ (ಆರ್.ಓ ಪ್ಲಾಂಟ್) ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಿದರು.

ಪಾಲಿಕೆಯ ಸದಸ್ಯರಾದ ರಾಮಾಂಜನೇಯ, ಮಿಂಚು ಶ್ರೀನಿವಾಸ ಮಿಂಚು, ಕುಬೇರಾ, ಕಾಂಗ್ರೆಸ್ ಮುಖಂಡರಾದ ಹೊನ್ನಪ್ಪ, ಸುಬ್ಬರಾಯುಡು ಮತ್ತಿತರರು ಇದ್ದರು.

# ಸುಬ್ಬಾರೆಡ್ಡಿ ಆಯ್ಕೆ ಅಸಿಂಧು: ನ್ಯಾಯಾಲಯದ ಆದೇಶಕ್ಕೆ ಗೌರವ

**ಮಲ್ಲಮ್ಮ ನುಡಿ ವಾರ್ತೆ ಚಿಕ್ಕಬಳ್ಳಾಪುರ**

ಭಾಗ್ಯನಗರ ಶಾಸಕ ಎಸ್. ಎನ್.ಸುಬ್ಬಾರೆಡ್ಡಿ ಅವರ ಆಯ್ಕೆ ಅಸಿಂಧುಗೊಳಿಸಿರುವ ನ್ಯಾಯಾಲಯದ ಆದೇಶಕ್ಕೆ ನಮಗೆ ಸಂಪೂರ್ಣ ಗೌರವವಿದೆ ಆದರೆ, ಪರಾಜಿತ ಅಭ್ಯರ್ಥಿ ಸಿ. ಮುನಿರಾಜು ಅವರು ಆದೇಶದ ಮರುದಿನವೇ ಬೆಂಬಲಿಗರ ಸಭೆಯಲ್ಲಿ ಸುಬ್ಬಾರೆಡ್ಡಿ ಅವರ ವಿರುದ್ಧ ಉದ್ಧಟ ಹಾಗೂ ನಿರಾಧಾರ ಆರೋಪಗಳನ್ನು ಮಾಡಿರುವುದು ಸರಿಯಲ್ಲ ಎಂದು ಬಾಗೇಪಲ್ಲಿ ಕಾಂಗ್ರೆಸ್ ಮುಖಂಡರು ಆಕ್ರೋಶ ವ್ಯಕ್ತಪಡಿಸಿದರು.



ನಗರದ ಪತ್ರಕರ್ತರ ಭವನದಲ್ಲಿ ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚುನಾವಣಾ ಸಂದರ್ಭದಲ್ಲಿ ಕೆಲವು ಮಾಹಿತಿಯನ್ನು ಸಲ್ಲಿಸದ ಹಿನ್ನೆಲೆಯಲ್ಲಿ ಆಯ್ಕೆ ಅಸಿಂಧುಗೊಂಡಿದೆ. ಆದರೆ ಸುಬ್ಬಾರೆಡ್ಡಿ ಅವರು ಯಾವುದೇ ದೊಡ್ಡ ಅಪರಾಧ ಮಾಡಿಲ್ಲ ಆಯ್ಕೆ ಅಸಿಂಧು ಆದ ತಕ್ಷಣ 'ನಾನು ಗೆದ್ದೆ' ಎಂಬ ಭ್ರಮೆಯಲ್ಲಿ ಬಾಯಿಗೆ ಬಂದಂತೆ ಆರೋಪ ಮಾಡುವುದು ಸರಿಯಲ್ಲ ಎಂದು ಹೇಳಿದರು.

ಬಾಗೇಪಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ನರೇಂದ್ರ ಮಾತನಾಡಿ ಪರಾಜಿತ ಅಭ್ಯರ್ಥಿ ಸಿ.ಮುನಿರಾಜು ಅವರು ಸುಬ್ಬಾರೆಡ್ಡಿ ಬಡವರ ಹಾಗೂ ರೈತರ ಜಮೀನು ತಮ್ಮ ಹೆಸರಿಗೆ ಮಾಡಿಕೊಂಡಿದ್ದಾರೆ ಎಂಬ ಆರೋಪ ಮಾಡಿರುವುದು ಸಂಪೂರ್ಣ ನಿರಾಧಾರ. ಸುಬ್ಬಾರೆಡ್ಡಿ ಅವರಿಗೆ ರಾಜಕೀಯದಲ್ಲಿ ದುಡ್ಡು ಸಂಪಾದನೆ ಮಾಡುವ ಉದ್ದೇಶವೇ ಇಲ್ಲ ಅವರು ಯಶಸ್ವಿ ಉದ್ಯಮಿ. ಶಾಸಕರಾಗುವ ಮೊದಲು ಕೂಡ ಬಾಗೇಪಲ್ಲಿ ಕ್ಷೇತ್ರದಲ್ಲಿ ಸಮಾಜಸೇವೆಯಲ್ಲಿ ತೊಡಗಿಸಿಕೊಂಡು ಜನಾಭಿಮಾನ ಗಳಿಸಿದ್ದರು. ಜನರ ಆಶೀರ್ವಾದದಿಂದ ಶಾಸಕರಾಗಿ ಆಯ್ಕೆಯಾಗಿ ಜನಸೇವೆಯಲ್ಲಿ ನಿರತರಾಗಿದ್ದಾರೆ ಎಂದು ತಿಳಿಸಿದರು.

ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರವು ಶಾಂತಿಗೆ ಹೆಸರುವಾಸಿ 2013 ಹಾಗೂ 2018ರ ಚುನಾವಣೆಗಳು ಶಾಂತಿಯುತವಾಗಿ ನಡೆದವು ಆದರೆ 2023ರ ಚುನಾವಣೆಯಲ್ಲಿ ಸಮಾಜಸೇವೆಯ ಹೆಸರಿನಲ್ಲಿ ರಾಜಕೀಯ ಪ್ರವೇಶ ಮಾಡಿದ ಮುನಿರಾಜು, ಸೇವೆಗಿಂತ ಹೆಚ್ಚು ಕ್ಷೇತ್ರದಲ್ಲಿ ಅಶಾಂತಿ ಸೃಷ್ಟಿಸುವ ವಾತಾವರಣ ನಿರ್ಮಿಸಿದರು. ಅದನ್ನು ಜನರು ತಿರಸ್ಕರಿಸಿದ್ದಾರೆ ಎಂದು ಮುಖಂಡರು ಹೇಳಿದರು.

ಕ್ಷೇತ್ರದಲ್ಲಿ ನಿರಾವರಿ ಯೋಜನೆಗಳು ಹಾಗೂ ಕೈಗಾರಿಕಾ ಅಭಿವೃದ್ಧಿ ವೇಗವಾಗಿ ನಡೆಯುತ್ತಿವೆ. ಇಂತಹ ಜನಪರ ಕಾರ್ಯಗಳನ್ನು ಸಹಿಸಲಾರದೆ, ಸುಬ್ಬಾರೆಡ್ಡಿ ವಿರುದ್ಧ ಭ್ರಷ್ಟಾಚಾರ ಮತ್ತು ರೈತರಿಗೆ ಬೆದರಿಕೆ ಆರೋಪ ಮಾಡುವುದು ಕೇವಲ ಬಿಟ್ಟಿ ಪ್ರಚಾರಕ್ಕಾಗಿ ಎಂದು ಹೇಳಿದರು ಆರೋಪಗಳಲ್ಲಿ ಯಾವುದೇ ಸತ್ಯಾಂಶ ಇಲ್ಲ ಎಂದು ಸ್ಪಷ್ಟಪಡಿಸಿದರು.

ಕಾಂಗ್ರೆಸ್ ಮುಖಂಡರಾದ ಮಂಜುನಾಥ್ ರೆಡ್ಡಿ ಮಾತನಾಡಿ, ಜನರ ಆಶೀರ್ವಾದದಿಂದ ಸತತ ಮೂರು ಬಾರಿ ಶಾಸಕರಾಗಿ ಆಯ್ಕೆಯಾದ ಸುಬ್ಬಾರೆಡ್ಡಿ ಅವರ ಜನಪ್ರಿಯತೆ ಹಾಗೂ ಪ್ರಾಮಾಣಿಕತೆಯನ್ನು ರಾಜಕೀಯವಾಗಿ ಸೋಲಿಸಲು ಆಗದೆ ವಿರೋಧ ಪಕ್ಷದವರು ನಿರಾಧಾರ ಆರೋಪ ಮಾಡುತ್ತಿದ್ದಾರೆ ಎಂದರು. ಹೈಕೋರ್ಟ್ ಆದೇಶದ ನಂತರವೂ ತಪ್ಪು ಮಾಹಿತಿ ಹರಡುವುದು ಖಂಡನೀಯ. ಪ್ರಶ್ನಿಸುವ ಹಕ್ಕು ಎಲ್ಲರಿಗೂ ಇದೆ, ಆದರೆ ದುರುದ್ದೇಶದಿಂದ ಕಿರುಕುಳ ನೀಡುವುದು ಸರಿಯಲ್ಲ ಎಂದು ಹೇಳಿದರು. ಸುಬ್ಬಾರೆಡ್ಡಿ ಅವರು ಈಗಾಗಲೇ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದಾರೆ ನ್ಯಾಯ ಸಿಗುವ ವಿಶ್ವಾಸವಿದೆ ಎಂದೂ ತಿಳಿಸಿದರು. ಪರಾಜಿತ ಅಭ್ಯರ್ಥಿ ಮುನಿರಾಜು ಅವರು ಮಾಡಿದ ಆರೋಪಗಳನ್ನು ಸಾಬೀತುಪಡಿಸಲು ಸಿದ್ಧರಾಗಲಿ ಎಂದು ಬಹಿರಂಗ ಸವಾಲು ಹಾಕಿದರು. ಇದೇ ವೇಳೆ, ಕೇಂದ್ರದಲ್ಲಿ ನಿಮ್ಮದೇ ಪಕ್ಷದ ಸರ್ಕಾರವಿದ್ದರೆ ಕ್ಷೇತ್ರದ ಅಭಿವೃದ್ಧಿಗೆ ನೈಜ ಸಲಹೆ ಹಾಗೂ ಸಹಕಾರ ನೀಡಲಿ. ವಿಷಪೂರಿತ ಹೇಳಿಕೆಗಳಿಂದ ಜನರನ್ನು ತಪ್ಪುದಾರಿಗೆಳೆಯಬಾರದು ಎಂದು ಆಗ್ರಹಿಸಿದರು. ಸುದ್ದಿಗೋಷ್ಠಿಯಲ್ಲಿ ಚಿಮುಲ್ ಅಧ್ಯಕ್ಷ ಮಂಜುನಾಥ್ ರೆಡ್ಡಿ, ಪ್ರಭಾಕರ್ ರೆಡ್ಡಿ, ಅಮರನಾಥ್ ರೆಡ್ಡಿ, ನರಸಿಂಹಪ್ಪ, ಶಂಕರಪ್ಪ ಇತರರು ಉಪಸ್ಥಿತರಿದ್ದರು.

# ಕಾಮಗಾರಿ ಪರಿಶೀಲಿಸಿದ ಶಾಸಕ



**ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ**

ನಗರದ ಗುಗ್ಗರಹಟ್ಟಿಯ ಟ್ರಾಫಿಕ್ ಸಮಸ್ಯೆ ನಿವಾರಿಸುವ ನಿಟ್ಟಿನಲ್ಲಿ ಗುಗ್ಗರಹಟ್ಟಿ ಹಾಗು ಕಾರ್ಕಲ್ಲತೋಟ ನಡುವೆ ಬೈಪಾಸ್ ಕಾಮಗಾರಿ ನಡೆಯುತ್ತಿದ್ದು, ನಿನ್ನೆ

ನಗರದ ಶಾಸಕ ಭರತ್ ರೆಡ್ಡಿ ಭೇಟಿ ನೀಡಿ ಕಾಮಗಾರಿ ಪರಿಶೀಲನೆ ನಡೆಸಿದರು. ಈ ವೇಳೆ ಪಾಲಿಕೆಯ ಸದಸ್ಯ ರಾಮಾಂಜನೇಯ, ರಾಜಶೇಖರ್, ಕಾಂಗ್ರೆಸ್ ಮುಖಂಡರಾದ ಸುಬ್ಬರಾಯುಡು, ಹೊನ್ನಪ್ಪ, ಪೆದ್ದನ್ನ, ವಿಶ್ವನಾಥ್, ಹೊನ್ನೂರಸ್ವಾಮಿ ಇತರರು ಇದ್ದರು.

ವೀರಶೈವ ವಿದ್ಯಾವರ್ಧಕ ಸಂಘದ

# ಹೊಸ ಸದಸ್ಯತ್ವ ನೀಡಲು ಹೋರಾಟ ಸಮಿತಿ ಆಗ್ರಹ




• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ**

ನಗರದಲ್ಲಿನ ವೀರಶೈವ ವಿದ್ಯಾವರ್ಧಕ ಸಂಘಕ್ಕೆ ಹೊಸ ಸದಸ್ಯತ್ವ ನೀಡಬೇಕು ಎಂದು ವೀರಶೈವ ವಿದ್ಯಾವರ್ಧಕ ಸಂಘದ ಸದಸ್ಯತ್ವ ಹೋರಾಟ ಸಮಿತಿ ಆಗ್ರಹಿಸಿದೆ.

ನಗರದ ಪತ್ರಿಕಾ ಭವನದಲ್ಲಿ ಇಂದು ಸುದ್ದಿಗೋಷ್ಠಿ ನಡೆಸಿದ ಸಮಿತಿಯ ಸಂಚಾಲಕ ಎಸ್.ಎಂ.ಕಾಶೀನಾಥಯ್ಯ, ಮುಖಂಡರುಗಳಾದ ಕಿರಣ್ ಶಂಕ್ರಿ, ಓಂಕಾರೇಶ್ವರ, ಮಧುರ ಚೆನ್ನ ಶಾಸ್ತ್ರಿ, ರೇವಣಸಿದ್ದಯ್ಯ, ರವಿಕಾಂತ್ ಮೊದಲಾದವರು. ಹಿರಿಯರ, ಶ್ರೀಗಳ, ದಾನಿಗಳಿಂದ ಸ್ಥಾಪಿತಗೊಂಡ ಶಿಕ್ಷಣ ಸಂಸ್ಥೆ ಬಳ್ಳಾರಿಯ ವೀರಶೈವ ವಿದ್ಯಾವರ್ಧಕ ಸಂಘ ಆರಂಭಗೊಂಡು ಶತಮಾನ ಕಳೆದಿದೆ. ಅಖಂಡ ಬಳ್ಳಾರಿ ಜಿಲ್ಲೆಯಲ್ಲಿ 46 ಶಿಕ್ಷಣ ಸಂಸ್ಥೆಗಳನ್ನು ಹೊಂದಿ ಲಕ್ಷಾಂತರ ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡಿದೆ.

ಈ ಸಂಸ್ಥೆಯಲ್ಲಿ ಆಜೀವ ಸದಸ್ಯರಾಗಿದ್ದ 400 ಕ್ಕೂ ಹೆಚ್ಚು ಜನರು ನಿಧನರಾಗಿದ್ದಾರೆ. ಕಳೆದ ಎರಡು ದಶಕಗಳಿಂದ ಹೊಸ ಸದಸ್ಯತ್ವ ನೀಡುತ್ತಿಲ್ಲ. ಕೆಲ ಪಟ್ಟಭದ್ರಹಿತಾಶಕ್ತಿಗಳು ಹೊಸ ಸದಸ್ಯತ್ವ ನೀಡಿದರೆ ತಮ್ಮ ಆಟ ನಡೆಯಲ್ಲ ಎಂದು ಹೊಸ ಸದಸ್ಯತ್ವ ನೀಡುತ್ತಿಲ್ಲ. ಸಂಘದ ಚುನಾವಣೆ ಬಂದಾಗಲೆಲ್ಲ ಮತ ಕೇಳಲು ಬರುವವರು ಅಲ್ಲಂ ಬಸವರಾಜ್, ಉಡೇದ ಬಸವರಾಜ್, ರಾಮನಗೌಡ ಸೇರಿದಂತೆ ಬಹುತೇಕರು ಈ ಬಾರಿ ಹೊಸ ಸದಸ್ಯತ್ವ ನೀಡುತ್ತೇವೆ ಎಂದು ಮೂಗಿಗೆ ತುಪ್ಪ ಹಚ್ಚುತ್ತಾರೆ. ನಂತರ ಅದೇ ರಾಗ ಅದೇ ಹಾಡು.

ಪ್ರತಿಯೊಬ್ಬ ಲಿಂಗಾಯತ ಸಮಾಜದ ಜನರಿಗೂ ಸದಸ್ಯತ್ವ ನೀಡಬೇಕು. 46 ಸಂಸ್ಥೆಗಳಿದ್ದು ಅವು ಸರಿಯಾದ ಆಡಳಿತ ಇಲ್ಲದೆ ಅವನತಿಗೆ ಬರುತ್ತವೆ. ಕೆಲವೇ ಜನರು ತಾವೇ ಇರಬೇಕೆಂದು ಹೊಸ ಸದಸ್ಯತ್ವ ನೀಡುತ್ತಿಲ್ಲ ಎಂದು ಆರೋಪಿಸಿದರು.

ಸಂಘಕ್ಕೆ ಸದಸ್ಯತ್ವ ತೆಗೆದುಕೊಂಡರೆ ಆದಾಯ ಬರುತ್ತದೆ ಆದರೂ ಬೇಡ ಎನ್ನುವುದೇಕೆ ವೀರಶೈವ ಲಿಂಗಾಯತ ಸಮಾಜದ ಯಾ–ರೇ ಕೇಳಲಿ ಸದಸ್ಯತ್ವ ನೀಡಬೇಕು ಎಂದು ಆಗ್ರಹಿಸಿದರು .

ಈ ಬಾರಿ ಸದಸ್ಯತ್ವ ನೀಡಿದ್ದರೆ ಬರುವ ಚುನಾವಣೆಯಲ್ಲಿ ನಾವು ನಮ್ಮದೇ ರೀತಿಯಲ್ಲಿ ಪಾಠಕಲಿಸಲು ಪ್ರತ್ನಿಸುತ್ತೇವೆ ಎಂದರು.

ಈ ಕುರಿತು ಇಂದು ಸಂಘದ ಅಧ್ಯಕ್ಷರಿಗೆ ಮನವಿ ನೀಡಿ ಒಂದು ತಿಂಗಳ ಕಾಲ ಗಡುವು ನೀಡುತ್ತೇವೆ ಈ ಕುರಿತು ನಿರ್ಧಾರ ಪ್ರಕಟಿಸಲು. ಜೊತೆಗೆ ಸಹಕಾರ ಇಲಾಖೆಯ ಅಧಿಕಾರಿಗಳಿಗೆ ಮನವಿ ನೀಡಲಿದೆ ಕ್ರಮಕ್ಕೆ. ಅಲ್ಲಿಗೂ ಆಗದಿದ್ದರೆ ಕಾನೂನು ಹೋರಾಟ ಮಾಡಲಿದೆಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಸಂಘದ ಸದಸ್ಯರಲ್ಲದ ಹೊಸಪೇಟೆ, ಹಡಗಲಿ, ಕೊಟ್ಟೂರು ಮೊದಲಾದಡೆಗಳಿಂದ ವೀರಶೈವ ಸಮಾಜದ ಮುಖಂಡರು ಆಗಮಿಸಿದ್ದರು.

# ವಿಧ್ಯಾರ್ಥಿ: ಕಾಯಕ ತತ್ವ ರೂಡಿಸಿಕೊಳ್ಳಿ: ಲೋಹಿತ್ ಕುಮಾರ್

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ**

ವಿದ್ಯಾರ್ಥಿಗಳು ಸಾಮಾಜಿಕ ಪಮೌಲ್ಯಗಳನ್ನು ರೂಡಿಸಿಕೊಳ್ಳುವುದರ ಜೊತೆಗೆ ಕಾಯಕವೇ ಕೈಲಾಸ ತತ್ವ ಸಿದ್ಧಾಂತಗಳನ್ನು ರೂಡಿಸಿಕೊಳ್ಳಿ. ಸಮಾಜಕ್ಕೆ ಕಂಟಕ ಪ್ರಾಯವಾಗಿ ಬೆಳೆಯಬೇಡಿ, ತಂದೆ ತಾಯಿಗೆ ಶಿಕ್ಷಕರಿಗೆ ಪ್ರೀತಿ ಪಾತ್ರರಾಗಿರಿ ಎಂದು ನಗರದ ಸೇಂಟ್ ಜೇನ್ಸ್ ಕಾಲೇಜಿನ ಇತಿಹಾಸ ಉಪನ್ಯಾಸಕ ಡಾ.ಆರ್.ಲೋಹಿತ್ ಕುಮಾರ್ ಹೇಳಿದರು.

ಅವರು ನಗರದ ರೇಡಿಯೋ ಪಾರ್ಕ್ ಬಳಿ ಇರುವ ಸರ್ಕಾರಿ ಪ್ರೌಢಶಾಲೆಯಲ್ಲಿ ಇಂದು ಕನ್ನಡ ಸಾಹಿತ್ಯ ಪರಿಷತ್ತಿನ ನಗರ ಘಟಕದಿಂದ ಎಂ.ಗೋವಿಂದರಾಜು, ಗದ್ದಿಕೇರಿ ತಿಪ್ಪಾರೆಡ್ಡಿ ಮತ್ತು ಮಾಗಮ್ಮ ಸ್ಮಾರಕ ಹಾಗು ಬಿ.ಆರ್.ಗೌರಮ್ಮ ಗುರು ಭೀಮನಗೌಡ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಬಸವಣ್ಣನವರ ವಚನಗಳಿಂದ ವಿದ್ಯಾರ್ಥಿಗಳಲ್ಲಿ ಅಳವಡಿಸಿಕೊಳ್ಳುವ ಸಾಮಾಜಿಕ ಮೌಲ್ಯಗಳ ಎಂಬ ವಿಷಯ ಕುರಿತು ಉಪನ್ಯಾಸ ನೀಡುತ್ತ ಮಾತನಾಡಿದರು.




ಕಾರ್ಯಕ್ರಮ ಉದ್ಘಾಟನೆ ಮಾಡಿದ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಅಧ್ಯಕ್ಷ ಎನ್.ವೀರಭದ್ರಗೌಡ ಮಾತನಾಡಿ, ವಿದ್ಯಾರ್ಥಿಗಳು ಮಾಧ್ಯಮಗಳನ್ನು ಸದ್ಬಳಕೆ ಮಾಡಿಕೊಳ್ಳಿ ದುರ್ಬಳಕೆ ಮಾಡಿಕೊಳ್ಳಬೇಡಿ, ಓದಿಗೆ ಬಡವ ಶ್ರೀಮಂತನೆಂಬ ಭೇದವಿಲ್ಲ ಸರ್ಕಾರಿ ಶಾಲಾ ವಿದ್ಯಾರ್ಥಿಗಳು ಯಾವ ಖಾಸಗಿ ಶಾಲಾ ವಿದ್ಯಾರ್ಥಿಗಳಿಗೂ ಕಡಿಮೆ ಇಲ್ಲ, ಉತ್ತಮ ಓದಿನಿಂದ ಮಾತ್ರ ನಿಮ್ಮ ಮನಸ್ಸು ಬದಲಾವಣೆಯಾಗಲು ಸಾಧ್ಯ ಎಂದರು.

ಅಧ್ಯಕ್ಷತೆವಹಿಸಿದ್ದ ಕಾಲೇಜಿನ ಪ್ರಾಚಾರ್ಯ ಆರ್. ಶಿವಕುಮಾರ್, ಎಲ್ಲಾ ಭಾಷೆಗಳನ್ನು ಗೌರವಿಸುವುದರ ಜೊತೆಗೆ ಕನ್ನಡ ಭಾಷೆಯನ್ನು ಪ್ರೀತಿಸಿ ಜೊತೆಗೆ ಮಾನವ ಜನ್ಮ ಬಹಳ ದೊಡ್ಡದು ಅದನ್ನು ಹಾಳು ಮಾಡಿಕೊಳ್ಳಬೇಡಿ ತಂದೆ ತಾಯಿಗಳಿಗೆ ಪ್ರೀತಿಯ ಮಕ್ಕಳಾಗಿ ಸಮಾಜಕ್ಕೆ ಒಳ್ಳೆಯ ವ್ಯಕ್ತಿಗಳಾಗಿ ಎಂದರು..

ಕಸಾಪದ ನಗರ ಘಟಕದ ಅಧ್ಯಕ್ಷ ಕೆ.ವಿ.ನಾಗರೆಡ್ಡಿ ಪ್ರಾಸ್ತಾವಿಕವಾಗಿ ಮಾತನಾಡಿ. ಗಡಿಭಾಗದ ಬಳ್ಳಾರಿಯಲ್ಲಿ ಕನ್ನಡದ ಜೊತೆ ಇತರ ಭಾಷೆಗಳ ಜನರೂ ಇದ್ದಾರೆ. ಅವರೊಂದಿಗೆ ಕನ್ನಡ ಭಾಷೆಯ ಬೆಳವಣಿಗೆಯ ಸೌಹಾರ್ದತೆ ಹೇಗಿರಬೇಕೆಂಬುದು ಮುಖ್ಯವಾಗಿದೆ. ಅದನ್ನು ಶಾಲಾ ಕಾಲೇಜುಗಲಕ ಮಕ್ಕಳಿಗೆ ತಿಳಿಸಲು ದತ್ತಿ ಉಪನ್ಯಾಸ ಕಾರ್ಯಕ್ರಮಗಳ ಮೂಲಕ ಮಾಡುತ್ತಿದೆಂದು ಹೇಳಿದರು.

ಅರ್ಥಶಾಸ್ತ್ರ ಉಪನ್ಯಾಸಕ ಡಿ.ಸಿ.ಚನ್ನವೀರಪ್ಪ, ಕನ್ನಡ ಶಿಕ್ಷಕ ಬಿ.ಎರ್ರಿಸ್ವಾಮಿ, ಉಪನ್ಯಾಸಕಿ ಚಂದ್ರಿಕಾ ಹಾಗೂ ಪ್ರಶಿಕ್ಷಣಾರ್ಥಿಗಳು ಉಪಸ್ಥಿತರಿದ್ದರು. ಉತ್ತರೇಶ್ ಸ್ವಾಗತಿಸಿದರು, ಪ್ರಾರ್ಥನೆ ದುರ್ಗಾ ಪರಮೇಶ್ವರಿ ಮತ್ತು ಸಂಗಡಿಗರಿಂದ ನಡೆಯಿತು. ಗೌರವ ಕಾರ್ಯದರ್ಶಿಗ ಬಿ ಹನುಮಂತ ರಾವ್ ವಂದಿಸಿದರು.

# ಆಸಕ್ತಿಯಂತೆ ಶಿಕ್ಷಣ ಕಲ್ಪಿಸಿದರೆ ಮಕ್ಕಳ ಉಜ್ವಲ ಭವಿಷ್ಯ ನಿರ್ಮಾಣ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ**

ಪೋಷಕರು ತಮ್ಮ ಆಸಕ್ತಿಯಂತೆ ಮಕ್ಕಳನ್ನು ಓದಿಸದೇ, ಮಕ್ಕಳಲ್ಲಿರುವ ಇಚ್ಛಾಶಕ್ತಿಯಂತೆ ಅವರಿಗೆ ಶಿಕ್ಷಣ ಕಲ್ಪಿಸಿದರೆ ಆ ಮಕ್ಕಳ ಭವಿಷ್ಯ ಉಜ್ವಲವಾಗಲಿದೆಂದು ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಮುನಿರಾಜ್ ಹೇಳಿದ್ದಾರೆ.

ಅವರು ನಿನ್ನೆ ಖಾಸಗಿ ಹೊಟೇಲ್ ಸಭಾಂಗಣದಲ್ಲಿ ಗ್ಯಾರಂಟಿ ನ್ಯೂಸ್ ಮತ್ತು ಡ್ 6 ಹಾಗೂ ಪ್ರೆಸಿಡೆನ್ಸಿ ವಿಶ್ವವಿದ್ಯಾಲಯದ ಸಹಭಾಗಿತ್ವದಲ್ಲಿ ಪ್ರಿನ್ಸಿಪಲ್ ಮೀಟ್ ಕಾರ್ಯಕ್ರಮದಲ್ಲಿ ಪಿಯುಸಿ ನಂತರ ಮುಂದೇನು ಎಂಬ ವಿಚಾರಸಂಕಿರಣ ಉದ್ಘಾಟನೆ ಮಾಡಿ ಮಾತನಾಡಿದರು.

ಎಐ (ಕೃತಕ ಬುದ್ದಿಮತ್ತೆ) ಜಾಗತಿಕ ಯುಗದಲ್ಲಿ ಅನೇಕ ತಾಂತ್ರಿಕ ಶಿಕ್ಷಣದ ಕೋರ್ಸ್‌ಗಳಿಗೆ ಬೇಡಿಕೆ ಹೆಚ್ಚಾಗಿದೆ. ಮೆಡಿಕಲ್, ಇಂಜಿನಿಯರ್ ಹೀಗೆ ಹಲವಾರು ಕೋರ್ಸ್ ಗಳಿಗೆ ಕಾಲಕ್ಕೆ ತಕ್ಕಂತೆ ಬೇಡಿಕೆ ಹೆಚ್ಚುತ್ತಿದೆ. ಪೋಷಕರು ತಮ್ಮ ಮಕ್ಕಳು ಯಾವ ವಿಷಯದಲ್ಲಿ ಆಸಕ್ತಿ ಇದ್ದಾರೆ ಆ ವಿಷಯದ ಕೋರ್ಸ್ ಓದಿಸಬೇಕು. ವಿದ್ಯಾರ್ಥಿಗಳು ಪಿಯುಸಿ ನಂತರ ಮುಂದೇ ಆಯ್ಕೆ ಮಾಡುವ ಕೋರ್ಸ್ ಗಳ ಬಗ್ಗೆ ಸಂವಾದ ಮಾಡುತ್ತಿರುವದರಿಂದ ಇದರಿಂದ ಅನುಕೂಲವಾಗಲಿದೆಂದರು.

ಬಳ್ಳಾರಿ ವಲಯದ ಪೊಲೀಸ್ ಮಹಾನಿರೀಕ್ಷಕ ಡಾ.ಪಿ.ಎಸ್. ಹರ್ಷ ಮಾತನಾಡಿ, ಇಂದಿನ ವಿದ್ಯಾರ್ಥಿಗಳು ಪಿಯುಸಿ ಓದು ಮುಗಿಸಿದ ನಂತರ ಮೆಡಿಕಲ್, ಇಂಜಿನಿಯರ್, ತಾಂತ್ರಿಕ ಶಿಕ್ಷಣ ಸೇರಿ ಹಲವಾರು ಕೋರ್ಸ್ ಓದುತ್ತಾರೆ. ಕಾಲಕ್ಕೆ ತಕ್ಕಂತೆ ಈಗ ಕಲಿಕಾ ಮಟ್ಟ ಬದಲಾವಣೆ ಆಗಿದೆ. ಈಗ ಉತ್ತರ ಸಿಗುವುದು ಸುಲಭವಾಗಿದೆ. ಆದರೆ ಪ್ರಶ್ನೆ ಮಾಡುವ

ಬುದ್ಧಿವಂತಿಕೆ ಜಾಗೃತಗೊಳಿಸಬೇಕಿದೆ. ಮಕ್ಕಳು ಮನಸ್ಸು ಗಗನಕ್ಕೆ ಚಿಮ್ಮುವಷ್ಟು ಪೋಷಕರು ಮಕ್ಕಳ ಉತ್ತಮ ಕನಸು ನನಸಾಗಲು ಪ್ರೋತ್ಸಾಹಿಸಬೇಕಿದೆ. ನುರಿತ ತಜ್ಞರ ಮೂಲಕ ಸಂವಾದ ಕಾರ್ಯಕ್ರಮ ಮಾಡುವ ಕಾರ್ಯ ಶ್ಲಾಘನೀಯವಾಗಿದೆಂದರು.

ಈ ವೇಳೆ ಗ್ಯಾರಂಟಿ ನ್ಯೂಸ್ ನ ಸಂಪಾದಕ ಸತೀಶ್ ಅಂಜಿನಪ್ಪ ಮಾತನಾಡಿ, ಎಐ ಯುಗದಲ್ಲಿ ತಾಂತ್ರಿಕ ಶಿಕ್ಷಣದ

ಬೇಡಿಕೆ ಹೆಚ್ಚಾಗಿದೆ. ಯಾವ ಕೋರ್ಸ್ ಓದಬೇಕು, ವಿದ್ಯಾರ್ಥಿಗಳ ಭವಿಷ್ಯ ಹೇಗಿರಬೇಕೆಂಬುದು ಸವಾಲ್ ಇದೆ. ಮಕ್ಕಳ ಭವಿಷ್ಯ ಬದಲಾವಣೆಗೆ ಯಾವ ಕೋರ್ಸ್ ಓದಬೇಕೆಂಬ ಗೊಂದಲ, ಸವಾಲ್ ನಿವಾರಣೆಗಾಗಿ ರಾಜ್ಯಾದ್ಯಂತ ಎಲ್ಲಾ ಜಿಲ್ಲೆಗಳಲ್ಲಿ ಗ್ಯಾರಂಟಿ ನ್ಯೂಸ್ ವತಿಯಿಂದ ಪ್ರಿನ್ಸಿಪಲ್

ಮೀಟ್ ಮೂಲಕ ಪಿಯುಸಿ ನಂತರ ಮುಂದೇನು ವಿಚಾರ ಸಂಕಿರಣ ಕಾರ್ಯಕ್ರಮದ ಮೂಲಕ ಪಿಯುಸಿ ಓದಿದ ನಂತರ ಯಾವ ಕೋರ್ಸ್ ಓದಿದರೆ ವಿದ್ಯಾರ್ಥಿಗಳ ಭವಿಷ್ಯ ಬದಲಾವಣೆ ಯಾಗುತ್ತದೆ ಎಂಬ ಅರಿವು ಮಾಡಿಸಲಾಗುತ್ತಿದೆಂದರು.

ಕಾರ್ಯಕ್ರಮದಲ್ಲಿ ಬೆಂಗಳೂರಿನ ಪ್ರೆಸಿಡೆನ್ಸಿ ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕ ಡಾ.ಕೆ. ರಮೇಶ್ ಬಾಬು, ಎಸಿಸಿಇಎ ಅಧ್ಯಕ್ಷ ಎ.ಎಸ್.ಸತ್ಯನಾರಾಯಣ, ಶ್ರೀ ನಂದಿ ಎಜ್ಯುಕೇಶನ್ ಅಂಡ್ ಚಾರಿಟೇಬಲ್

ಟ್ರಸ್ಟ್ ಅಧ್ಯಕ್ಷೆ ಡಾ.ಅನುರಾಧ ಎಸ್.ಜಿ., ವೆಂಕಟೇಶ ಕುಲಕರ್ಣಿ, ಅಶೋಕ ಭಟ್ಟ, ಕಣ್ಣನ್, ಬಿರಾಳ, ನಾಗಪ್ಪ ಮಾಲಿಪಾಟೀಲ, ರಾಧಾಕೃಷ್ಣ ಮೊದಲಾದವರು ಇದ್ದರು. ಬಸವರಾಜ ಕಾರ್ಯಕ್ರಮ ನಿರೂಪಿಸಿ ವಂದಿಸಿದರು




# ಪಲ್ಸ್ ಪೋಲಿಯೋ: ಜಾಗೃತಿ ಜಾಥಾ




• **ಮಲ್ಲಮ್ಮ ನುಡಿ ವಾರ್ತೆ ಕಂಪ್ಲಿ**

ಡಿಸೆಂಬರ್ 21ರಂದು ನಡೆಯುವ ಪಲ್ಸ್ ಪೋಲಿಯೋ ಲಸಿಕೆ ಕಾರ್ಯಕ್ರಮದ ಹಿನ್ನೆಲೆಯಲ್ಲಿ ಸ್ಥಳೀಯ ಕೋಟೆಯಲ್ಲಿ ಜಾಗೃತಿ ಜಾಥಾ ನಡೆಸಲಾಯಿತು.

ಪಟ್ಟಣದ ತಾಲೂಕು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಧಿಕಾರಿ ಕಚೇರಿ ಹಾಗೂ ಶ್ರೀ ಸ್ವಾಮಿ ವಿವೇಕಾನಂದ ಹಿರಿಯ ಪ್ರಾಥಮಿಕ ಶಾಲೆ ಸಂಯುಕ್ತ ಆಶ್ರಯ ದಲ್ಲಿ ನಡೆದ ಜಾಥಾಕ್ಕೆ ಪ್ರಾಥಮಿಕ ಅರೋಗ್ಯ

ಮೇಲ್ವಿಚಾರಕರಾದ ಚೆನ್ನಬಸವರಾಜ ಜಾತಕ್ಕೆ ಚಾಲನೆ ನೀಡಿ ಮಾತನಾಡಿ

ಪಟ್ಟಣವೂ ಸೇರಿದಂತೆ ಪೋಲಿಯೋ ಬೂತ್‌ಗಳನ್ನು ತೆರೆಯಲಾಗುತ್ತದೆ. 5ವರ್ಷ ಒಳಗಿನ ಎಲ್ಲಾ ಮಕ್ಕಳಿಗೆ ಲಸಿಕೆ ಹಾಕುವ ಗುರಿ ಹೊಂದಲಾಗಿದೆ. ಸಾರ್ವಜನಿಕರು ಐದು ವರ್ಷದೊಳಗಿನ ಎಲ್ಲಾ ಮಕ್ಕಳಿಗೂ ತಪ್ಪದೇ ಲಸಿಕೆ ಹಾಕಿಸುವ ಮೂಲಕ ಕಾರ್ಯಕ್ರಮದ ಯಶಸ್ವಿಗೆ ಸಹಕಾರ ನೀಡಬೇಕು ಎಂದು ಮನವಿ ಮಾಡಿದರು.

ಆಶಾ ಕಾರ್ಯಕರ್ತೆಯರು ಮತ್ತು ಅಂಗನವಾಡಿ ಕಾರ್ಯಕರ್ತರು ಸೇರಿದಂತೆ ಶಾಲಾ ವಿದ್ಯಾರ್ಥಿಗಳು ಪ್ರಮುಖ ಬೀದಿಗಳಲ್ಲಿ ಧ್ವನಿವರ್ಧಕ ಹಾಗೂ ಫಲಕಗಳನ್ನು ಹಿಡಿದು ಘೋಷಣೆ ಕೂಗುವ ಮೂಲಕ ಜನರಲ್ಲಿ ಜಾಗೃತಿ ಮೂಡಿಸಿದರು.

ಈ ಸಂದರ್ಭದಲ್ಲಿ ಶಾಲಾ ಮುಖ್ಯಗುರು ಬಡಿಗೇರ್ ಜಿಲಾನಸಾಬ್, ಆಶಾ ಕಾರ್ಯಕರ್ತೆ ಆರ್. ವಲಿಮಾ, ಅಂಗನವಾಡಿ ಕಾರ್ಯಕರ್ತೆ ಶಿವಲೀಲಾಮ್ಮ ಶಾಲಾ ಶಿಕ್ಷಕಿ ಯರಾದ ಶ್ವೇತಾ, ವರ್ಷಾ ಮಜುಮದಾರ, ಜೆ. ಅಕ್ಷತಾ, ಸುನೀತಾ, ಗೌಸಿಯಾ, ಕಾವ್ಯ, ಉಮಾ ಕೊಲ್ಕರಾ, ಕೆ. ಜಯಶ್ರೀ ಪ್ರಮುಖರಾದ ವಿಶ್ವನಾಥ, ಸುಮಂತ ಸೇರಿದಂತೆ ಇತರರು ಹಾಜರಿದ್ದರು.

# ಶಿವಾಜಿ ಮಹಾರಾಜ ಜಯಂತಿ ಆಚರಣೆ



• **ಮಲ್ಲಮ್ಮ ನುಡಿ ವಾರ್ತೆ ಮುದಗಲ್**

ಪಟ್ಟಣದ ಪುರಸಭೆ, ನಾಡ ಕಾರ್ಯಾಲಯ, ಸಮುದಾಯ ಆರೋಗ್ಯ ಕೇಂದ್ರ, ಕೃಷಿ ಮಾರುಕಟ್ಟೆ, ರೈತ ಸಂಪರ್ಕ ಕೇಂದ್ರ, ಸರಕಾರಿ ಪದವಿ ಪೂರ್ವ ಕಾಲೇಜು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವಿವಿಧ ಶಾಲಾ ಕಾಲೇಜು ಹಾಗೂ ಸಂಘ–ಸಂಸ್ಥೆಗಳಲ್ಲಿ ಛತ್ರಪತಿ ಶಿವಾಜಿ ಮಹಾರಾಜ ಅವರ ಜಯಂತಿ ಗುರುವಾರ ಆಚರಣೆ ಮಾಡಿದರು.

ಛತ್ರಪತಿ ಶಿವಾಜಿ ಮಹಾರಾಜ ಅವರ ಭಾವಚಿತ್ರಕ್ಕೆ ಪುರಸಭೆ ಕಾರ್ಯಾಲಯದಲ್ಲಿ ಚೆನ್ನಮ್ಮ ದಳವಾಯಿಮಠ, ನಾಡಕಛೇರಿಯಲ್ಲಿ ಮುನೀರ್ ಪಾಷಾ, ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಡಾ! ಸಿದ್ದರಾಮ ಪಾಟೀಲ್, ಸಮುದಾಯ ಆರೋಗ್ಯ ಕೇಂದ್ರದಲ್ಲಿ ಅರ್ಜುನ್ ಸಿಂಗ್, ರೈತ ಸಂಪರ್ಕ ಕೇಂದ್ರದಲ್ಲಿ ಅಧಿಕಾರಿ ಶ್ರೀಶೈಲ ಭೋವಿ, ಕೃಷಿ ಮಾರುಕಟ್ಟೆಯಲ್ಲಿ ಅಮರೇಶ ಹಾಗೂ ವಿವಿಧ ಸಂಘ ಸಂಸ್ಥೆಗಳಲ್ಲಿ ವ್ಯವಸ್ಥಾಪಕರು ಪೂಜೆ ಸಲ್ಲಿಸಿ ಪುಷ್ಪಾರ್ಚನೆ ಮಾಡಿದರು.

ಸಹಾಯಕ ಪ್ರಾಧ್ಯಾಪಕ ಎಂ.ಡಿ ಚಿತ್ತರಗಿ ನಾಗವರ್ಧನ್ ರೆಡ್ಡಿ ನಾಗರಾಜ್ ಹಾಗೂ ವಿದ್ಯಾರ್ಥಿ, ವಿದ್ಯಾರ್ಥಿನಿಯರು, ಪುರಸಭೆ ವ್ಯವಸ್ಥಾಪಕ ಸುರೇಶ ಹೊನ್ನಳ್ಳಿ, ಮಹಾಂತೇಶ ಅಕ್ಷತಿ, ವಿಜಯಕುಮಾರ, ಅನಿಲ ಚಿತ್ರಗಾರ, ಶ್ರೀನಿವಾಸ ಚಿತ್ರಗಾರ, ಅಶೋಕ ಹುಡೇದ, ವೆಂಕಣ್ಣ ದೇಶ್ಪಾಂಡೆ ಸೇರಿದಂತೆ ವಿವಿಧ ಇಲಾಖೆ ಸಿಬ್ಬಂದಿ ಹಾಗೂ ವಿವಿಧ ಸಂಘ–ಸಂಸ್ಥೆಯ ಪದಾಧಿಕಾರಿಗಳು ಹಾಜರಿದ್ದರು.

# ಭಕ್ತಿ ಭಾವದಿಂದ ಆರಾಧಿಸುವ ಮೂಲಕ ಶಿವನ ಮನಗೆದ್ದ ಶಿವಶರಣರು




• **ಮಲ್ಲಮ್ಮ ನುಡಿ ವಾರ್ತೆ ಕಂಪ್ಲಿ**

ಪಟ್ಟಣದ ಕಲ್ಮಠದ ಶ್ರೀಪ್ರಭುಸ್ವಾಮಿಗಳ ಅನುದಾನಿತ ಪ್ರೌಢಶಾಲೆ ಆವರಣದಲ್ಲಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಹಮ್ಮಿಕೊಂಡಿದ್ದ ಲಿಂ.ಕಲ್ಗುಡಿ ಉಮೇಶ, ಮಹಾಂತಿನಮಠದ ಶ್ಯಾಮಲಮ್ಮ ಮಹಾಂತಿನಮಠದ ಗೌರಮ್ಮ ಹಾಗೂ ದಿ.ಎಂ.ಪಿ.ಪ್ರಕಾಶ ಸ್ಮರಣಾರ್ಥ ದತ್ತಿ ಕಾರ್ಯಕ್ರಮ ನಡೆಯಿತು.

ಇಲ್ಲಿನ ಕಲ್ಮಠ ಶ್ರೀಪ್ರಭುಸ್ವಾಮಿಗಳ ಅನುದಾನಿತ ಪ್ರೌಢಶಾಲೆ ಶಿಕ್ಷಕಿ ರಾಜೇಶ್ವರಿ 'ಶರಣ ಸಾಹಿತ್ಯ ಹಾಗೂ ಅಲ್ಲಮರ ವಿಚಾರಧಾರೆ' ಕುರಿತು ಉಪನ್ಯಾಸ ನೀಡಿ, ಬಾಹ್ಯ ಆಚರಣೆಗಳು ಮತ್ತು ಮೂರ್ತಿ ಪೂಜೆಗಿಂತ ಅಂತರಂಗದ ಅನುಭವವೇ ಮುಖ್ಯವೆಂದು ಇವರು ಪ್ರತಿಪಾದಿಸಿದರು.

"ನಾನೆಂಬುದು ಅಜ್ಞಾನ, ನೀನೆಂಬುದು ಮಾಯೆ" ಎನ್ನುವ ಮೂಲಕ ಅಹಂಕಾರದ ನಾಶವೇ ಮುಕ್ತಿ ಎಂದು ಸಾರಿದರು. 12ನೇಯ ಶತಮಾನದ ಮತ ಧರ್ಮ ಭಾಷೆ ಸಾಹಿತ್ಯ ಸಾಮಾಜಿಕ ಬದಲಾವಣೆಗಳಿಂದ ವಿಶೇಷ ಮಹತ್ವ ಪಡೆದಿದೆ. ಶರಣ ಭಾವದಿಂದ ಶಿವನನ್ನು ಆರಾಧಿಸಿ ಕೊನೆಯಲ್ಲಿ ಶಿವನೇ ಆಗುವ ಭಕ್ತರನ್ನು ಶಿವಶರಣರು ಎಂದು ಹೇಳಬಹುದು. ನಡನುಡಿಗಳಲ್ಲಿ ಒಂದಾಗಿಸಿಕೊಂಡು ವಿವೇಕ ಹೊಂದಿದವರನ್ನು ಶರಣರೆನ್ನಬಹುದು. ಶರಣರು ರಚಿಸಿದ ಗದ್ಯವಲ್ಲದ ಪದ್ಯವಲ್ಲದ ವಚನ ಸಾಹಿತ್ಯವನ್ನು ಶರಣ ಸಾಹಿತ್ಯ ಎಂದು ಕರೆಯಲಾಗಿದ್ದು,

ಕನ್ನಡ ಸಾಹಿತ್ಯಕ್ಕೆ ವಿಶೇಷ ಕೊಡುಗೆಯಾಗಿದೆ. ವಚನ ಸಾಹಿತ್ಯ ಕರ್ನಾಟಕದಲ್ಲಿ ಉಗಮಗೊಂಡಿತು. ಶಿವಶರಣರು ಜಾತಿ ಲಿಂಗ ತಾರತಮ್ಯವನ್ನು ಖಂಡಿಸಿ ಸಾಮಾಜಿಕ ಸಮಾನತೆ ಹಾಗೂ ಭಕ್ತಿಯನ್ನು ಪ್ರತಿಪಾದಿಸಿದವರು ಎಂದರು.

ಕಸಾಪ ತಾಲೂಕು ಅಧ್ಯಕ್ಷ ಷಣ್ಮುಖಪ್ಪ ಚಿತ್ರಗಾರ ಅಧ್ಯಕ್ಷತೆ ವಹಿಸಿದ್ದರು. ಶ್ರೀಗುರುಸಿದ್ದೇಶ್ವರ ವಿದ್ಯಾವರ್ಧಕ ಸಂಘದ ನಿರ್ದೇಶಕ ರಾಘವೇಂದ್ರ, ದತ್ತಿ ದಾನಿ ಸುಮಂಗಳ ಮಹಾಂತಿನಮಠ, ಕಲ್ಗುಡಿ ವಿಜಯಕುಮಾರ್, ಕಸಾಪ ಪದಾಧಿಕಾರಿಗಳಾದ ಹಾದಿಮನಿ ಕಾಳಿಂಗವರ್ಧನ, ಅಶೋಕ ಕುಕನೂರು, ಜಿ.ಪ್ರಕಾಶ, ಆಕಾಶ ಮಹಾಂತಿನಮಠ, ಶಿಕ್ಷಕರಾದ ಲೋಕೇಶ್, ಬೀರಲಿಂಗೇಶ ಸೇರಿ ಇತರರಿದ್ದರು

# ಮಹಾಮನೆ, ಲಿಂಗ ತಾರತಮ್ಯ ರಹಿತ ಸಮಾನತೆ, ಕಾಯಕವೇ ಕೈಲಾಸ : ಶಿಕ್ಷಕ ರಾಮಪ್ಪ

• **ಮಲ್ಲಮ್ಮ ನುಡಿ ವಾರ್ತೆ ಕಂಪ್ಲಿ**

ಪಟ್ಟಣದ ಗಂಗಾ ಸಂಕೀರ್ಣದಲ್ಲಿ ತಾಲೂಕು ಶರಣ ಸಾಹಿತ್ಯ ಪರಿಷತ್ ಹಮ್ಮಿಕೊಂಡಿದ್ದ 187ನೇ ಮಹಾಮನೆ ಕಾರ್ಯಕ್ರಮ ನಡೆಯಿತು.

ಎಮ್ಮಿಗನೂರಿನ ಶತಮಾನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಅತಿಥಿ ಶಿಕ್ಷಕ ಎಸ್.ರಾಮಪ್ಪ 'ಶರಣ ವಿಚಾರಧಾರೆ' ಕುರಿತು ಉಪನ್ಯಾಸ ನೀಡಿ, ಬಸವಾದಿ ಶರಣರ ವಿಚಾರಧಾರೆ ಜಾತಿ, ಮತ, ಲಿಂಗ ತಾರತಮ್ಯರಹಿತ ಸಮಾನತೆ, ಕಾಯಕವೇ ಕೈಲಾಸ, ಮತ್ತು ದಯೆಯೇ ಧರ್ಮದ ಮೂಲ ಎಂಬ ತತ್ವಗಳನ್ನು ಪ್ರತಿಪಾದಿಸುತ್ತದೆ. 12ನೇ ಶತಮಾನದ ಈ ವಚನಕಾರರು ವೈಚಾರಿಕತೆ, ಅನುಭವ ಮಂಟಪದ ಮೂಲಕ ಪ್ರಜಾಪ್ರಭುತ್ವ ಮೌಲ್ಯಗಳು, ಹಾಗೂ ಸರ್ವರಿಗೂ ಸಮಬಾಳು ಎಂಬ ಕ್ರಾಂತಿಕಾರಿ ಬದಲಾವಣೆಗೆ ಬುನಾದಿ ಹಾಕಿದರು, ಇದು ಇಂದಿನ ಸಮಾಜಕ್ಕೂ ಮಾರ್ಗದರ್ಶಿಯಾಗಿದೆ. ಕಾಯಕ, ದಾಸೋಹ, ಲಿಂಗ ಸಮಾನತೆಯನ್ನು ಶರಣರ ವಚನಗಳಲ್ಲಿ ಕಾಣಬಹುದಾಗಿದೆ. ಶರಣ ಸಾಹಿತ್ಯವು ಮಾನವೀಯ ನೆಲೆಯಲ್ಲಿ ಬದುಕನ್ನು ನಿರ್ಮಿಸಿಕೊಳ್ಳುವಂತೆ ಪ್ರೇರೇಪಿಸುತ್ತದೆ. ಸಮಾಜದಲ್ಲಿನ ವಿಷಮತೆಗೆ ಸಂಸ್ಕಾರದ ಕೊರತೆ ಕಾರಣವಾಗಿದೆ. ಮಕ್ಕಳಲ್ಲಿ ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಳ್ಳುವಂತೆ ಪೋಷಕರು ನಿಗಾವಹಿಸುತ್ತಿಲ್ಲ.




ಮಕ್ಕಳಿಗೆ ದಿನಕ್ಕೊಂದು ವಚನಗಳ ಮೌಲ್ಯಗಳನ್ನು ತಿಳಿಸಿಕೊಡುವ ಅಗತ್ಯತೆಯಿದೆ. ಪ್ರಕೃತಿ ವಿಕೋಪಕ್ಕೆ ಮನುಷ್ಯನ ದುರಾಸೆಗಳೇ ಕಾರಣ. ಸ್ವ ಬದಲಾವಣೆಯಿಂದ ಮಾತ್ರ ಕುಟುಂಬ ಮತ್ತು ಸಮಾಜ ಬದಲಾವಣೆ ಸಾಧ್ಯ ಎಂದು ಹೇಳಿದರು.

ಎಮ್ಮಿಗನೂರಿನ ಸಹಿಪ್ರಾ ಶಾಲೆ ಅತಿಥಿ ಶಿಕ್ಷಕ ಎಚ್.ಮಲ್ಲೇಶ್ ಮಾತನಾಡಿ, ಯುವಜನತೆ ದುಶ್ಚಟಗಳಿಗೆ ಈಡಾಗುತ್ತಿರುವುದು ಆತಂಕಕಾರಿಯಾಗಿದೆ. ಯುವಜನತೆ ದುಶ್ಚಟಗಳಿಂದ ವಿಮುಕ್ತರಾಗಲು ಮಹಾಮನೆ ಕಾರ್ಯಕ್ರಮಗಳಲ್ಲಿ ತೊಡಗಿಕೊಳ್ಳಬೇಕಿದೆ ಎಂದರು.

ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಷಣ್ಮುಖಪ್ಪ ಚಿತ್ರಗಾರ ಮಾತನಾಡಿ, ಪುರಾಣ ಪರಂಪರೆಯಲ್ಲಿನ ಆದರ್ಶ ವ್ಯಕ್ತಿಗಳ ತತ್ವಗಳನ್ನು ಅರಿತು ಅಳವಡಿಸಿಕೊಳ್ಳಬೇಕು. ಶರಣ ವಿಚಾರಧಾರೆ ಅನುಷ್ಠಾನಗೊಳಿಸಿದಲ್ಲಿ ಸಂತೃಪ್ತ ಜೀವನ ಸಾಗಿಸಲು ಸಾಧ್ಯ ಎಂದರು.

ಶರಣ ಸಾಹಿತ್ಯ ಪರಿಷತ್ ತಾಲೂಕು ಅಧ್ಯಕ್ಷ ಜಿ.ಪ್ರಕಾಶ ಅಧ್ಯಕ್ಷತೆವಹಿಸಿ ಮಾತನಾಡಿ, ಶರಣ ಸಾಹಿತ್ಯ ಜೀವನದ ನಡವಳಿಕೆಯಿಂದ ಸಮಗ್ರ ಬದಲಾವಣೆ ಸಾಧ್ಯ. ಭ್ರಷ್ಟಾಚಾರ, ಜಾತೀಯತೆ, ಭಯೋತ್ಪಾದನೆ, ಬಡತನ, ಅಜ್ಞಾನಗಳ ತೊಲಗಿಸಲು ಆಡಳಿತದಲ್ಲಿ ಶರಣ ಚಿಂತನೆ ಅಳವಡಿಕೆ ಅಗತ್ಯ ಎಂದರು.

ಈಚೆಗೆ ಸೇಡಂ ಕೋಡೆಕಲ್ಲ ಚನ್ನಬಸವಣ್ಣ ಪ್ರಕಾಶನವು ಕಂಪ್ಲಿಯ ಲೇಖಕ ಬಂಗಿ ದೊಡ್ಡ ಮಂಜುನಾಥರ 'ಬೆಂಕಿಯ ಶೀತ' ಕಾದಂಬರಿಗೆ 'ಕಂದ' ಪ್ರಶಸ್ತಿ ನೀಡಿದ್ದಕ್ಕಾಗಿ ಲೇಖಕರನ್ನು ಗೌರವಿಸಲಾಯಿತು. ಶಸಾಪ ಪದಾಧಿಕಾರಿಗಳಾದ ಎಸ್.ಡಿ.ಬಸವರಾಜ, ಸಂತೋಷ ಸೋಗಿ, ಅಶೋಕ ಕುಕನೂರ, ಎಲಿಗಾರ ವೆಂಕಟರೆಡ್ಡಿ, ಸಜ್ಜೇದ ವೀರಭದ್ರಪ್ಪ, ಬಿ.ಎಂ.ರುದ್ರಯ್ಯ, ಎಸ್.ಶಾಮಸುಂದರರಾವ್, ಮಡಿವಾಳ ಹುಲುಗಪ್ಪ, ಮಾ.ಶ್ರೀನಿವಾಸ, ಕೆ.ಯಂಕಾರೆಡ್ಡಿ, ಬಸವರಾಜ ಸೇರಿ ಇತರರಿದ್ದರು.

# ಶಾಲೆಗಳು ಜೀವನ ಮೌಲ್ಯ ಕಲಿಸುವ ದೇವಾಲಯಗಳು: ಮಿರ್ಜಿ



• ಮಲ್ಲಮ್ಮ ನುಡಿ ವಾರ್ತೆಬಾಗಲಕೋಟೆ

ಶಾಲೆಗಳು ಬರೀ ಅಕ್ಷರ ಕಲಿಸುವ ಕೇಂದ್ರಗಳಲ್ಲ. ಜೀವನ ಮೌಲ್ಯಗಳನ್ನು ಕಲಿಸುವ ದೇವಾಲಯಗಳು ಇದ್ದಂತೆ ಎಂದು ವೈದ್ಯ ಡಾ.ಪ್ರಮೋದ ಮಿರ್ಜಿ ಹೇಳಿದರು.

ನಗರದ ಬಿವಿವಿ ಸಂಘದ ನೂತನ ಸಭಾಭವನದಲ್ಲಿ ಬುಧವಾರ ಜರುಗಿದ ಬಸವೇಶ್ವರ ಸಂಯುಕ್ತ ಪದವಿ ಪೂರ್ವ ಕಾಲೇಜಿನ ಮಾಧ್ಯಮಿಕ ವಿಭಾಗದ ಪ್ರತಿಭಾ ಪುರಸ್ಕಾರ ಸಮಾರಂಭ ಮುಖ್ಯ ಅತಿಥಿಗಳಾಗಿ ಮಾತನಾಡಿದ ಅವರು, ಕಲಿಕೆ ನಿರಂತರವಾಗಿದ್ದು, ಜೀವನುದ್ದಕ್ಕೂ ನಡೆಯುವ ಕ್ರಿಯೆಯಾಗಿದೆ ಎಂದರು.

ವಿದ್ಯಾರ್ಥಿಗಳು ಸಮಯ ಪಾಲನೆ, ನಿಷ್ಠೆ, ಸತತ ಅಧ್ಯಯನದ ಮೂಲಕ ಪ್ರತಿಭಾವಂತರಾಗಿ ಬೆಳೆದು ದೇಶದ ಆದರ್ಶ ಪ್ರಜೆಗಳಾಗಬೇಕು ಎಂದ ಡಾ.ಮಿರ್ಜಿ, ಹೆತ್ತವರು, ಸಮಾಜ ಹಾಗೂ ಕಲಿತ ಶಾಲೆಗೆ ಕೀರ್ತಿ ತರುವಂತವರಾಗಬೇಕು ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಚಾರ್ಯ ಕೆ.ಎಸ್.ಹೊಸೂರ ಮಾತನಾಡಿ, ನಮ್ಮ ಶಾಲೆ ನಮ್ಮ ಹೆಮ್ಮೆ ಎಂಬ ಭಾವನೆ ನಿರಂತರವಾಗಿರಲಿ. ಈ ಶಾಲೆಯಲ್ಲಿ ಕಲಿತ ಹಲವಾರು ವಿದ್ಯಾರ್ಥಿಗಳು ಸಾಧನೆ ತೋರಿ ಅತ್ಯುತ್ತಮ ಸ್ಥಾನದಲ್ಲಿದ್ದು, ಅವರು ವಿದ್ಯಾರ್ಥಿಗಳಿಗೆ ಸ್ಫೂರ್ತಿಯಾಗಿದ್ದಾರೆ ಎಂದರು.

ಕನ್ನಡ ಮಾಧ್ಯಮದಲ್ಲಿ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ 608 ಅಂಕಗಳೊಂದಿಗೆ ಶಾಲೆಗೆ ಪ್ರಥಮ ಸ್ಥಾನ ಗಳಿಸಿದ ವೀರೇಶ ಸಂಗನಾಳ, ಇಂಗ್ಲೀಷ ಮಾಧ್ಯಮದಲ್ಲಿ 603 ಅಂಕಗಳೊಂದಿಗೆ ಶಾಲೆಗೆ ದ್ವಿತಿಯ ಸ್ಥಾನ ಗಳಿಸಿದ ಅಭಿನವ ಗೊಂಗ್ಲೆ ಮತ್ತು ಕುಸ್ತಿ ಕ್ರೀಡೆಯಲ್ಲಿ ರಾಷ್ಟ್ರಮಟ್ಟಕ್ಕೆ ತೃತೀಯ ಸ್ಥಾನ ಗಳಿಸಿದ ಮಲ್ಲಿಕಾರ್ಜುನ ಚಂಚಲಿ, ಸ್ಕೈಕಿಂಗ್ ನಲ್ಲಿ ರಾಷ್ಟ್ರಮಟ್ಟಕ್ಕೆ ಆಯ್ಕೆಯಾದ ಸಮೀರ ಬಾಡಗಂಡಿ, ಲಕ್ಷ್ಮೀ ಭಂಟನೂರ ಅವರುಗಳನ್ನು ಸನ್ಮಾನಿಸಲಾಯಿತಲ್ಲದೇ, ವಿವಿಧ ವಿಭಾಗಗಳಲ್ಲಿ ಸಾಧನೆಗೈದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು.

ವಿದ್ಯಾರ್ಥಿ ಪ್ರತಿನಿಧಿಗಳಾದ ಸಂಕೇತ ರಾಠೋಡ, ಸುಶ್ಮಿತಾ ಬಂಡಿವಡ್ಡರ ವೇದಿಕೆ ಮೇಲಿದ್ದರು. ಉಪಪ್ರಾಚಾರ್ಯ ಎಸ್.ಕೆ.ರಾಠೋಡ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಶಾಫಿಯಾ ಪಠಾಣ, ಭ್ಯಾಗ್ಯಶ್ರೀ ಹಿರೇಮಠ ನಿರೂಪಿಸಿದರು. ಪಾರ್ವತಿ ತುಂಬರಮಟ್ಟಿ ವಂದಿಸಿದರು. ನಂತರ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

## ದಾಳಿಂಬೆ ವೈಜ್ಞಾನಿಕ ಬೇಸಾಯ ಕುರಿತು ತರಬೇತಿ

# ದಾಳಿಂಬೆ ಬೆಳೆಯಲ್ಲಿ ವೈಜ್ಞಾನಿಕ ಪದ್ಧತಿ ಅನುಸರಿಸಿ: ತಮ್ಮಯ್ಯ



• ಮಲ್ಲಮ್ಮ ನುಡಿ ವಾರ್ತೆಬಾಗಲಕೋಟೆ

ದಾಳಿಂಬೆ ಬೆಳೆಯಲ್ಲಿ ವೈಜ್ಞಾನಿಕ ಬೇಸಾಯ ಪದ್ಧತಿ ಅನುಸರಿಸಿದಲ್ಲಿ ಗುಣಮಟ್ಟದ ದಾಳಿಂಬೆ ಹಣ್ಣು ಬೆಳೆಯಲು ಸಾಧ್ಯವಾಗುತ್ತದೆ ಎಂದು ತೋಟಗಾರಿಕೆ ವಿಶ್ವವಿದ್ಯಾಲಯದ ಶಿಕ್ಷಣ ನಿರ್ದೇಶಕ ಡಾ.ತಮ್ಮಯ್ಯ ಎನ್ ಹೇಳಿದರು.

ತೋಟಗಾರಿಕೆ ವಿವಿಯ ರೈತ ಭವನದ ತರಬೇತಿ ಕೇಂದ್ರದಲ್ಲಿ ಬುಧವಾರ ಮುಖ್ಯ ತೋಟಗಾರಿಕೆ ಸಂಶೋಧನೆ ಮತ್ತು ವಿಸ್ತರಣಾ ಕೇಂದ್ರ, ತೋಟಗಾರಿಕೆ ಇಲಾಖೆ ಬಾಗಲಕೋಟೆ ಹಾಗೂ ಬೀಳಗಿ ಮತ್ತು ಡಾ.ಎಸ್.ಬಿ.ದಂಡಿನ ಶಿಕ್ಷಣ ಮತ್ತು ಸಂಶೋಧನಾ ಪ್ರತಿಷ್ಠಾನ ಸಂಸ್ಥೆ ಇವರ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡ ದಾಳಿಂಬೆ ಬೆಳೆಯಲ್ಲಿ ವೈಜ್ಞಾನಿಕ ಬೇಸಾಯ ಪದ್ಧತಿ ಕುರಿತ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಗುಣಮಟ್ಟದ ದಾಳಿಂಬೆ ಬೆಳೆಯಲು ಭೂಮಿಯ ಫಲವತ್ತತೆ ಮುಖ್ಯವಾಗಿರುತ್ತದೆ ಎಂದರು.

ದಾಳಿಂಬೆ ನಾಟಿ ಪೂರ್ಣದಲ್ಲಿ ಭೂಮಿಯನ್ನು ಪರೀಕ್ಷೆ ಮಾಡಿ, ಸಸ್ಯ ಜಂತು ನಿವಾರಣೆ ಮಾಡಬೇಕು. ರೋಗಗಳು ಬಾರದಂತೆ ಮುಂಜಾಗ್ರತಾ ಕ್ರಮಗಳನ್ನು ಅನುಸರಿಸಿ ದಾಳಿಂಬೆ

ಬೆಳೆಯಲು ಮುಂದಾಗಬೇಕು. ಬೆಳೆದ ಬೆಳೆಯನ್ನು ಬೇರೆ ದೇಶಗಳಿಗೆ ರಫ್ತು ಮಾಡುವ ಮೂಲಕ ಉತ್ತಮ ಬೆಲೆಯನ್ನು ಪಡೆದು ತಮ್ಮ ಆರ್ಥಿಕ ಮಟ್ಟವನ್ನು ಹೆಚ್ಚಿಸಿಕೊಳ್ಳಬೇಕು ಎಂದು ಡಾ.ತಮ್ಮಯ್ಯ ತಿಳಿಸಿದರು.

ಮುಖ್ಯ ಅತಿಥಿಗಳಾಗಿದ್ದ ತೋಟಗಾರಿಕೆ ಇಲಾಖೆಯ ಜಂಟಿ ನಿರ್ದೇಶಕ ರವೀಂದ್ರ ಹಕಾಟಿ ಮಾತನಾಡಿ, ತೋಟಗಾರಿಕೆ ಬೆಳೆಯಲ್ಲಿ ಬರುವ ಸಮಸ್ಯೆಗಳಿಗೆ ಪ್ರತಿ ಮೂರು ತಿಂಗಳಿಗೊಮ್ಮೆ ವಿಜ್ಞಾನಿಗಳೊಂದಿಗೆ ಚರ್ಚಿಸಲಾಗುತ್ತಿದೆ. ರೈತರ ಜಮೀನಿನಲ್ಲಿಯೇ ಪ್ರಾತ್ಯಕ್ಷಿಕೆಗಳನ್ನು ಹಮ್ಮಿಕೊಳ್ಳಲು ಸರಕಾರದ ಮಟ್ಟದಲ್ಲಿ ಯೋಜನೆ ರೂಪಿಸಲಾಗುತ್ತಿದೆ. ಬೂದಿಹಾಳ ಗ್ರಾಮದಲ್ಲಿ 10 ಎಕರೆ ಜಮೀನು ಖರೀದಿಸಲಾಗಿದ್ದು, ದಾಳಿಂಬೆ ಬೆಳೆಯ ಸಸಿ ತಯಾರಿ ಮಾಡಿಕೊಡುವ ಕೆಲಸ ನಡೆಸಲಾಗುತ್ತಿದೆ ಎಂದು ತಿಳಿಸಿದರು.

> “ವಾಣಿಜ್ಯ ಬೆಳೆಯಾಗಿರುವ ದಾಳಿಂಬೆ ಹಣ್ಣಿನ ಸಂಶೋಧನೆ ಹಾಗೂ ಪ್ರಾತ್ಯಕ್ಷಿಕೆ ತೋಟಗಾರಿಕೆ ವಿವಿಯಲ್ಲಿ ನಡೆಯುತ್ತಿದ್ದು, ರೈತರಿಗೆ ಆಧುನಿಕ ತಂತ್ರಜ್ಞಾನದ ಪದ್ಧತಿಗಳನ್ನು ತಿಳಿಸುವ ನಿಟ್ಟಿನಲ್ಲಿ ಜಿಲ್ಲೆಯಲ್ಲಿ ರಾಷ್ಟ್ರ ಮಟ್ಟದ ದಾಳಿಂಬೆ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗುತ್ತಿದೆ.
> ಡಾ.ವಸಂತ ಗಾಣಿಗೇರ.

ಅಧ್ಯಕ್ಷತೆ ವಹಿಸಿದ್ದ ತೋಟಗಾರಿಕೆ ವಿವಿಯ ಸಂಶೋಧನಾ ನಿರ್ದೇಶಕ ಡಾ.ಬಿ.ಫಕ್ರುದ್ದೀನ್, ದಾಳಿಂಬೆ ಬೆಳೆಯನ್ನು ಜಾಗೃತಿಯಿಂದ ಬೆಳೆಯಬೇಕು.

ನೀರು ಕಡಿಮೆ ಇದ್ದರೂ ಬೆಳೆ ಬರುತ್ತದೆ. ಆದರೆ ಬೆಳೆಗೆ ಬರುವ ರೋಗವನ್ನು ನಿಯಂತ್ರಿಸುವ ಕೆಲಸವಾಗಬೇಕು. ಅದಕ್ಕಾಗಿ ಬೇಸಾಯ ಪದ್ದತಿಯಲ್ಲಿ ವೈಜ್ಞಾನಿಕ ಪದ್ದತಿ ಅಳವಡಿಸಿಕೊಳ್ಳಬೇಕು ಎಂದರು.

ಕಲಾದಗಿ ಹಣ್ಣು ಬೆಳೆಗಾರರ ವಿದ್ಯಾ ಸಂಸ್ಥೆಯ ಅಧ್ಯಕ್ಷ ಕೆ.ಟಿ.ಪಾಟೀಲ ಅನುಭವ ಹಂಚಿಕೊಂಡು 1980 ರಿಂದ ದಾಳಿಂಬೆ ಬೆಳೆಯನ್ನು ಬೆಳೆಯುತ್ತಿದ್ದು, ಅದರಿಂದ ಬರುವ ಹಣದಲ್ಲಿ ಒಂದು

ಭಾಗ ಕೂಡಿಟ್ಟು, ಹಣ್ಣು ಬೆಳೆಗಾರರ ವಿದ್ಯಾಸಂಸ್ಥೆಯನ್ನು ಹುಟ್ಟುಹಾಕಲಾಗಿದೆ. ಈ ಸಂಸ್ಥೆಯಲ್ಲಿ 1400 ವಿದ್ಯಾರ್ಥಿಗಳು ಶಿಕ್ಷಣ ಪಡೆದುಕೊಂಡಿದ್ದಾರೆ. ಬೆಳಗಾರರಿಗೆ ಮತ್ತಷ್ಟು ಉತ್ತೇಜನ ನೀಡುವ ನಿಟ್ಟಿನಲ್ಲಿ ಸರಕಾರದ ಯೋಜನೆಗಳು ರೈತರ ಮನೆ ಬಾಗಿಲಿಗೆ ತಲುಪಿಸುವ ಕಾರ್ಯವಾಗಬೇಕೆಂದು ಹೇಳಿದರು.

ತೋಟಗಾರಿಕಾ ವಿಜ್ಞಾನ ಕೇಂದ್ರದ ಸಹ ಸಂಶೋಧನಾ ಹಾಗೂ ವಿಸ್ತರಣಾ ನಿರ್ದೇಶಕ ಡಾ.ವಸಂತ ಗಾಣಿಗೇರ, ಕ್ಷೇತ್ರ ಅಧೀಕ್ಷಕ ಡಾ.ಆನಂದ ನಂಜಪ್ಪನವರ, ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕ ಮಹೇಶ ದಂಡನ್ನವರ ಇದ್ದರು.

## ಶಿವಾಜಿ ಮಹಾರಾಜರ ಜಯಂತಿ

# ಛತ್ರಪತಿ ಶಿವಾಜಿ ಧೈರ್ಯ, ಶೌರ್ಯದ ಪ್ರತೀಕ



**ಅದ್ದೂರಿ ಮೆರವಣಿಗೆ**

> “ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ಅಂಗವಾಗಿ ಜಿಲ್ಲಾಡಳಿತ ಭವನದಿಂದ ಡಾ.ಬಿ.ಆರ್.ಅಂಬೇಡ್ಕರ ಭವನದವರೆಗೆ ಶಿವಾಜಿ ಭಾವಚಿತ್ರದ ಮೆರವಣಿಗೆ ಅದ್ದೂರಿಯಾಗಿ ಜರುಗಿತು. ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ ಮೆರವಣಿಗೆ ಚಾಲನೆ ನೀಡಿದರು. ಮೆರವಣಿಗೆಯಲ್ಲಿ ವಿವಿಧ ಜಾನಪದ ಕಲಾತಂಡಗಳು ಭಾಗವಹಿಸಿದ್ದವು.

• ಮಲ್ಲಮ್ಮ ನುಡಿ ವಾರ್ತೆಬಾಗಲಕೋಟೆ

ಶಿವಾಜಿ ಮಹಾರಾಜರು ಧೈರ್ಯ, ಶೌರ್ಯ ಮತ್ತು ಸ್ವಾಭಿಮಾನದ ಪ್ರತೀಕ ಎಂದು ರಾಜ್ಯಸಭಾ ಸದಸ್ಯ ನಾರಾಯಣಶಾ ಭಾಂಡಗೆ ಹೇಳಿದರು.

ನವನಗರದ ಡಾ.ಬಿ.ಆರ್.ಅಂಬೇಡ್ಕರ ಭವನದಲ್ಲಿ ಗುರುವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಹಮ್ಮಿಕೊಂಡ ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಶಿವಾಜಿ ಮಹಾರಾಜ ಸಾಮಾನ್ಯ ವ್ಯಕ್ತಿಯಾಗಿದ್ದುಕೊಂಡು ಅಸಮಾನ್ಯ ಸಾಧನೆ ಮಾಡಿದ್ದಾರೆ. ತಾಯಿ ಜೀಜಾಬಾಯಿ ನೀಡಿದ ಶಿಕ್ಷಣ, ಬೆಳೆದ ವಾತಾವರಣ, ಜೀವನಾನುಭವ ಶಿವಾಜಿಗೆ ಪ್ರೇರಣೆ ನೀಡಿತ್ತು ಎಂದರು.

ಶಿವಾಜಿ ದೇಶಕ್ಕೆ ನೀಡಿದ ಕೊಡುಗೆ ಅಪಾರವಾಗಿದ್ದು, ಸ್ವರಾಜ್ಯದ ಪರಿಕಲ್ಪಣೆಯನ್ನು ಭಾರತದಲ್ಲಿ ಹುಟ್ಟುಹಾಕಿದ ಮೊದಲ ವ್ಯಕ್ತಿಯಾಗಿದ್ದಾರೆ. ಅವರ ನಾಯಕತ್ವ ಗುಣ, ಸಾಹಸ, ಜೀವನ, ಆಡಳಿತ ಕಾರ್ಯವೈಖರಿ ನಮಗೆಲ್ಲರಿಗೂ ಅನುಕರಣೀಯವಾದುದು ಎಂದ ಭಾಂಡಗೆ, ಇಂತಹ ಮಹಾತ್ಮರ ಜಯಂತಿ ಕಾರ್ಯಕ್ರಮದಲ್ಲಿ ಹೆಚ್ಚು ಜನ ಪಾಲ್ಗೊಳ್ಳದೇ ಇರುವುದು ವಿಷಾಧನೀಯ ಎಂದರು.

ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ಜಿಲ್ಲಾಧ್ಯಕ್ಷ ಅನೀಲಕುಮಾರ ದಡ್ಡಿ ಮಾತನಾಡಿ, ಮಹಾತ್ಮರ ಜಯಂತಿಗಳನ್ನು ಕೇವಲ ಆಚರಣೆ ಮಾಡಿದರೆ ಸಾಲದು, ಅವರ ತತ್ವ, ಸಿದ್ಧಾಂತ, ಮೌಲ್ಯಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಅಂದಾಗ ಮಾತ್ರ ಜಯಂತಿ ಆಚರಣೆಗೆ ಸಾರ್ಥಕತೆ ಬರುತ್ತದೆ ಎಂದು ಹೇಳಿದರು.

ಜಿಲ್ಲಾಧಿಕಾರಿ ಸಂಗಪ್ಪ ಮಾತನಾಡಿ, ಶಿವಾಜಿ ಮಹಾರಾಜ ಸ್ವರಾಜ್ಯದ ಕನಸನ್ನು ಸಾಕಾರಗೊಳಿಸಿದ ಮಹಾನ್ ನಾಯಕ. ಅವರು ಶಕ್ತಿಶಾಲಿ ಆಡಳಿತ ವ್ಯವಸ್ಥೆಯನ್ನು ರೂಪಿಸಿದವರು ಎಂದರು.

ಸಮುದಾಯದ ಮುಖಂಡ ಶೇಖರ ಮಾನೆ ಮಾತನಾಡಿ, ಶಿವಾಜಿ ಮಹಾರಾಜರ ಆಡಳಿತ ಕಾಲದಲ್ಲೇ ಜಾರಿಗೆ ತಂದ ರಾಜನೀತಿಗಳು ಇಂದಿನ ಆಡಳಿತ ವ್ಯವಸ್ಥೆಗೆ ಮಾದರಿಯಾಗಿವೆ ಎಂದರು.

ಉಪನ್ಯಾಸಕ ಚಂದ್ರಶೇಖರ ಕಾಳನ್ನವರ ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ, ಉಪವಿಭಾಗಾಧಿಕಾರಿ ಸಂತೋಷ ಜಗಲಾಸರ, ತಹಶೀಲ್ದಾರ ವಾಸುದೇವ ಸ್ವಾಮಿ ಸೇರಿದಂತೆ ಸಮುದಾಯದ ಮುಖಂಡರು, ಮಹಿಳಾ ಮುಖಂಡರು ಉಪಸ್ಥಿತರಿದ್ದರು.

# ಇಡೀ ದೇಶದಲ್ಲಿ ಶಿವಾಜಿ ಮಹಾರಾಜರಂತಹ ರಾಜರಿರಲಿಲ್ಲ

• ಮಲ್ಲಮ್ಮ ನುಡಿ ವಾರ್ತೆ ಬಸವನಬಾಗೇವಾಡಿ



ರಾಷ್ಟ್ರ ಪುರುಷ, ರಾಷ್ಟ್ರವೀರ, ಧರ್ಮನಿರಪೇಕ್ಷ, ಜಾತ್ಯತೀತ ಮಹಾವೀರ, ರೈತ ಅಭಿವೃದ್ಧಿ, ಸ್ವದೇಶ ರಾಜ್ಯಸಂಸ್ಥಾಪಕ ಛತ್ರಪತಿ ಶಿವಾಜಿ ಮಹಾರಾಜರ ಆದರ್ಶ ತತ್ವಗಳನ್ನು ಇಂದಿನ ಯುವ ಜನಾಂಗವು ಅಳವಡಿಸಿಕೊಳ್ಳುವ ಅಗತ್ಯವಿದೆ ಎಂದು ರಾಷ್ಟ್ರೀಯ ಬಸವಸೈನ್ಯದ ಸಂಸ್ಥಾಪಕ ಅಧ್ಯಕ್ಷ ಶಂಕರಗೌಡ ಬಿರಾದಾರ ಹೇಳಿದರು.

ಪಟ್ಟಣದ ವೀರ ರಾಣಿ ಚನ್ನಮ್ಮ ವೃತ್ತದಲ್ಲಿ ರಾಷ್ಟ್ರೀಯ ಬಸವಸೈನ್ಯ ಸಂಘಟನೆ ಏರ್ಪಡಿಸಿದ್ದ ಛತ್ರಪತಿ ಶಿವಾಜಿ ಮಹಾರಾಜರ 396ನೆಯ ಜಯಂತೋತ್ಸವದ ಪ್ರಯುಕ್ತ ಶಿವಾಜಿ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿದ ಅವರು, ಇಡೀ ದೇಶದಲ್ಲಿ ಶಿವಾಜಿ ಮಹಾರಾಜರಂತಹ ರಾಜರಿರಲಿಲ್ಲ. ಅವರ ದೇಶಭಕ್ತಿ, ರಾಷ್ಟ್ರಪ್ರೇಮ, ಯುದ್ಧನೀತಿ ಧೈರ್ಯ, ಶೌರ್ಯ, ಮಹಿಳೆಯರ ಗೌರವ, ಜಾತ್ಯತೀತ ಮನೋಭಾವನೆ ಇತರೇ ರಾಜರಲ್ಲಿ ಕಾಣುವುದು ತೀರ ಕಡಿಮೆ. ರೈತರ ಬಗ್ಗೆ ಅಪಾರ ಕಳಕಳಿ ಹೊಂದಿದ್ದರು. ಮೊಘಲರೊಂದಿಗೆ ಯುದ್ಧ ಮಾಡಿ ಗೆದ್ದಿದ್ದರು. ಗೆರಿಲ್ಲಾ ಯುದ್ಧ ಪರಿಣತರಾಗಿದ್ದರು. ತಾಯಿ ಜೀಜಾಮಾತಾ ಮಾರ್ಗದರ್ಶನದಲ್ಲಿ ರಾಷ್ಟ್ರಭಕ್ತಿ ಬೆಳೆಸಿಕೊಂಡ ಶಿವಾಜಿ ಬಾಲ್ಯದಿಂದಲೇ ರಾಮಾಯಣ, ಮಹಾಭಾರತ ಓದಿ ಸ್ವರಾಜ್ಯ ರಾಜ್ಯ ನಿರ್ಮಿಸಿದ್ದರು ಎಂದು ತಿಳಿಸಿದರು. ಕರ್ನಾಟಕ-ಮಹಾರಾಷ್ಟ್ರದ ಸಂಬಂಧಗಳು ಶತಮಾನಗಳಿಂದಲೂ ಭಾತೃತ್ವ ರೀತಿಯಲ್ಲಿವೆ. ಶಿವಾಜಿಯ ತಂದೆಯ ಸಮಾಧಿ ದಾವಣಗೆರೆಯಲ್ಲಿದೆ. ಶಿವಾಜಿಯು ಕರ್ನಾಟಕದಲ್ಲಿ ಅನೇಕ ದಿನ ಉಳಿದು ಅನನ್ಯವಾದ ಸಂಬಂಧ ಹೊಂದಿದ್ದರು. ಕರ್ನಾಟಕ ಮಹಾರಾಷ್ಟ್ರದ ಗಡಿ ಭಾಗದಲ್ಲಿ ಕನ್ನಡಿಗರು ಮರಾಠಿ ಭಾಷಿಕರು ಸಹೋದರಂತೆ ಜೀವನವನ್ನು ನಡೆಸುತ್ತಿದ್ದಾರೆ ಆದರೆ ಕೆಲ ಕಿಡಗೇಡಿಗಳು ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಗಡಿ ವಿವಾದ ಭಾಷಾ ವಿವಾದಗಳನ್ನು ಸೃಷ್ಟಿಸುವರು ರಾಜದ್ರೋಹಿಗಳಿಗೆ ಜನತೆ ತಲೆಕೆಡಿಸಿಕೊಳ್ಳಬಾರದು ಎಂದು ಹೇಳಿದರು.

ಈ ಸಂದರ್ಭದಲ್ಲಿ ಸಂಚಾಲಕ ಶ್ರೀಕಾಂತ ಕೊಟ್ರಶೆಟ್ಟಿ, ಸಂಜು ಬಿರಾದಾರ, ಪ್ರಶಾಂತ ಮುಂಜಾನೆ, ನಿಂಗಪ್ಪ ಅವಟಿ ಜಟ್ಟಿಂಗರಯ ಮಾಲಗಾರ, ಬದ್ರಿ ಮಣ್ಣೂರ, ಆನಂದ

ವನರೊಟ್ಟಿ ಸುರೇಶ ಹಾರಿವಾಳ, ಸಂಗಮೇಶ ಮೈಲೇಶ್ವರ, ಜಗದೀಶ ಬಿಜಾಪುರ, ವೆಂಕಟೇಶ ಕರಾಡೆ, ಹಣಮಂತ ಅಡಗಿಮನಿ, ಶಂಕರಗುರು ರಜಪೂತ

, ಮುತ್ತು ಪತ್ತಾರ, ಜಗದೀಶ ನಿಕ್ಕಮ್ಮ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## ಸಹಾಯಕಿಯರ ಹುದ್ದೆಗಳ ಆಯ್ಕೆಗೆ ಅರ್ಜಿ ಆಹ್ವಾನ

ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ಅಫಜಲಪುರ ಶಿಶು ಅಭಿವೃದ್ಧಿ ಯೋಜನೆಯಲ್ಲಿ ಖಾಲಿಯಿರುವ 06 ಅಂಗನವಾಡಿ ಕಾರ್ಯಕರ್ತೆಯರ ಹಾಗೂ 35 ಸಹಾಯಕಿಯರ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮಹಿಳಾ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ ಎಂದು ಅಫಜಲಪೂರ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ತಿಳಿಸಿದ್ದಾರೆ.

ಅರ್ಹ ಮಹಿಳಾ ಅಭ್ಯರ್ಥಿಗಳು https://karnemakaone.kar.nic.in/abcd ವೆಬ್‌ಸೈಟ್‌ದಲ್ಲಿ ಆನ್‌ಲೈನ್ ಮೂಲಕ 2026ರ ಮಾರ್ಚ್ 16ರ ಗಂಟೆ 5.30 ಗಂಟೆಯೊಳಗಾಗಿ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಅಫಜಲಪೂರ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿಯನ್ನು ಸಂಪರ್ಕಿಸಲು ಕೋರಲಾಗಿದೆ.

# ಶಬ್ಧ ಮಾಲಿನ್ಯ ನಿಯಂತ್ರಣಕ್ಕೆ ಆಗ್ರಹಿಸಿ ಪ್ರತಿಭಟನೆ



• ಮಲ್ಲಮ್ಮ ನುಡಿ ವಾರ್ತೆಬಾಗಲಕೋಟೆ

ನವನಗರದ ಸೆಕ್ಟರ್ ನಂ.47 ರಲ್ಲಿರುವ ಕರ್ನಾಟಕ ರಾಜ್ಯ ಬೀಜ ನಿಗಮದಲ್ಲಿರುವ ಯಂತ್ರಗಳ ಶಬ್ಧ ಮಾಲಿನ್ಯ ನಿಯಂತ್ರಣಕ್ಕೆ ಒತ್ತಾಯಿಸಿ ನವನಗರದ ಮುಚಖಂಡಿ ಅತಿಥಿ ಬಡಾವಣೆಯ ನಿವಾಸಿಗಳು ಬುಧವಾರ ಪ್ರತಿಭಟನೆ ನಡೆಸಿದರು.

ಸೆಕ್ಟರ್ 47ರಲ್ಲಿರುವ ಕರ್ನಾಟಕ ರಾಜ್ಯ ಬೀಜ ನಿಗಮದ ಸಂಸ್ಕರಣಾ ಘಟಕದ ಮುಂದೆ ಪ್ರತಿಭಟನೆ ನಡೆಸಿದ ಬಡಾವಣೆಯ ನಿವಾಸಿಗಳು ಬೀಜ ಸಂಸ್ಕರಣಾ ಘಟಕದಿಂದ ಹೊರ ಬರುವ ಶಬ್ಧವನ್ನು ನಿಯಂತ್ರಿಸಬೇಕು ಎಂದು ಒತ್ತಾಯಿಸಿ ನಿಗಮದ ವ್ಯವಸ್ಥಾಪಕರಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಬಡಾವಣೆ ನಿವಾಸಿಗಳಾದ ರೇಣುಕಾ ಹೂವಿನಹಳ್ಳಿ, ಲಚ್ಚವ್ವ ಅಂಬಿಗೇರ ಹಾಗೂ ರೇಣುಕಾ ಹೆರಕಣ್ಣವರ, ಬೀಜ ನಿಗಮದ ಸಂಸ್ಕರಣಾ ಘಟಕದಿಂದ ನಿತ್ಯ ಬೆಳಿಗ್ಗೆ 10.30ರಿಂದ ಸಂಜೆ 6 ಗಂಟೆಯವರೆಗೆ ಯಂತ್ರದಿಂದ ಬರುವ ಶಬ್ಧದಿಂದ ಬಹಳಷ್ಟು ತೊಂದರೆಯಾಗುತ್ತಿದೆ. ಇಳಿವಯಸ್ಸಿನವರು, ಮಕ್ಕಳಿಗೆ ಯಂತ್ರದ ಸಪ್ಪಳದಿಂದ ಸಮಸ್ಯೆಗಳಾಗುತ್ತಿದ್ದು ಭಾರೀ ಸಪ್ಪಳ ನಿಯಂತ್ರಣಕ್ಕೆ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ, ಕೃಷಿ ಇಲಾಖೆ ಗಮನಹರಿಸುವಂತೆ ಆಗ್ರಹಿಸಿದರಲ್ಲದೇ, 15 ದಿನದೊಳಗೆ ಸಮಸ್ಯೆಗೆ ಪರಿಹಾರ ಕಲ್ಪಿಸಬೇಕು. ಇಲ್ಲದಿದ್ದಲ್ಲಿ ಬೀಜ ನಿಗಮದ ಕಚೇರಿ ಮುಂದೆ ಹೋರಾಟ ನಡೆಸುವುದಾಗಿ ಹೇಳಿದರು.

ವಕೀಲ ಎಸ್.ಪಿ.ಹೂವಿನಹಳ್ಳಿ ಮಾತನಾಡಿ, ಈ ಬಗ್ಗೆ ಮೌಖಿಕವಾಗಿ ನಿಗಮದ ವ್ಯವಸ್ಥಾಪಕರ ಗಮನಕ್ಕೆ ತಂದರೂ ಯಾವುದೇ ಕ್ರಮ ಕೈಗೊಂಡಿಲ್ಲ. ಜನವಸತಿ ಪ್ರದೇಶದಲ್ಲಿ ಇಷ್ಟೊಂದು ಯಂತ್ರದ ಶಬ್ಧ ಬರುತ್ತಿದ್ದರೂ ಅದಕ್ಕೆ ಪರ್ಯಾಯ ಮಾರ್ಗವನ್ನು ಇಲ್ಲಿಯ ಅಧಿಕಾರಿಗಳು ಕೈಗೊಂಡಿಲ್ಲ ಎಂದು ದೂರಿ, ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧಿಕಾರಿಗಳು ಕ್ರಮಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ನಂತರ ಪ್ರತಿಭಟನಾಕಾರರು ಕರ್ನಾಟಕ ರಾಜ್ಯ ಬೀಜ ನಿಗಮದ ವ್ಯವಸ್ಥಾಪಕ ಆಶೀಪ್ ಅವರಿಗೆ ಮನವಿ ಸಲ್ಲಿಸಿದರು. ಪ್ರತಿಭಟನೆಯಲ್ಲಿ ಈರವ್ವ ಬಣಕಾರ, ಚಂದ್ರವ್ವ ಅಂತಾಪುರ, ಬಸಪ್ಪ ಶಿಕ್ಕೇರಿ, ಡಿ.ವಿ.ಹೆರಕಣ್ಣವರ, ಲಕ್ಷ್ಮವ್ವ ನೀರಲಕೇರಿ, ಪಿ.ಜಿ.ಹೆರಕಣ್ಣವರ, ಎಸ್.ಎಚ್.ಹೆರಕಣ್ಣವರ, ಬಸಗಂಗವ್ವ ಗಾಣಿಗೇರ, ರೇಣುಕಾ ಗಾಣಿಗೇರ, ಗುರುಸಿದ್ದವ್ವ ಅಂಬಲಿಕೊಪ್ಪ, ಎಸ್.ಎಸ್.ಹಿರೇಮಠ, ಎಂ.ಎಲ್.ಅಂಬಿಗೇರ, ಸುನಂದ ಗಾಣಿಗೇರ, ಮಲ್ಲವ್ವ ಗಾಣಿಗೇರ , ಸಿ.ಎಸ್.ರಾಯಚೂರ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

# ವೈಭವದ ರಾಚೋಟೇಶ್ವರ ಬೆಳ್ಳಿಮೂರ್ತಿ ಮೆರವಣಿಗೆ

• ಮಲ್ಲಮ್ಮ ನುಡಿ ವಾರ್ತೆಬಾಗಲಕೋಟೆ



ತಾಲೂಕಿನ ಶಿರೂರ ಪಟ್ಟಣದ ಲಂಗಟದವರ ಓಣಿಯಲ್ಲಿನ ರಾಚೊಟೇಶ್ವರ ದೇವಸ್ಥಾನದಲ್ಲಿ ರಾಚೋಟೇಶ್ವರ ನೂತನ ಬೆಳ್ಳಿಮೂರ್ತಿಯ ಮೆರವಣಿಗೆ ಹಾಗೂ ಪ್ರತಿಷ್ಠಾಪನೆ ಕಾರ್ಯಕ್ರಮ ಮಂಗಳವಾರ ವೈಭವದಿಂದ ಜರುಗಿತು.

ಬೆಳಿಗ್ಗೆ 9 ಗಂಟೆಯಿಂದ ಸಿದ್ದೇಶ್ವರ ದೇವಸ್ಥಾನದಿಂದ ರಾಚೊಟೇಶ್ವರ ದೇವರ ಬೆಳ್ಳಿಮೂರ್ತಿಯ ಮೆರವಣಿಗೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಜರುಗಿತು.

ಕರಡಿ ಮಜಲು, ಪುರವಂತರ ಕುಣಿತ ಹಾಗೂ ಕುಂಭ ಹೊತ್ತ ಹಾಗೂ ಕಳಸಾರತಿ ಹಿಡಿದು ಸಾಗಿದ ಮಹಿಳೆಯರು ಮೆರವಣಿಗೆಗೆ ಸಾಥ್ ನೀಡಿದರು.

ನಂತರ ದೇವಸ್ಥಾನದಲ್ಲಿ ಈರಯ್ಯ ಮುಷ್ಟಿಗೇರಿಮಠ ಅವರಿಂದ ರುದ್ರಾಭಿಷೇಕ, ವಿಶೇಷ ಪೂಜೆ ಹಾಗೂ ನಾನಾ ಧಾರ್ಮಿಕ ಕಾರ್ಯಕ್ರಮಗಳು ಜರುಗಿದವು. ಗುಳೇದಗುಡ್ಡ ಮರಡಿ ಮಠದ ಕಾಡಸಿದ್ಧೇಶ್ವರ ಶಿವಾಚಾರ್ಯರು, ಸ್ಥಳೀಯ ಶಿವಯೋಗಾಶ್ರಮದ ಸಿದ್ಧಲಿಂಗ ಸ್ವಾಮೀಜಿ ಮತ್ತು ಬಳ್ಳಾರಿಯ ವಾಗೇಶ್ವರದೇವರ ನೇತೃತ್ವದಲ್ಲಿ ನೂತನ ಮೂರ್ತಿ ಪ್ರತಿಷ್ಠಾಪನೆ ನೆರವೇರಿಸಲಾಯಿತು.

ಸಿದ್ದಯ್ಯ ಲಂಗಟದ, ಗುರುಬಸಯ್ಯ ಹಿರೇಮಠ, ಅನ್ನದಾನಯ್ಯ ಎಮ್ಮಿಮಠ, ಬಸಪ್ಪ ಕುಂಬಾರ, ರಾಮಣ್ಣ ಕೋಟಿಕಲ್ಲ, ಸಂಗಪ್ಪ ನರೇಗಲ್ಲ, ಬಸಪ್ಪ ಅಂಗಡಿ, ಶರಣಯ್ಯ ಯಡಹಳ್ಳಿ, ಕಲ್ಲಪ್ಪ ಭಗವತಿ, ಸಿದ್ದು ಬಳ್ಳಾರಿ, ನಾಗಯ್ಯ ಲಂಗಟದ, ಶರಣಮ್ಮ ತೆಂಗಿನಮನಿ ಸೇರಿ ಓಣಿಯ ಹಿರಿಯರು,

ಯುವಕರು, ಮಹಿಳೆಯರು ಪಾಲ್ಗೊಂಡಿದ್ದರು.

# ಗುಲಬರ್ಗಾ ವಿವಿ, ಭೌರಮ್ಮಗೆ 2 ಚಿನ್ನದ ಪದಕ



**ಕಲಬುರಗಿ:** ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ಭೌರಮ್ಮ ಬಸವರಾಜ ಕಲಬುರಗಿ ಸಾ. ರೇವೂರ್ (ಬಿ ) ಇವರಿಗೆ ಎರಡು ಚಿನ್ನದ ಪದಕ ಲಭಿಸಿವೆ. ಜೀವಣ್ಣ ಮಸಳಿ ಬಾಗಲಕೋಟ ಮತ್ತು ಆರ್. ಕೆ. ಜೋಶಿ ಅವರ ಹೆಸರಿನ ಮೇಲೆ ಸ್ಥಾಪಿಸಿದ್ದು ಪತ್ರಿಕೋದ್ಯಮ ವಿಭಾಗದಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಈ ಚಿನ್ನದ ಪದಕಗಳನ್ನು ನೀಡಲಾಗುತ್ತಿದೆ.

ಗುಲಬರ್ಗಾ ವಿಶ್ವವಿದ್ಯಾಲಯದ 43ನೇ ವಾರ್ಷಿಕ ಘಟಿಕೋತ್ಸವ ಕಾರ್ಯಕ್ರಮವು ಜ್ಞಾನಗಂಗಾ ಆವರಣದಲ್ಲಿರುವ ಡಾ. ಬಿ. ಆರ್. ಅಂಬೇಡ್ಕರ್ ಭವನದಲ್ಲಿ ಇದೇ ಫೆ.24 ರಂದು ಬೆಳಿಗ್ಗೆ 11 ಗಂಟೆಗೆ ಚಿನ್ನದ ಪದಕ ವಿತರಿಸಲಾಗುತ್ತಿದೆ ಎಂದು ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಶಶಿಕಾಂತ್ ಎಸ್. ಉಡಿಕೇರಿ ತಿಳಿಸಿದರು. ರಾಜ್ಯದ ರಾಜ್ಯಪಾಲರು ಹಾಗೂ ವಿಶ್ವವಿದ್ಯಾಲಯಗಳ ಕುಲಾಧಿಪತಿಗಳಾದ ಥಾವರ್ ಚಂದ್ ಗೆಹ್ಲೋಟ್ ಅವರು ಘಟಿಕೋತ್ಸವದ ಅಧ್ಯಕ್ಷತೆ ವಹಿಸಿ ಗಣ್ಯರಿಗೆ ಗೌರವ ಡಾಕ್ಟರೇಟ್ ಮತು ಅಭ್ಯರ್ಥಿಗಳಿಗೆ ಪದವಿ ಪ್ರದಾನ ಮಾಡಲಿದ್ದಾರೆ. ಉನ್ನತ ಶಿಕ್ಷಣ ಸಚಿವ ಹಾಗೂ ವಿಶ್ವವಿದ್ಯಾಲಯಗಳ ಸಮಕುಲಾಧಿಪತಿ ಡಾ. ಎಂ.ಸಿ. ಸುಧಾಕರ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದು, ಪುಣೆಯ ಉನ್ನತ ರಕ್ಷಣಾ ತಂತ್ರಜ್ಞಾನ ಸಂಸ್ಥೆ (ಡೀಮ್ಡ್ ವಿಶ್ವವಿದ್ಯಾಲಯ)ಯ ವಿಶ್ರಾಂತ ಕುಲಪತಿ ಪ್ರೊ. ಎಲ್.ಎಂ. ಪಟ್ನಾಯಕ್ ಅವರು ಘಟಿಕೋತ್ಸವ ಭಾಷಣ ಮಾಡಲಿದ್ದಾರೆ. ವಿದ್ಯಾರ್ಥಿನಿಯ ಸಾಧನೆಗೆ ವಿಭಾಗದ ಸಂಯೋಜಕರಾದ ಡಾ. ಸುರೇಶ ಜಂಗೆ ಮತ್ತು ಉಪನ್ಯಾಸಕರು ಅಭಿನಂಧಿಸಿದ್ದಾರೆ.

# ಭಾಲ್ಕಿ ಶ್ರೀಮಠದಿಂದ ನಾಡಿನಲ್ಲೆಡೆ ಬಸವತತ್ವದ ಅರಿವು



• ಪರಶುರಾಮ ಕರಣಂ, ಭಾಲ್ಕಿ

ಸಮಾಜದಲ್ಲಿನ ಅಸಮಾನತೆ ತೊಡೆದು ಹಾಕಲು ಬಸವತತ್ವದ ಅರಿವು ಮೂಡಿಸುವ ಅಗತ್ಯವಿದೆ. ಆ ಕೆಲಸ ಹಿರೇಮಠ ಸಂಸ್ಥಾನ ನಾಡಿನಾದ್ಯಂತ ಮಾಡುತ್ತಿದೆ ಎಂದು ರಾಜ್ಯ ಸರಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷ ಸಿ.ಎಸ್.ಷಡಕ್ಷರಿ ಮೆಚ್ಚುಗೆ ವ್ಯಕ್ತ ಪಡಿಸಿದರು.

ಪಟ್ಟಣದ ಹಿರೇಮಠ ಸಂಸ್ಥಾನದಲ್ಲಿ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು. ಹಿರೇಮಠ ಸಂಸ್ಥಾನದ ಮೂಲಕ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ರಾಜ್ಯ ಸೇರಿ ಹೊರ ರಾಜ್ಯಗಳಲ್ಲಿ ಬಸವತತ್ವ ಪ್ರಚಾರ ಪ್ರಸಾರದ ಜತೆಗೆ ಬಡ ಮಕ್ಕಳಿಗೆ ಉಚಿತ ಶಿಕ್ಷಣ, ಅನ್ನ, ಅಕ್ಷರ ಆಶ್ರಯ ನೀಡುತ್ತಿರುವುದು ಅಭಿಮಾನದ ಸಂಗತಿ ಎಂದರು.

> **ಸುತ್ತೂರು, ಸಿದ್ಧಗಂಗೆ ಮಾದರಿಯಲ್ಲಿ ಹಿರೇಮಠ ಸಂಸ್ಥಾನದ ಮೂಲಕ ಪೂಜ್ಯರು ಹಸಿದವರಿಗೆ ಅನ್ನ, ಅಕ್ಷರ ವಂತರಿಗೆ ಜ್ಞಾನ ಮತ್ತು ನಿರ್ಗತಿಕರಿಗೆ ಆಶ್ರಯ ಕಲ್ಪಿಸಿ ನಿಜವಾದ ಸಮಾಜ ಸೇವೆ ಮಾಡುತ್ತಿರುವುದು ಸಂತಸದ ಸಂಗತಿ.**
>
> **–ಸಿ.ಎಸ್.ಷಡಕ್ಷರಿ, ರಾಜ್ಯಾಧ್ಯಕ್ಷರು ರಾಜ್ಯ ಸರಕಾರಿ ನೌಕರರ ಸಂಘ ಬೆಂಗಳೂರು**

ವಿದ್ಯಾರ್ಥಿಗಳು ಶ್ರೀಮಠದ ಸೌಲಭ್ಯ ಪಡೆದು ಉತ್ತಮ ಶಿಕ್ಷಣ, ಸಂಸ್ಕಾರದ ಜತೆಗೆ ನೈತಿಕ ಮೌಲ್ಯಗಳನ್ನು ಬೆಳೆಸಿಕೊಂಡು ಉನ್ನತ ಸಾಧನೆಗೈದು ಶ್ರೀಮಠಕ್ಕೂ ಹೆತ್ತವರಿಗೂ ಗೌರವ ತಂದು ಕೊಡಬೇಕು ಎಂದು ತಿಳಿಸಿದರು.

ಸಾನ್ನಿಧ್ಯ ವಹಿಸಿದ್ದ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ಮಾತನಾಡಿ, ರಾಜ್ಯದಲ್ಲಿ ಸತತ ಎರಡನೇ ಅವಧಿಗೆ ಸರಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷರಾಗಿ ಸಿ.ಎಸ್.ಷಡಕ್ಷರಿ ಅವರು ಆಯ್ಕೆಯಾಗಿ ಸರಕಾರಿ ನೌಕರರ ನೋವು ನಲಿವುಗಳಿಗೆ ಸ್ಪಂದಿಸಿ ಉತ್ತಮ ಕೆಲಸ ಮಾಡುತ್ತಿದ್ದಾರೆ ಎಂದು ಹೆಮ್ಮೆ ವ್ಯಕ್ತ ಪಡಿಸಿದರು.

ನೇತೃತ್ವ ವಹಿಸಿದ್ದ ಪೀಠಾಧಿಪತಿ ಗುರುಬಸವ ಪಟ್ಟದ್ದೇವರು ಮಾತನಾಡಿ, ರಾಜ್ಯದಲ್ಲಿ ಸಿ.ಎಸ್. ಷಡಕ್ಷರಿ ಅವರು ಸರಕಾರಿ ನೌಕರರ ಸಂಘವನ್ನು ಬಲ ಪಡಿಸುವುದರ ಜತೆಗೆ ನೌಕರರ ನ್ಯಾಯಯುತ ಬೇಡಿಕೆಗಳಿಗೆ ಹಂತ ಹಂತವಾಗಿ ಮನವಿ, ಹೋರಾಟದ ಮೂಲಕ ನೌಕರರಿಗೆ ನ್ಯಾಯ ಕೊಡಿಸುವ ಪ್ರಯತ್ನ ಮಾಡುತ್ತಿದ್ದಾರೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಸರಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಸೋಮಶೇಖರ ಬಿರಾದಾರ್, ಮಾಜಿ ಅಧ್ಯಕ್ಷ ರಾಜೇಂದ್ರಕುಮಾರ ಗಂದಗೆ, ಗೌರವಾಧ್ಯಕ್ಷ ಸೂರ್ಯಕಾಂತ ಬಿರಾದಾರ್, ಶಿವಶಂಕರ ಟೋಕರೆ, ತಾಲೂಕು ಸರಕಾರಿ ನೌಕರರ ಸಂಘದ ಕಾರ್ಯದರ್ಶಿ ರಾಜಪ್ಪ ಪಾಟೀಲ್, ಉಪಾಧ್ಯಕ್ಷ ಪ್ರಭು ಡಿಗ್ಗೆ, ತಾಲೂಕು ಸರಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಸೂರ್ಯಕಾಂತ ಸುಂಟೆ ಸೇರಿದಂತೆ ಹಲವರು ಇದ್ದರು. ಮುಖ್ಯಗುರು ಬಾಬು ಬೆಲ್ದಾಳ ನಿರೂಪಿಸಿ, ವಂದಿಸಿದರು.

# ಬಾಲ್ಯದಿಂದಲೇ ದೇಶ ಪ್ರೇಮ ಬೆಳೆಸಿ



**ಭಾಲ್ಕಿ:** ಮಕ್ಕಳಿಗೆ ಬಾಲ್ಯದಿಂದಲೇ ದೇಶಪ್ರೇಮ, ರಾಷ್ಟ್ರ ಪ್ರೇಮ ಬೆಳೆಸಲು ಮನೆ, ಶಾಲೆ ಹಾಗೂ ಸಮಾಜ ಕಾರ್ಯೋನ್ಮುಖವಾಗಬೇಕು ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಸಿ ಜೆ ಹಳ್ಳದ್ ಹೇಳಿದರು. ಪಟ್ಟಣದ ಶಾರದ ಪಬ್ಲಿಕ್ ಶಾಲೆಯಲ್ಲಿ ಶಿವಾಜಿ ಮಹಾರಾಜರ ಜಯಂತೋತ್ಸವದ ಪ್ರಯುಕ್ತ ಮಾತನಾಡಿ ಶಿವಾಜಿಯ ಬಾಲ್ಯ ಜೀವನ, ಸಾಹಸ, ದೇಶಪ್ರೇಮ, ಗುರು ಭಕ್ತಿ, ವಿದ್ಯಾರ್ಥಿಗಳು ಇವುಗಳನ್ನು ನಿತ್ಯ ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದು ಕಿವಿಮಾತು ಹೇಳಿದರು. ಸಂಸ್ಥೆಯ ಅಧ್ಯಕ್ಷ ವಸಂತ ಪಾಟೀಲ್ ಉಪಸ್ಥಿತರಿದ್ದರು. ಆಡಳಿತಾಧಿಕಾರಿ ಮಹಾದೇವ ಪಟ್ನೆ ಪ್ರಾಸ್ತಾವಿಕವಾಗಿ ಮಾತನಾಡಿದರು. ಮುಖ್ಯ ಶಿಕ್ಷಕಿ ಅಶ್ವಿನಿ ರಾಜೋಳೆ, ಸುಮಿತ್ರ ಪಾಟೀಲ್, ಪ್ರಜ್ಞ, ಉಮಾಶ್ರೀ, ಹೇಮಂತ್. ಕೆ, ಮೀನಾಕ್ಷಿ, ನಂದಿನಿ, ರತ್ನಮಾಲಾ, ಪ್ರವೀಣ್ ಉಪಸ್ಥಿತರಿದ್ದರು.

# ವಚನ ದರ್ಶನ ಚಿಂತನ ಗೋಷ್ಠಿ

• ಮಲ್ಲಮ್ಮ ನುಡಿ ವಾರ್ತೆ ಯಲಬುರ್ಗಾ

ತಾಲೂಕಿನ ವಣಗೇರಿ ಗ್ರಾಮದ ಬಸವ ಯೋಗಾಶ್ರಮದಲ್ಲಿ ಯಶವಂತ ಶರಣರ ಸಾನಿಧ್ಯದಲ್ಲಿ 5 ನೇಯ ವಚನ ದರ್ಶನ ಚಿಂತನ ಗೋಷ್ಠಿ ಕಾರ್ಯಕ್ರಮ ಜರಗಿತು. ದೇಶ ಗುರಿಯಾಗಿ ಹೋದವರ ಕಂಡೆ , ತಮಂದ ಗುರಿಯಾಗಿ ಲಯವಾಗಿ ಹೊದವರ ಕಂಡೆ, ಕಾಮ ಗುರಿಯಾಗಿ ಬೆಂದು ಹೋದವರ ಕಂಡೆ, ನೀ ಗುರಿಯಾಗಿ ಹೋದವರನಾರನು ಕಾಣೆ ಗುಹೇಶ್ವರ ವಿಷಯ ಕುರಿತು ಶರಣರು ಮಾತನಾಡಿದರು. ಈ ನಾಡಿನಲ್ಲಿ ತತ್ವಗಳಿಗೆ ಬರವಿಲ್ಲ ತತ್ವಗಳಿಗೆ ಸೋತ್ತಾಗುವ ಬರವಿದೆ ಶರಣರು ಧರ್ಮವನ್ನು ಪಾಲಿಸಬೇಕು ಎಂದು ಗುಡಿಹಳ್ಳಿಯ ಅಮರೇಶ ಶರಣರು ಮಾತನಾಡಿದರು. ಶರಣರಾದ ,ಬಸನಗೌಡ ಪಾಟೀಲ್ ಹಾಲಕೇರಿ, ಸಂಗಣ್ಣ ಟೆಂಗಿನಕಾಯಿ, ಶರಣಬಸಪ್ಪ ದಾನಕೈ, ಅಮರೇಗೌಡ ಪಾಟೀಲ್ ಮಾತನಾಡಿದರು. ಎಮ್.ಎಸ್.ನೀಲಕಂಠಪ್ಪ



ಅಧ್ಯಕ್ಷತೆ ವಹಿಸಿ ಮಾತನಾಡಿದರು. ಈ ವೇಳೆ ಸಿದ್ದು ಕಿನ್ನಾಳ, ಡಾ.ಸುನೀಲಕುಮಾರ ಹನುಮಣ್ಣನವರ, ಸೋಮಶೇಖರ ಕೋಳಜಿ, ಸುರೇಶ ಅವಾರಿ, ಯಲ್ಲಪ್ಪ ಬೇವೂರ,ವೀರುಪಾಕ್ಷಯ್ಯ ಪರಯ್ಯನಮಠ ಹಾಗು ಭೈರನಾಯಕನಳ್ಳಿಯ ಗ್ರಾಮದ ಶರಣರು ಭಾಗವಹಿಸಿದ್ದರು.ತ್ರೀಲಿಂಗಯ್ಯ ಬೀಳಗಿಮಠ,ಕುಬೇರಪ್ಪ ತೋಪಲಕಟ್ಟಿ ಸಂಗೀತ ಸೇವೆ ನೀಡಿದರು , ನಿವೃತ್ತ ಶಿಕ್ಷಕ ಅಶೋಕ ಮಾಲಿಪಾಟೀಲ ವಂದಿಸಿದರು. ನಂತರ ಪ್ರಸಾದ ಸೇವೆ ಜರುಗಿತು.

# ಸಾಮಾಜಿಕ ಕ್ಷೇತ್ರದ ಸಮಾಜಮುಖಿ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಸಾಮಾಜಿಕ ಕ್ಷೇತ್ರದಲ್ಲಿ ಸಹಕಾರ ನೀಡುವ ಮನೋಭಾವ ಮನುಷ್ಯನನ್ನು ಬಹು ಬೇಗ ಜನಪ್ರಿಯರಾಗಲು ನೆರವಾಗುತ್ತದೆ. ಅಂತಹ ಸಾಮಾಜಿಕ ಕ್ಷೇತದಲ್ಲಿ ಶ್ರೀಮತಿ ಆಶಾ ಬೋರೇಗೌಡ ರವರು ಸಮಾಜಮುಖಿಯಾಗಿ ಬಹುಬೇಗ ಜನಪ್ರಿಯರಾಗಿ ಹೊರಹೊಮ್ಮಿದ್ದಾರೆ ಎಂದು ರಾಜ್ಯ ಮಹಿಳಾ ಅಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮೀ ಚೌಧರಿ ಅಭಿಪ್ರಾಯಪಟ್ಟರು.

ಹೆಗ್ಗನಹಳ್ಳಿಯ ಜಿಬಿಎ ಅಕಾಂಕ್ಷಿ ಅಭ್ಯರ್ಥಿ ಆಶಾ ಬೋರೇಗೌಡ ರವರು ಸಮಾಜಮುಖಿಯಾಗುವ ನಿಟ್ಟಿನಲ್ಲಿ ತಮ್ಮ ಜನ್ಮದಿನ ಹಾಗೂ ಮಹಾಶಿವರಾತ್ರಿ ಪ್ರಯುಕ್ತ ಲೋಕೇಶ್ ಹಾಗೂ ಮಂಜುನಾಥ್ ನೇತೃತ್ವದಲ್ಲಿ ಹಮ್ಮಿಕೊಂಡಿದ್ದ ರಾಜ್ಯ ಮಟ್ಟದ 60 ಕೆಜಿ ತೂಕದ ಒಳಗಿನ ಯುವಕರ ತೇಜು ಕಪ್ ಸೀಸನ್ –3 ಮ್ಯಾಟ್ ಕಬಡ್ಡಿ ಪಂದ್ಯಾವಳಿಗಳಲ್ಲಿ ರಾಜ್ಯ ಮಹಿಳಾ ಅಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮೀ



ಚೌಧರಿ ಭಾಗವಹಿಸಿ ಆಟಗಾರರಿಗೆ ಸ್ಫೂರ್ತಿ ತುಂಬುವ ಮೂಲಕ ಶುಭ ಕೋರಿದರು.

ಈ ಸಂಧರ್ಭದಲ್ಲಿ ಶಾಸಕ ಎಸ್ ಮುನಿರಾಜು ಹೆಗ್ಗನಹಳ್ಳಿ ಬ್ಲಾಕ್ ಕಾಂಗ್ರೆಸ್ ಆದ್ಯಕ್ಷ ಜಿ ,ರಂಗಸ್ವಾಮಿ, ಪ್ರಧಾನಕಾರ್ಯದರ್ಶಿ ಎಂ, ಬಸವರಾಜು, ಡಾ. ಸಂಗನ ಬಸಪ್ಪ ಬಿರಾದರ್ ಸಮಾಜ ಸೇವಕರಾದ ರಾಘವೇಂದ್ರ ಇಮ್ರಾನ್ ಇನ್ನು ಹಲವಾರು ಸ್ಥಳೀಯ ಮುಖಂಡರು ಸಾರ್ವಜನಿಕರು ಕ್ರೀಡಾಭಿಮಾನಿಗಳು ಭಾಗವಹಿಸಿದ್ದರು.

# ಅಭಿವೃದ್ಧಿಯೇ ನನ್ನ ಮೂಲ ಮಂತ್ರ...!



**ಯಾದಗಿರಿ:** ನನ್ನ ಮೇಲೆ ವಿಶ್ವಾಸವಿಟ್ಟು ಮತ ನೀಡಿದ ಗುರುಮಠಕಲ್ ಮತಕ್ಷೇತ್ರದ ಜನರ ಬೇಡಿಕೆಯಂತೆ ಪ್ರತಿ ಗ್ರಾಮ ಹಾಗೂ ತಾಂಡಾಗಳ ಅಭಿವೃದ್ಧಿಯೇ ನನ್ನ ಮೂಲ ಮಂತ್ರವಾಗಿದೆ ಎಂದು ಶಾಸಕ ಶರಣಗೌಡ ಕಂದಕೂರ ಅವರು ತಿಳಿಸಿದರು. ತಾಲೂಕಿನ ಹತ್ತಿಕುಣಿ ಹಾಗೂ ಆನೂರ.ಕೆ ಗ್ರಾಮಗಳಲ್ಲಿ ಪ್ರತ್ಯೇಕವಾಗಿ ಹಮ್ಮಿಕೊಂಡಿದ್ದ ರಸ್ತೆ ನಿರ್ಮಾಣ ಕಾಮಗಾರಿಗಳಿಗೆ ಭೂಮಿ ಪೂಜೆ ಮಾಡಿ ಮಾತನಾಡಿದರು. 2025–26ನೇ ಸಾಲಿನ ಕೆಕೆಆರ್ ಡಿಬಿ ಮೈಕ್ರೋ ಸಾಮಾನ್ಯ ಯೋಜನೆ ಅಡಿಯಲ್ಲಿ ರೂ. 3.17ಕೋಟಿ ಮೊತ್ತದಲ್ಲಿ ಆನೂರ.ಕೆ ಗ್ರಾಮದಿಂದ ಆನೂರ. ಬಿ ಗ್ರಾಮದ ವರೆಗಿನ ರಸ್ತೆ ನಿರ್ಮಾಣ ಹಾಗೂ 9.9ಕೋಟಿ ವೆಚ್ಚದಲ್ಲಿ ಯಾದಗಿರಿ–ಸೇಡಂ ರಾಜ್ಯ ಹೆದ್ದಾರಿ ರಸ್ತೆಯ ಹತ್ತಿಕುಣಿ ಕ್ಯಾಂಪ್‌ದಿಂದ ಮೋಟ್ನಳ್ಳಿ ಕ್ರಾಸ್‌ವರೆಗಿನ ರಸ್ತೆ ನಿರ್ಮಾಣ ಕಾಮಗಾರಿಗಳಿಗೆ ಗುರುವಾರ ಚಾಲನೆ ನೀಡಿ ಮಾತನಾಡಿದರು.

# ದರೋಡೆ ಪ್ರಕರಣ ಭೇದಿಸಿದ ಪೊಲೀಸರು: ಇಬ್ಬರು ಸೆರೆ

• ಮಲ್ಲಮ್ಮ ನುಡಿ ವಾರ್ತೆ ವಿಜಯಪುರ

ಜಿಲ್ಲೆಯ ಝಳಕಿ ಪೊಲೀಸ್ ಠಾಣಾ ವ್ಯಾಪ್ತಿಯ ಹಲಸಂಗಿ ಗ್ರಾಮದಲ್ಲಿ ನಡೆದಿದ್ದ ಸುಲಿಗೆ ಪ್ರಕರಣವನ್ನು ಭೇದಿಸಿದ ಪೋಲೀಸರು ಇಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ. ಇಂದು ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಪೋಲಿಸ್ ವರಿಷ್ಠಾಧಿಕಾರಿಯಾದ ಲಕ್ಷ್ಮಣ ನಿಂಬರಗಿ ಮಾತನಾಡಿ ಮಾಹಿತಿ ನೀಡಿದರು.ಜ.26 ರಂದು ಮಧ್ಯಾಹ್ನ ಸುಮಾರು 3.30 ಗಂಟೆಯ ಸುಮಾರಿಗೆ ಹಲಸಂಗಿ ಗ್ರಾಮದ ಮಹಾರುದ್ರ ಸದಾಶಿವ ಕಂಚಗಾರ ಅವರ 'ಭೂಮಿಕಾ ಜ್ಯುವೆಲ್ಲರಿ' ಅಂಗಡಿಗೆ ಮುಖಕ್ಕೆ ಕಪ್ಪು ಬಟ್ಟೆ ಹಾಗೂ ಹೆಲ್ಮೆಟ್ ಧರಿಸಿ ಬಂದ ಇಬ್ಬರು ಆರೋಪಿಗಳು ಕಪ್ಪು ಬಣ್ಣದ ಯುನಿಕಾರ್ನ್ ಮೋಟಾರ್ ಸೈಕಲ್ ಮೇಲೆ ಆಗಮಿಸಿದ್ದರು. ತಮ್ಮ ಬಳಿ ಇದ್ದ ಪಿಸ್ತೂಲ್ ತೋರಿಸಿ ಅಂಗಡಿಯಲ್ಲಿದ್ದ 205 ಗ್ರಾಂ ಬಂಗಾರದ ಆಭರಣಗಳು ಹಾಗೂ 1 ಕೆಜಿ ಬೆಳ್ಳಿಯ ಆಭರಣಗಳನ್ನು ಸುಲಿಗೆ ಮಾಡಿಕೊಂಡು ಪರಾರಿಯಾಗಿದ್ದರು. ಸುಲಿಗೆಗೊಂಡ ಆಭರಣಗಳ ಒಟ್ಟು



ಮೌಲ್ಯ ಅಂದಾಜು ₹22 ಲಕ್ಷ ಎಂದು ತಿಳಿದುಬಂದಿದೆ.

ಪರಾರಿಯಾಗುವ ವೇಳೆ ಅಂಗಡಿ ಪಕ್ಕದಲ್ಲಿದ್ದ ಸಾರ್ವಜನಿಕರ ಕಡೆಗೆ ಪಿಸ್ತೂಲ್‌ನಿಂದ ಗುಂಡು ಹಾರಿಸಿ ಗಾಯಗೊಳಿಸಿರುವುದಾಗಿ ದೂರಿನಲ್ಲಿ ಉಲ್ಲೇಖಿಸಲಾಗಿತ್ತು. ಈ ಕುರಿತು ಅಂಗಡಿ ಮಾಲೀಕರ ದೂರು ಆಧರಿಸಿ ಝಳಕಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಪ್ರಕರಣದ ಗಂಭೀರತೆಯನ್ನು ಮನಗಂಡು ಜಿಲ್ಲಾ ಪೊಲೀಸ್ ಅಧಿಕಾರಿಗಳ ಮಾರ್ಗದರ್ಶನದಲ್ಲಿ ವಿಶೇಷ ತಂಡಗಳನ್ನು ರಚಿಸಿ ತನಿಖೆ ಕೈಗೊಂಡು ತಾಂತ್ರಿಕ ಮಾಹಿತಿ ಹಾಗೂ ಸ್ಥಳೀಯ ಸಾಕ್ಷ್ಯಾಧಾರಗಳ ಆಧಾರದ ಮೇಲೆ ಆರೋಪಿಗಳನ್ನು ಪತ್ತೆ ಹಚ್ಚುವಲ್ಲಿ ಪೊಲೀಸರು ಯಶಸ್ವಿಯಾಗಿದ್ದು ಬಂಧಿತ ಆರೋಪಿಗಳನ್ನು ಹಣಮಂತ ಮಲ್ಲಪ್ಪ ವಾಘೋಲಿ (28), ಶಿವರಾಜ್ @ ಗೌಡಪ್ಪ ರಾವುಸಾಹೇಬ ನಾವಿ (28) ಎಂದು ಗುರುತಿಸಲಾಗಿದೆ. ಇಬ್ಬರೂ ಮಹಾರಾಷ್ಟ್ರ ಮೂಲದವರಾಗಿದ್ದು, ಪ್ರಸ್ತುತ ಪೂನಾ ಭಾಗದಲ್ಲಿ ವಾಸಿಸುತ್ತಿದ್ದರು ಎಂದು ತಿಳಿದುಬಂದಿದೆ. ಆರೋಪಿಗಳಿಂದ 205 ಗ್ರಾಂ ಬಂಗಾರದ ಆಭರಣಗಳು, 1 ಕೆಜಿ ಬೆಳ್ಳಿಯ ಆಭರಣಗಳು (ಒಟ್ಟು ಮೌಲ್ಯ ₹22 ಲಕ್ಷ), 3 ಕಂಟ್ರಿ ಪಿಸ್ತೂಲ್, 26 ಜೀವಂತ ಗುಂಡುಗಳು, ಒಂದು ಏರ್ ಗನ್, ಕೃತ್ಯಕ್ಕೆ ಬಳಸಿದ ಹೊಂಡಾ ಯುನಿಕಾರ್ನ್ ಮೋಟಾರ್ ಸೈಕಲ್, ಮಾಸ್ಕ್, ಜಾಕೆಟ್ ಸೇರಿದಂತೆ ಇತರೆ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ತಿಳಿಸಿದರು ಅದಲ್ಲದೇ ಘಟನೆ ನಡೆದ ಕೇವಲ 20 ದಿನಗಳಲ್ಲೇ ಪ್ರಕರಣವನ್ನು ಭೇದಿಸಿದ ತನಿಖಾ ತಂಡದ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಕಾರ್ಯಕ್ಷಮತೆಯನ್ನು ಮೆಚ್ಚಿ ಅವರಿಗೆ ಪ್ರಶಂಸನಾ ಪತ್ರ ನೀಡಿ ಗೌರವಿಸಲಾಗಿದೆ ಎಂದು ತಿಳಿಸಿದರು.

# ಕಾಮುಕರ ಕ್ರೌರ್ಯದ ಕಿಡಿಯಾಗಿ ಬೆಳಗಿದ ಎಫ್‌ಸ್ಟೀನ್



**ವರ್ತಮಾನ–ಅವಲೋಕನ**

● ಡಾ.ಎಂ.ಮಹ್ಮದ್ ಬಾಷ ಗೂಳ್ಯಂ

ಪ್ರಧಾನ ಸಂಪಾದಕ, ಬೆಂಗಳೂರು

ಯಾವುದೇ ಒಂದು ಸಮಾಜದಲ್ಲಿ ಜೀವಿಸಬೇಕಾದರೆ, ಆ ಸಮಾಜದ ಜೊತೆಗೆ ಹೊಂದಾಣಿಕೆ ಮಾಡಿಕೊಳ್ಳಬೇಕು. ಇಲ್ಲದಿದ್ದರೆ ಅದೇ ಸಮಾಜದಿಂದ ಹೊಂದಾಣಿಕೆ ಮಾಡಿಕೊಳ್ಳದ ವ್ಯಕ್ತಿ ಉಚ್ಚಾಟಿಸಲ್ಪಡುತ್ತಾನೆ ಎನ್ನುತ್ತಾನೆ ವಿಕಾಸವಾದದ ಚಿಂತಕ ಡಾರ್ವಿನ್. ಇದು ಸಮಾಜ ಮತ್ತು ಜನಶಕ್ತಿಯ ಆಂತರಿಕ ಅಭಿಪ್ರಾಯ ಅನ್ನಿಸಿದರೂ ಅದರಾಚೆಗೆ ನಡೆಯುವ ಕ್ರಿಯೆ ಮುಖ್ಯ. ವಿಶೇಷವೆಂದರೆ; ಡಾರ್ವಿನ್ ಹೇಳಿದ್ದು ಜೆಫ್ರಿ ಎಫ್‌ಸ್ಟೈನ್ ವಿಚಾರದಲ್ಲಿ ಉಲ್ಟಾ ಆಗಿದೆ. ಸಮಾಜದ ಅವನತಿಯ ರೂಪದಲ್ಲಿ ಉದ್ಭವಿಸುವ ವ್ಯಕ್ತಿಯೊಬ್ಬ ಇಡೀ ವ್ಯವಸ್ಥೆಯನ್ನು ಕಾಮದ ಆಸೆಯಡಿ ಆಪೋಶನ ಮಾಡಿಕೊಂಡ ಪರಿಯೇ ವಿಚಿತ್ರ, ವಿಲಕ್ಷಣ.

ಜೆಫ್ರಿ ಎಡ್ವರ್ಡ್ ಎಫ್‌ಸ್ಟೈನ್ (1953–2019) ಅಮೆರಿಕನ್ ಹಣಕಾಸುದಾರ. ವಿಶ್ವದ ಶ್ರೀಮಂತರಿಗೆ ಚಿಕ್ಕ ಹುಡುಗಿಯರ ಸಪ್ಲೈ ಮಾಡೋ ಬ್ರೋಕರ್. ಜಗತ್ತಿನ ಶ್ರೀಮಂತರಿಗೆ ಹುಡುಗಿಯರನ್ನು ಪೂರೈಸುವುದೇ ಇವನ ವೃತ್ತಿ. ಇವನಿಗೆ ಲಿಟಲ್ ಸೇಂಟ್ ಜೇಮ್ಸ್'ಎಂಬ ಸ್ವಂತ ದ್ವೀಪವಿತ್ತು. ಇದು ಎಪ್‌ಸ್ಟೀನ್ ದ್ವೀಪ' ಅಥವಾ ಪೆಡೋಫೈಲ್ ದ್ವೀಪ' ಎಂದೇ ಪ್ರಸಿದ್ಧಿ. ಈ ದ್ವೀಪವಿರುವುದು ಅಮೆರಿಕದಲ್ಲಿ. 1998ರಲ್ಲಿ ವಿಕೃತ ಶಿಶು ಕಾಮಿ ಜೆಫ್ರಿ 8 ದಶಲಕ್ಷ ಡಾಲರ್ ಸುರಿದು ಈ ದ್ವೀಪ ಖರೀದಿಸಿದ್ದ. 71 ಎಕರೆ ವಿಸ್ತೀರ್ಣದ ದ್ವೀಪವು 54 ಫುಟ್ಬಾಲ್ ಮೈದಾನಗಳಷ್ಟು ಹಿರಿದು. ಮೊದಲಿಗೆ ಅಲ್ಲಿ ಮರಳಿಗೆ ನೆರಳು ಹಾಸುತ್ತಿದ್ದ ತಾಳೆಮರಗಳಷ್ಟೇ ಅಲ್ಲಿದ್ದವು. ಅವುಗಳ ನಡುವೆ ಐಷಾರಾಮಿ ರೆಸಾರ್ಟ್‌ಗಳು, ಗೆಸ್ಟ್‌ವಿಲ್ಲಾ, ಹೆಲಿಪ್ಯಾಡುಗಳನ್ನೆಲ್ಲ ಜೆಫ್ರಿ ಕಟ್ಟಿಸಿದ. ಕಾಮದ ಕ್ರೌರ್ಯವೇ ಹೆಪ್ಪುಗಟ್ಟುವಷ್ಟು ದೌರ್ಜನ್ಯಕ್ಕೆ ಆ ದ್ವೀಪವನ್ನು ನೆಲೆ ಮಾಡಿಕೊಂಡ. ಎಳೆ ಹುಡುಗಿಯರನ್ನು ಜೆಫ್ರಿ ನಿರಂತರವಾಗಿ ಪ್ರತಿಷ್ಠಿತರಿಗೆ ಪೂರೈಸತೊಡಗಿದ. ವಿಶ್ವದ ಮೂಲೆಗಳಿಂದ ಬ್ರೈನ್‌ವಾಶ್ ಆಗಿ, ಮೋಸ ಹೋಗಿ, ಕಿಡ್ನ್ಯಾಪ್ ಆಗಿ ಇಲ್ಲಿಗೆ ಬರುತ್ತಿದ್ದ ಹದಿಹರೆಯದ ಹೆಣ್ಮಕ್ಕಳಾರೂ, ಹೊರಗೆ ಹೋಗಲು ಸಾಧ್ಯವಾಗದಷ್ಟು ಸರ್ಪಕೋಟೆ ನಿರ್ಮಾಣವಾಗಿತ್ತು. ಗಮನಿಸಿ; ಪೆಡೋಫೈಲ್ ಅಂದರೆ, ಚಿಕ್ಕ ಮಕ್ಕಳ ಮೇಲೆ ಲೈಂಗಿಕ ಆಕರ್ಷಣೆ ಹೊಂದುವ ಮನೋರೋಗ. ಇಂಥ ಲೈಂಗಿಕ ಮನೋರೋಗ ಅಂಟಿಸಿಕೊಂಡು ಇಲ್ಲಿಗೆ ಬರುತ್ತಿದ್ದವರ ಪಟ್ಟಿ ದೊಡ್ಡದಿದೆ. ಇತ್ತೀಚೆಗೆ ಬಹಿರಂಗವಾದ ಎಪ್‌ಸ್ಟೀನ್ ಫೈಲ್ಸ್‌ನಿಂದಾಗಿ ಇಡೀ ಜಗತ್ತೇ ಬೆಚ್ಚಿ ಬಿದ್ದಿದೆ..!

ಈ ಕಾಮುಕನ ಕಾಮದ ಕಿಡಿಗೆ ಬಲಿಯಾದ ಜಗತ್ತಿನ ಅಗರ್ಭ ಶ್ರೀಮಂತರು, ಪ್ರತಿಷ್ಠಿತ ರಾಜಕೀಯ ನಾಯಕರು, ಬಿಲಿಯನೇರ್‌ಗಳು, ರಾಜಮನೆತನದವರು, ಉನ್ನತ ಅಧಿಕಾರಿಗಳು, ಉದ್ಯಮಿಗಳು, ವಿಜ್ಞಾನಿಗಳು ಹೀಗೆ.. ಹಲವಾರು ಮಾನವಂತ ಪುರುಷೋತ್ತಮರು, ಮರ್ಯಾದೆಗೆ ಅಂಜಿ ಕಣ್ಮರೆಯಾಗಿದ್ದಾರೆ. ಹತ್ತಾರು ದೇಶಗಳಲ್ಲಿ 15ಕ್ಕೂ ಹೆಚ್ಚು ಉನ್ನತ ಹುದ್ದೆಯ ಹಿರಿಯ ಅಧಿಕಾರಿಗಳು ಆಯಾ ಸರ್ಕಾರದ ಮಾನ ಉಳಿಸೋಕೆ ರಾಜೀನಾಮೆ ಬರೆದಿಟ್ಟಿದ್ದಾರೆ. 80ಕ್ಕೂ ಹೆಚ್ಚು ಪ್ರಭಾವಿ ವ್ಯಕ್ತಿಗಳು ತನಿಖೆಗೂ, ಸಾಮಾಜಿಕವಾಗಿ ತೀವ್ರ ಟೀಕೆಗೂ ಗುರಿಯಾಗಿದ್ದಾರೆ. ಇಮೇಲ್‌ಗಳು, ವಿಮಾನ ದಾಖಲೆ, ಸಂಪರ್ಕ ದಾಖಲೆಗಳಲ್ಲಿ ದಾಖಲಾದ ಕನಿಷ್ಠ 1 ಸಾವಿರ ಪ್ರಭಾವಿ ವ್ಯಕ್ತಿಗಳ ಹೆಸರಿಗೂ ಎಪ್‌ಸ್ಟೀನ್ ಕಳಂಕ ಮೆತ್ತಿಕೊಂಡಿದೆ. 250ಕ್ಕೂ ಹೆಚ್ಚು ಅಪ್ರಾಪ್ತೆಯರ ಮೇಲಿನ ಲೈಂಗಿಕ ದೌರ್ಜನ್ಯ ಜಾಲೆ ಕಾನೂನಿನ ಕಟಕಟೆಗೆ ಕಾರಣವಾಗಿದೆ. 1200ಕ್ಕೂ ಹೆಚ್ಚು ಸಂತ್ರಸ್ತೆಯರ ಶಾಪವೀಗ ಜಾಗತಿಕ ನಾಯಕರಿಗೆ, ಬಿಲಿಯನೇರ್‌ಗಳಿಗೆ, ಗಣ್ಯರಿಗೆ ತಟ್ಟತೊಡಗಿದೆ. ಇಂಟರೆಸ್ಟಿಂಗ್ ವಿಷಯ





ಇರುವುದೇ ಇಲ್ಲಿ. ಮನುಷ್ಯ ಕಾಮದ ಬಲಹೀನತೆಯನ್ನೇ ಕರಾಳ ದಂಧೆಗೆ ಪ್ರಮುಖ ಅಸ್ತ್ರ ಮಾಡಿಕೊಂಡ ಈತ, ತನ್ನ ದಂಧೆಗಾಗಿ ಸ್ವಂತ ದ್ವೀಪ, ಬೋಯಿಂಗ್ ವಿಮಾನವನ್ನೇ ಬಳಸುತ್ತಿದ್ದ. ಹದಿಹರೆಯದ ಕನಿಷ್ಠ ಎಂಟ್ಹತ್ತು ಹುಡುಗಿಯರನ್ನೂ ಕರುಣೆಯಿಲ್ಲದೆ ನಿತ್ಯವೂ ಹೊತ್ತು ತರುತ್ತಿತ್ತು ಲೋಲಿಟಾ'. ದ್ವೀಪದೊಳಗಿನ ರೆಸಾರ್ಟಿನ ಗೋಡೆಗಳ ನಡುವೆ ಬಂಧಿಯಾಗಿದ್ದ ನೂರಾರು ತರುಣಿಯರಿಗೆ ಈ ವಿಮಾನದ ಸದ್ದು ಕೇಳಿಸುತ್ತಲೇ, ನಮ್ಮ ಸಂಕಷ್ಟ ಹಂಚಿಕೊಳ್ಳುವ ದೌರ್ಭಾಗ್ಯ ಹೊಸ ಗೆಳತಿಯರಿಗೂ ಬಂತಲ್ಲಾ' ಎಂದು ವ್ಯಥೆಯಾಗುತ್ತಿತ್ತು. ಕಾರಣ, ಆ ದ್ವೀಪವೇ ಅನಾಚಾರದ ಸ್ವರ್ಗ.

ಇಷ್ಟೆಲ್ಲಾ ಪಾಪ ಕೃತ್ಯ ಎಸಗಿದ್ದವನಿಗೆ ಕರ್ಮ ಬಿಡಲಿಲ್ಲ..! 2019 ರಲ್ಲಿ ನ್ಯೂಯಾರ್ಕ್ ಜೈಲಿನಲ್ಲಿ ಆತ್ಮಹತ್ಯೆ ಮಾಡಿಕೊಂಡ. ಇದರ ಹಿಂದೆ ಅನೇಕ ಗುಮಾನಿಗಳಿರುವುದು ಮುಖ್ಯವಲ್ಲ; ಈತ ಬದುಕಿದ್ದಾಗ ಆ ರೆಸಾರ್ಟಿನಲ್ಲಿ ಮಾಡಿಸಿದ ವಿಡಿಯೊಗಳು, ಫೋಟೊಗಳೆಲ್ಲ ಈಗ ಜೀವಂತವಾಗಿ ಕಾಮಾಂಧರ ಜಂಘಾಬಲಕ್ಕೆ ಮರ್ಮಘಾತ ನೀಡಿವೆ. ಅವುಗಳೀಗ ಲೈಂಗಿಕ ಅಪರಾಧ ಕೃತ್ಯಗಳ ದಾಖಲೆಗಳಾಗಿ ಒಂದೊಂದಾಗಿ ಬಿಡುಗಡೆಯಾಗಿ, ಎಲೈಟ್ ಮಂದಿಯ ಕುತ್ತಿಗೆಗೆ ನೇಣುಕ ಕುಣಿಕೆಗಳಾಗಿ ವಿಕಟಟ್ಟಹಾಸ ಮಾಡುತ್ತಿವೆ. ಅಧಿಕಾರದ ಕುರ್ಚಿಗಳನ್ನು ಅಲುಗಾಡಿಸುತ್ತಿವೆ; ಸ್ಥಾನಮಾನವನ್ನು ಹರಾಜಿಗಿಟ್ಟಿವೆ.

ಅಮೆರಿಕದ ನ್ಯಾಯಾಂಗ ಇಲಾಖೆ ಜನವರಿ 30ರಂದು 30 ಲಕ್ಷ ಪುಟಗಳ ದಾಖಲೆಗಳನ್ನು ಬಿಡುಗಡೆ ಮಾಡಿದೆ. 38 ಸಾವಿರ ಫೈಲ್‌ಗಳಲ್ಲಿ ಅಮೆಇಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೆಸರಿದೆ. ಅಂದಹಾಗೆ, ಜೋಕ್ ಎಂದರೆ; ಟ್ರಂಪ್ ಎಪ್‌ಸ್ಟೀನ್ ಪರಮಾಪ್ತ. ದ್ವೀಪದ ಪಾರ್ಟಿಗಳಲ್ಲಿ ಟ್ರಂಪ್ ಪಾಲ್ಗೊಂಡಿರುವ ಬಗ್ಗೆ ಪುರಾವೆಗಳಿವೆ. ಬಿಲ್ ಕ್ಲಿಂಟನ್, ಚಾಮ್‌ಸ್ಕಿ, ಸ್ಟೀಫನ್ ಹಾಕಿಂಗ್, ಮೈಕೆಲ್ ಜಾಕ್ಸನ್, ಬಿಲ್ ಗೇಟ್ಸ್, ಎಲಾನ್ ಮಸ್ಕ್, ಜುಕರ್‌ಬರ್ಗ್, ಪ್ರಿನ್ಸ್ ಆಂಡ್ರ ಸೇರಿದಂತೆ ಎಪ್ ಸ್ಟೀನ್ ಫೈಲ್ಸ್‌ನಲ್ಲಿ ಸಾಕಷ್ಟು ಪ್ರಭಾವಿಗಳ ಹೆಸರುಗಳು ಕಾಣಿಸಿಕೊಂಡಿವೆ. ಆದರೆ, ಯಾರೂ ಯಾವುದೇ ಶಿಕ್ಷೆಯನ್ನು ಎದುರಿಸಿಲ್ಲ. ಆದಾಗ್ಯೂ, ಬ್ರಿಟನ್ ಪ್ರಧಾನಿ ಕೀರ್ ಸ್ಟಾರ್ಮರ್ ಕುರ್ಚಿಯನ್ನೇ ಅಲುಗಾಡಿಸುತ್ತಿದೆ. ಭಾರತ– ಇಸ್ರೇಲ್ ಸಂಬಂಧದ ಬಗ್ಗೆ ಕುತೂಹಲವಿದ್ದ ಜೆಪ್ರಿ, ಈ ಕುರಿತು 2017ರಲ್ಲಿ ಮಾಡಿದ್ದ ಇಮೇಲ್ ಸಾಕಷ್ಟು ಚರ್ಚೆಗಳನ್ನೂ ಹುಟ್ಟು ಹಾಕಿದೆ.

ಇಷ್ಟೆಲ್ಲಾ ಬಯಲಾಟ ಆಡಿದ್ದ ಈ ಕಾಮುಕನ ಬಗ್ಗೆ 2005ರಲ್ಲಿ ಫ್ಲೋರಿಡಾ 14 ವರ್ಷದ ತರುಣಿಯೊಬ್ಬಳ ತಾಯಿ, ಪೊಲೀಸರಿಗೆ ದೂರು ಕೊಡಲು ಬಂದಳು. ಎಪ್‌ಸ್ಟೀನ್ ವಿರುದ್ಧದ ಮೊದಲ ಕ್ರಿಮಿನಲ್ ಕೇಸ್ ಇದು. ಕೆಲವೇ ದಿನಗಳಲ್ಲಿ 50 ಅಪ್ರಾಪ್ತಯರು ಇಂಥದ್ದೇ ಆರೋಪಗಳೊಂದಿಗೆ ಪೊಲೀಸ್ ಠಾಣೆ ಮೆಟ್ಟಿಲೇರಿದ್ದರು. ತನಿಖೆಯ ಬೆನ್ನೇರಿದ ಪೊಲೀಸರು, ಜಗತ್ತಿನ ಗಣ್ಯಾತಿಗಣ್ಯರೇ ಇದರಲ್ಲಿ ಪಾಲ್ಗೊಂಡಿದ್ದನ್ನು ಕಂಡು ದಂಗಾಗಿ ಹೋಗಿದ್ದರು. ನಂತರ ನಡೆದದ್ದೇ ಇತಿಹಾಸ.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.

PRGI NO. 120927
(RNINO:KARKAN/2011/48371)